ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಕೆ.ಕೆ. ಶರ್ಮಾ
ಸಂಘಿ ಮಾಜಿ ಡಿಜಿಪಿ
ತ್ರಿಪುರಾಗೆ ಚುನಾವಣಾ ವೀಕ್ಷಕ!



ಸಂಪುಟ 13 | ಸಂಚಿಕೆ 14 | ಏಪ್ರಿಲ್ 1-7, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com

ಸಿಪಿಐಎಂ ಚುನಾವಣಾ ಪ್ರಣಾಳಿಕೆ ಬಿಡುಗಡೆ





ಚಿಕ್ಕಬಳ್ಳಾಪುರದಲ್ಲಿ ವರಲಕ್ಷ್ಮಿ ನಾಮಪತ್ರ ಸಲ್ಲಿಕೆ



ಹಿಂದುತ್ವ ಭಯೋತ್ಪಾದನೆ; ನಾಚಿಕೆಗೇಡಿನ ತೀರ್ಪು



ಮೈತ್ರಿಕೂಟದ ಪ್ರಯೋಗ ಯಶಸ್ವಿಯಾಗಲಿ

ಉಡುಪಿಯಲ್ಲಿ ಸರ್ವಜನೋತ್ಸವ

"ಮಿಶನ್ ಶಕ್ತಿ"ಯ ಸಾಧನೆಯ ಪ್ರಕಟಣೆ ಡಿ.ಆರ್.ಡಿ.ಒ. ಮುಖ್ಯಸ್ಥರ ಬದಲಿಗೆ ಪ್ರಧಾನಿಗಳಿಂದ! ಪ್ರಸಾರ ಭಾಷಣಕ್ಕೆ ಅನುಮತಿ ನೀಡಲಾಗಿತ್ತೇ?–ಚುನಾವಣಾ ಆಯೋಗಕ್ಕೆ ಯೆಚುರಿ ಪತ್ರ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮಾರ್ಚ್ 27 ರಂದು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಭಾರತ ಒಂದು ಜೀವಂತ ಉಪಗ್ರಹವನ್ನು ಹೊಡೆದುರುಳಿಸುವ ಉಪಗ್ರಹ–ವಿರೋಧಿ ಸಾಮರ್ಥ್ಯವನ್ನು ಪ್ರದರ್ಶಿಸಿದೆ ಎಂದು ಪ್ರಕಟಿಸಿದರು. ಇದಕ್ಕೆ ಮುಕ್ಕಾಲು ಗಂಟೆಯ ಮೊದಲು, "ಟೆಲಿವಿಶನ್, ರೇಡಿಯೋ ಅಥವ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವನ್ನು ವೀಕ್ಷಿಸಿ" ಎಂದು ಅವರೇ ಸ್ವತಃ ಟ್ವಿಟರ್ ನಲ್ಲಿ ಪ್ರಚಾರ ಮಾಡಿದ್ದರು!

ಸಾಮಾನ್ಯವಾಗಿ ಇಂತಹ ಮಿಶನ್ ನ್ನು ಸಾಧಿಸಿದಾಗ ಅದರ ಪ್ರಕಟಣೆಯನ್ನು ಸಂಬಂಧಪಟ್ಟ ವೈಜ್ಞಾನಿಕ–ತಾಂತ್ರಿಕ ಸಂಸ್ಥೆಯ ಪರವಾಗಿ ಮಾಡಲಾಗುತ್ತದೆ. 2012ರಲ್ಲಿ ಭಾರತ ಸಾಮರ್ಥ್ಯವನ್ನು ಗಳಿಸಿ ಕೊಂಡಾಗ ಅದನ್ನು ಡಿ.ಆರ್.ಡಿ.ಒ. ಮುಖ್ಯಸ್ಥರು ದೇಶಕ್ಕೆ ತಿಳಿಸಿದ್ದರು. ಈಗಲೂ ಈ ಮಿಶನ್‌ನ ಯಶಸ್ಸನ್ನು ಅವರೇ ದೇಶಕ್ಕೆ ತಿಳಿಸಬೇಕಾಗಿತ್ತು. ಆದರೆ ಪ್ರಧಾನಿಗಳು, ಅದೂ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ, ಇದಕ್ಕೆ ತಮ್ಮದೇ ಪ್ರಸಾರ ಭಾಷಣದ ದಾರಿ ಹಿಡಿದಿದ್ದಾರೆ

ಇದಕ್ಕೆ ಚುನಾವಣಾ ಆಯೋಗದ ಅನುಮತಿ ಪಡೆಯಲಾಗಿತ್ತೇ? ಆಯೋಗ ಇದನ್ನು ಪರಿಶೀಲಿಸಿ ಅನುಮತಿ ನೀಡಿತ್ತೇ? ಭಾರತೀಯ ವಿಜ್ಞಾನಿಗಳ ಸಾಧನೆಗಳಿಗೆ ಒಂದು ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ ರಾಜಕೀಯ ಬಣ್ಣ ಪಡೆಯುವುದಕ್ಕೆ ಚುನಾವಣಾ ಆಯೋಗ ಅನುಮತಿ ನೀಡಲು ವಿಶೇಷ ಕಾರಣಗಳೇನಾದರೂ ಇವೆಯೇ ಎಂದು ಇಡೀ ದೇಶ ತಿಳಿಯ ಬಯಸುತ್ತದೆ ಎಂದು ಈ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಆ ಪತ್ರದ ಪೂರ್ಣ ಒಕ್ಕಣಿಕೆ ಹೀಗಿದೆ:

"ನಮ್ಮ ವಿಜ್ಞಾನಿಗಳ ಮತ್ತೊಂದು ಸಾಧನೆಯ ಪ್ರಕಟಣೆಯನ್ನು ಪ್ರಧಾನ ಮಂತ್ರಿಗಳು ಈಗ ದೇಶದಲ್ಲಿ ನಡೆಯುತ್ತಿರುವ ಚುನಾವಣಾ ಪ್ರಚಾರದ ನಡುವೆ ರಾಷ್ಟ್ರವನ್ನುದ್ದೇಶಿಸಿದ ಒಂದು ಪ್ರಸಾರ ಭಾಷಣದ ಮೂಲಕ ಮಾಡಿರುವತ್ತ ತಮ್ಮ ಗಮನವನ್ನು ಸೆಳೆಯಲು ನಾನು ಈ ಪತ್ರವನ್ನು ಬರೆಯಬೇಕಾಗಿ ಬಂದಿದೆ.

ಮೊದಲಿಗೆ, ಸಿಪಿಐ(ಎಂ) ಭಾರತೀಯ ವಿಜ್ಞಾನಿಗಳ ಇನ್ನೊಂದು ಸಾಧನೆಯ ಬಗ್ಗೆ ಆಳವಾದ ಮೆಚ್ಚುಗೆಯ ಭಾವವನ್ನು ವ್ಯಕ್ತಪಡಿಸುತ್ತದೆ. ನಮ್ಮ ವಿಜ್ಞಾನಿಗಳು ಈ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವಲ್ಲಿ, ಪರೀಕ್ಷಿಸುವಲ್ಲಿ ಮತ್ತು ಒಂದು ಕೆಳಮಟ್ಟದಲ್ಲಿ ಭೂಮಿಯನ್ನು ಸುತ್ತುವ ಉಪಗ್ರಹದ ಮೇಲೆ ಗುರಿಯಿಡುವಲ್ಲಿ ಯಶಸ್ಸು ಪಡೆದಿದ್ದಾರೆ. ಭಾರತ ಈ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿದೆ ಎಂಬುದನ್ನು "ಡಿಫೆನ್ಸ್ ರಿಸರ್ಚ್ ಅಂಡ್ ಡೆವಲೆಪ್‌ಮೆಂಟ್ ಆರ್ಗೈನೇಸೇಷನ್"(ಡಿ.ಆರ್.ಡಿ.ಒ.–ರಕ್ಷಣಾ ಅಭಿವೃದ್ಧಿ ಮತ್ತು ಸಂಶೋಧನಾ ಸಂಘಟನೆ) ಮುಖ್ಯಸ್ಥರು 2012ರಲ್ಲಿ ಪ್ರಕಟಿಸಿದ್ದರು. ಭಾರತೀಯ ವಿಜ್ಞಾನಿಗಳು ಮುಂಬರುವ ದಿನಗಳಲ್ಲಿ ನಿಯಮಿತ ಚಲನೆಯ ಪಥದಲ್ಲಿರುವ ವಿರೋಧಿ ಉಪಗ್ರಹಗಳ ಮೇಲೂ ಗುರಿಯಿಡುವ ಇನ್ನೂ ಉನ್ನತ ಮಟ್ಟವನ್ನು ಖಂಡಿತ ತಲುಪುತ್ತಾರೆ ಎಂಬ ವಿಶ್ವಾಸ ನಮಗಿದೆ. ಈ ಸಾಧನೆಗಳಿಗೆ ದೇಶ ಹೆಮ್ಮೆ ಪಡುತ್ತದೆ. ನಮ್ಮ ವಿಜ್ಞಾನಿಗಳಿಗೆ ಅಭಿನಂದನೆಗಳು.

ಇಂತಹ ಮಿಶನ್ ಒಂದರ ಪ್ರಕಟಣೆಯನ್ನು ಸಾಮಾನ್ಯವಾಗಿ ದೇಶಕ್ಕೆ ಮತ್ತು ಜಗತ್ತಿಗೆ ಸಂಬಂಧಪಟ್ಟ ಡಿ.ಆರ್.ಡಿ.ಒ. ನಂತಹ ವೈಜ್ಞಾನಿಕ ಸಂಘಟನೆಗಳು ಮಾಡಬೇಕು. ಅದರ ಬದಲು, ಭಾರತದ ಪ್ರಧಾನ ಮಂತ್ರಿಗಳು ಇದನ್ನು ಪ್ರಕಟಿಸಲು ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುವ ದಾರಿಯನ್ನು ಹಿಡಿದಿದ್ದಾರೆ.

ಈ ಪ್ರಕಟಣೆ ದೇಶದಲ್ಲಿ ಈಗ ನಡೆಯುತ್ತಿರುವ ಚುನಾವಣಾ ಪ್ರಚಾರದ ನಡುವೆ, ಸ್ವತಃ ಪ್ರಧಾನ ಮಂತ್ರಿಗಳೂ ಒಬ್ಬ ಅಭ್ಯರ್ಥಿಯಾಗಿರುವಾಗ, ಬರುತ್ತಿದೆ. ಇದು ಸ್ಪಷ್ಟವಾಗಿಯೂ ಮಾದರಿ ನೀತಿ ಸಂಹಿತೆಯ ಒಂದು ಉಲ್ಲಂಘನೆಯಾಗಿದೆ.

ಪ್ರಧಾನ ಮಂತ್ರಿಗಳು ಇಂತಹ ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುವ ಬಗ್ಗೆ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ನೀಡಲಾಗಿತ್ತೇ, ಮತ್ತು ಚುನಾವಣಾ ಆಯೋಗ ಪ್ರಧಾನ ಮಂತ್ರಿಗಳಿಂದ ಇಂತಹ ಒಂದು ರಾಷ್ಟ್ರವನ್ನುನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುವುದನ್ನು ಪರಿಶೀಲಿಸಿ, ಅದಕ್ಕೆ ಅನುಮತಿಯನ್ನು ನೀಡಿದೆಯೇ ಎಂದು ನಾನು ತಿಳಿಯ ಬಯಸುತ್ತೇನೆ.

ಭಾರತೀಯ ವಿಜ್ಞಾನಿಗಳ ಸಾಧನೆಗಳಿಗೆ ಒಂದು ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ ರಾಜಕೀಯ ಬಣ್ಣ ಪಡೆಯುವುದಕ್ಕೆ ಚುನಾವಣಾ ಆಯೋಗ ಅನುಮತಿ ನೀಡಲು ಇರುವ ವಿಶೇಷ ಕಾರಣಗಳ ಬಗ್ಗೆ ಇಡೀ ದೇಶ ತಿಳಿಯ ಬಯಸುತ್ತದೆ ಎಂದು ನಾನು ಖಂಡಿತವಾಗಿಯೂ ಹೇಳಬಲ್ಲೆ."



ಸಾಹಿತಿ ಮತ್ತು ಹೋರಾಟಗಾರ್ತಿ ರಮಣೀಕಾ ಗುಪ್ತ ನಿಧನ

ಝಾರ್ಖಂಡ್‌ನ ಕಲ್ಲಿದ್ದಲು ಕಾರ್ಮಿಕರ ಹಿರಿಯ ಮುಖಂಡರೂ, ಸಾಹಿತಿ ಮತ್ತು ಪ್ರಕಾಶಕರೂ ಆಗಿದ್ದ ರಮಣೀಕಾ ಗುಪ್ತ ಮಾರ್ಚ್ 26ರಂದು ನಿಧನರಾಗಿದ್ದಾರೆ.

ರಮಣೀಕಾ ಅವರು ಧನ್‌ಬಾದ್ ಮತ್ತು ಹಜಾರಿಬಾಗ್ ಜಿಲ್ಲೆಗಳಲ್ಲಿ ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣದ ಹಿಂದಿನ ದಿನಗಳಲ್ಲಿ ಕಾರ್ಮಿಕರ ಶೋಷಣೆಯ ವಿರುದ್ಧ ಅವಿಶ್ರಾಂತ ಹೋರಾಟ ನಡೆಸಿದರು, ಇದರಿಂದಾಗಿ ಹಲವು ಬಾರಿ ಮಾಫಿಯಾ ಹಲ್ಲೆಗಳನ್ನೂ ಎದುರಿಸಿದ್ದರು.

ಸಿಪಿಐ(ಎಂ)ನ ಝಾರ್ಖಂಡ್ ರಾಜ್ಯ ಸಮಿತಿಯ ಮಾಜಿ ಸದಸ್ಯರೂ ಆಗಿದ್ದ ಇವರು ಅವಿಭಜಿತ ಬಿಹಾರಿನ ಮಂಡು ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿಯೂ ಆಯ್ಕೆಯಾಗಿದ್ದರು.

ಪ್ರಸಿದ್ಧ ಸಾಹಿತಿಯೂ ಆಗಿದ್ದ ಅವರು ಸ್ವತಃ ಆದಿವಾಸಿಗಳು ಮತ್ತು ದಲಿತರ ನೋವುಗಳಿಗೆ ದನಿ ನೀಡಿದ್ದರಲ್ಲದೆ, ಆದಿವಾಸಿ ಲೇಖಕರು ಮತ್ತು ಸಂಸ್ಕೃತಿಗೆ ಉತ್ತೇಜನೆ ನೀಡುವಲ್ಲಿ ಮಹತ್ವದ ಪಾತ್ರ ವಹಿಸಿದರು, ಆದಿವಾಸಿ ಸಾಹಿತ್ಯದ ಶ್ರೀಮಂತಿಕೆಯನ್ನು ಮುಖ್ಯಧಾರೆಗೆ ತರುವಲ್ಲಿ ಅವರು ಪಥಪ್ರದರ್ಶಕ ಪಾತ್ರವನ್ನು ವಹಿಸಿದರು ಎಂದು ಪರಿಗಣಿಸಲಾಗಿದೆ.

ಪಶ್ಚಿಮ ಬಂಗಾಲದಲ್ಲಿ ಚುನಾವಣೆಗೆ ವಿಶೇಷ ಪೋಲೀಸ್ ವೀಕ್ಷಕರಾಗಿ ಆರೆಸ್ಸೆಸ್ ಹಿತೈಷಿಯ ನೇಮಕ ಅತ್ಯಂತ ಆತಂಕಕಾರಿ–ಚುನಾವಣಾ ಆಯೋಗಕ್ಕೆ ನೀಲೋತ್ಪಲ ಬಸು ಪತ್ರ

ಚುನಾವಣಾ ಆಯೋಗ ಪಶ್ಚಿಮ ಬಂಗಾಲ ಮತ್ತು ಝಾರ್ಖಂಡ್‌ಗೆ ವಿಶೇಷ ಪೋಲೀಸ್ ವೀಕ್ಷಕರಾಗಿ ಬಿ.ಎಸ್.ಎಫ್.ನ ಈಗ ನಿವೃತ್ತರಾಗಿರುವ ಮಹಾ ನಿರ್ದೇಶಕ ಕೆ.ಕೆ.ಶರ್ಮಾ ಅವರನ್ನು ನೇಮಿಸಿರುವುದು ಅತ್ಯಂತ ಆತಂಕಕಾರಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಹೇಳಿದ್ದಾರೆ. ಅವರು ಈ ಕುರಿತು ಮುಖ್ಯ ಚುನಾವಣಾ ಆಯುಕ್ತರಿಗೆ ಮಾರ್ಚ್ 27 ರಂದು ಬರೆದ ಪತ್ರದಲ್ಲಿ ಈ ಬಗ್ಗೆ ಪುನರಾಲೋಚನೆ ನಡೆಸಬೇಕು ಮತ್ತು ಈ ನೇಮಕವನ್ನು ತಕ್ಷಣವೇ ರದ್ದು ಪಡಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

'ಸೀಮಾಂತ ಚೇತನಾ ಮಂಚ್' ಎಂಬ ಒಂದು ಸಂಘಟನೆ ಕೊಲ್ಕತಾದಲ್ಲಿ ಏರ್ಪಡಿಸಿದ್ದ ಎರಡು ದಿನಗಳ



ಕಾರ್ಯಕ್ರಮವೊಂದರಲ್ಲಿ ಈ ವ್ಯಕ್ತಿ ಭಾಗವಹಿಸಿದ್ದ ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿದೆ.

ಈ ಸಂಘಟನೆ ದೇಶದ ಗಡಿಪ್ರದೇಶಗಳಲ್ಲಿ 'ದೇಶಪ್ರೇಮ'ವನ್ನು ತುಂಬಲೆಂದು ರಚಿಸಿರುವ ರೆಸ್ಸೆಸ್ ಬೆಂಬಲಿತ "ಸೀಮಾ ಜಾಗರಣ ಮಂಚ್" ಎಂಬ ಸಂಘಟನೆಯ ಭಾಗವಾಗಿದೆ.

ಆದ್ದರಿಂದ ಚುನಾವಣಾ ಆಯೋಗದ ನೇಮಕ ಅತ್ಯಂತ ಪ್ರಶ್ನಾರ್ಹವಾಗಿದೆ, ಇದು ರಾಜಕೀಯ ಪಕ್ಷಪಾತದ ಪ್ರಶ್ನೆಯನ್ನು ಎತ್ತುತ್ತದೆ. ಆದ್ದರಿಂದು ಆಯೋಗ ಬಗ್ಗೆ ಮರು ಪರಿಶೀಲನೆ ನಡೆಸಬೇಕು ಮತ್ತು ನೇಮಕವನ್ನು ತಕ್ಷಣವೇ ರದ್ದು ಮಾಡಬೇಕು ಎಂದು ಆಗ್ರಹಿಸಲಾಗಿದೆ.

ಕೆ.ಕೆ. ಶರ್ಮಾರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರ ಫೋಟೋವನ್ನು ಚುನಾವಣಾ ಆಯೋಗಕ್ಕೆ ಕಳಿಸಿದ ಪತ್ರಕ್ಕೆ ಲಗತ್ತಿಸಲಾಗಿದೆ.

ತ್ರಿಪುರಾ ಮುಖ್ಯಮಂತ್ರಿಯ ಬೆದರಿಕೆಯ ಭಾಷಣ–ತುರ್ತು ಕ್ರಮಕ್ಕೆ ಆಗ್ರಹ

ಈ ಪತ್ರದಲ್ಲಿ ನೀಲೋತ್ಪಲ ಬಸು ಅವರು ತ್ರಿಪುರಾದ ಬಿಜೆಪಿ ಮುಖ್ಯಮಂತ್ರಿ ಬಿಪ್ಲಬ್ ದೇಬ್ ಭಾಷಣದ ಅಂಶವನ್ನೂ ಚುನಾವಣಾ ಆಯೋಗದ ಗಮನಕ್ಕೆ ತಂದಿದ್ದಾರೆ. ತ್ರಿಪುರಾದ ಎರಡು ಲೋಕಸಭಾ ಕ್ಷೇತ್ರಗಳ ಚುನಾವಣೆಗಳು ಈ ಬಾರಿ ಹಿಂದಿನದಕ್ಕಿಂತ ಭಿನ್ನವಾಗಿರುತ್ತವೆ ಎನ್ನುತ್ತ, ಸಾಮಾನ್ಯ ಚುನಾವಣಾ ವಿಧಾನವನ್ನು ಬುಡಮೇಲು ಮಾಡುವ ಬೆದರಿಕೆಯ ಸೂಚನೆ ನೀಡಿದ್ದಾರೆ. ತಾನು ಕೇವಲ ಹುಮ್ಮಸ್ಸಿನಿಂದ ಈ ಮಾತು ಹೇಳುತ್ತಿಲ್ಲ, ಸಂಪೂರ್ಣ ಪ್ರಜ್ಞೆಯಿಂದಲೇ ಹೇಳುತ್ತಿದ್ದೇನೆ ಎಂದು ಅವರು ಈ ಬೆದರಿಕೆಗೆ ಇನ್ನಷ್ಟು ಒತ್ತು ನೀಡಿದ್ದಾರೆ. ಇದು ಅವರ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡು ಒಂದು ಮುಕ್ತ, ನ್ಯಾಯಯುತ ಮತ್ತು ಶಾಂತಿಯುತ ಮತದಾನಕ್ಕೆ ಬೆದರಿಕೆ ಒಡ್ಡುವ ಒಂದು ಸ್ಪಷ್ಟ ಉಲ್ಲಂಘನೆಯಾಗಿದೆ, ಅದನ್ನು ತಡೆಯಲು ಚುನಾವಣಾ ಆಯೋಗದಿಂದ ತುರ್ತಾದ ಸರಿಪಡಿಕೆ ಕ್ರಮಗಳ ಅಗತ್ಯವಿದೆ ಎಂದು ನೀಲೋತ್ಪಲ ಬಸು ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. ಈ ಭಾಷಣದ ವೀಡಿಯೋ ಸಾಕ್ಷಿಯನ್ನೂ ಆಯೋಗಕ್ಕೆ ಒದಗಿಸಲಾಗಿದೆ.

ಆಹಾರ ಭದ್ರತೆಯ ಸಭೆಯಲ್ಲಿ ಭಾಗವಹಿಸಿದ ಅರ್ಥಶಾಸ್ತ್ರಜ್ಞ ಜೀನ್‌ಡ್ರೀಝ್ ಬಂಧನ–ಎಐಎಡಬ್ಲ್ಯುಯು ಖಂಡನೆ

ಪ್ರಖ್ಯಾತ ಅರ್ಥಶಾಸ್ತ್ರಜ್ಞ ಜೀನ್ ಡ್ರೀಝ್ ಅವರನ್ನು ಮತ್ತು ಅವರ ಇಬ್ಬರು ಜತೆಗಾರರನ್ನು ಮಾರ್ಚ್ 28ರಂದು ಝಾರ್ಖಂಡ್ ಪೋಲೀಸರು ಬಂಧಿಸಿರುವುದನ್ನು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ (ಎಐಎಡಬ್ಲ್ಯುಯು)ಖಂಡಿಸಿದೆ. ಅವರು ಪಶ್ಚಿಮ ಝಾರ್ಖಂಡ್‌ನ ಬಿಷ್ಣುಪುರದಲ್ಲಿ ಆಹಾರ ಭದ್ರತೆ ಕುರಿತ ಒಂದು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲು ಹೋಗಿದ್ದರು. ಅವರು ಭಾಗವಹಿಸಿದ್ದ ಸಭೆಗೆ ಅನುಮತಿ ಪಡೆದಿರಲಿಲ್ಲ ಎಂಬುದು ಪೋಲೀಸರು ಕೊಟ್ಟಿರುವ ಕಾರಣ, ಆದರೆ ಈ ಸಭೆಯ ಸಂಘಟಕರು ಹತ್ತು ದಿನಗಳ ಹಿಂದೆಯೇ ಅನುಮತಿಗೆ ಅರ್ಜಿ ಸಲ್ಲಿಸಿದ್ದು, ಅನುಮತಿ ಬಗ್ಗೆ ಅವರಿಗೆ ತಿಳಿಸಲಿಲ್ಲ, ನಿರಾಕರಿಸಲೂ ಇಲ್ಲ ಎಂದು ಹೇಳಲಾಗಿದೆ.

ಪೋಲೀಸರು ಡ್ರೀಝ್ ಮತ್ತು ಅವರ ಸಹಯೋಗಿಗಳು ಈ ನಾಚಿಕೆಹೀನ ಕೃತ್ಯದಲ್ಲಿ ಸ್ಥಳೀಯ ಬಿಜೆಪಿ ಲೋಕಸಭಾ ಅಭ್ಯರ್ಥಿ ಮತ್ತು ಝಾರ್ಖಂಡ್ ಆಡಳಿತದ ತಪ್ಪೇನೂ ಇಲ್ಲ ಎನ್ನುವ ಒಂದು ದಸ್ತಾವೇಜಿಗೆ ಸಹಿ ಹಾಕಬೇಕು ಎಂದು ಒತ್ತಡ ಹಾಕಿದರು, ಆದರೆ ಇವರು ಮೂವರೂ ನಿರಾಕರಿಸಿದರು, ಕೊನೆಗೆ ಯಾವ ಆರೋಪವನ್ನೂ ಹಾಕದೆ ಅವರನ್ನು ಬಿಡಬೇಕಾಗಿ ಬಂತು.

ಇಂತಹ ಸರಕಾರೀ ಭ್ರಂಯೋತ್ಪಾದನೆ ಖಂಡನೀಯ, ಮುಖ್ಯ ಚುನಾವಣಾ ಆಯುಕ್ತರು ಬಿಜೆಪಿ ಆಡಳಿತದ ಬೆದರಿಕೆ ಪ್ರಯತ್ನಗಳನ್ನು ಗಮನಕ್ಕೆ ತಗೊಳ್ಳಬೇಕು ಎಂದಿರುವ ಎಐಎಡಬ್ಲ್ಯುಯು, ದೇಶದ ಇತರೆಡೆಗಳಲ್ಲೂ ಕೈಗೊಳ್ಳಲಾಗುತ್ತಿರುವ ಇಂತಹ ಕರಾಳ ಕ್ರಮಗಳನ್ನು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತರಬೇಕು ಎಂದು ತನ್ನ ಘಟಕಗಳಿಗೆ ಕರೆ ನೀಡಿದೆ.

ಜೀನ್ ಡ್ರೀಝ್ ಈ ಹಿಂದೆ ಯು.ಪಿ.ಎ. ಸರಕಾರ ರಚಿಸಿದ್ದ ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯರಾಗಿದ್ದು ರೇಗ ಕಾಯ್ದೆಯನ್ನು ರೂಪಿಸುವಲ್ಲಿ ಮತ್ತು ಅದರ ಸರಿಯಾದ ಜಾರಿಗೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಮತ್ತು ಇತರ ಉದ್ಯೋಗ ಹಕ್ಕಿಗೆ ಹೋರಾಡುತ್ತಿರುವ ಸಂಘನೆಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡವರು.

ಮೋದಿ ಜೀವನ ಚಿತ್ರ ಒಂದು ಪ್ರಚಾರ ಚಿತ್ರ–ಅದರ ಪ್ರದರ್ಶನವನ್ನು ಚುನಾವಣೆ ಅವಧಿಯಲ್ಲಿ ನಿಲ್ಲಿಸಬೇಕು –ಚುನಾವಣಾ ಆಯೋಗಕ್ಕೆ ಎಡಪಕ್ಷಗಳ ನಿಯೋಗದ ಆಗ್ರಹ

ಸಿಪಿಐ(ಎಂ) ಮತ್ತು ಸಿಪಿಐ ನ ಜಂಟಿ ನಿಯೋಗವೊಂದು ಮಾರ್ಚ್ 25 ರಂದು ಪೂರ್ಣ ಚುನಾವಣಾ ಆಯೋಗವನ್ನು ಭೇಟಿ ಮಾಡಿ ಈ ಕೆಳಗಿನ ಜ್ವಲಂತ ಪ್ರಶ್ನೆಗಳನ್ನು ಆಯುಕ್ತರುಗಳ ಮುಂದೆ ಎತ್ತಿತು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಮತ್ತು ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಈ ನಿಯೋಗದ ಮುಖಂಡತ್ವ ವಹಿಸಿದ್ದರು.

ನರೇಂದ್ರ ಮೋದಿಯವರ ಜೀವನ ಕುರಿತಾದ ಚಲನಚಿತ್ರವೊಂದನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿದು ಬಂದಿದೆ. ಈ ಚಿತ್ರದ ಬಿಡುಗಡೆಯ ಬಗ್ಗೆ ಎಡಪಕ್ಷಗಳ ನಿಯೋಗ ಚುನಾವಣಾ ಆಯುಕ್ತರುಗಳೊಂದಿಗೆ ವಿವರವಾದ ಚರ್ಚೆ ನಡೆಸಿತು. ಈ ಹಿಂದೆ ಚುನಾವಣೆಗಳು ನಡೆಯುವಾಗ ಅಭ್ಯರ್ಥಿಗಳನ್ನು ಒಳಗೊಂಡ ಚಿತ್ರಗಳ ಪ್ರದರ್ಶನಗಳ ಬಗ್ಗೆ ಚುನಾವಣಾ ಆಯೋಗದ ಕ್ರಮಗಳ ಹಲವಾರು ಸ್ಪಷ್ಟ ದಾಖಲೆಗಳಿವೆ. ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಮೋದಿ ಚಿತ್ರದ ಇಣುಕು ವಿಮರ್ಶೆಗಳನ್ನು ನೋಡಿದರೆ ಇದೊಂದು ಪ್ರಚಾರದ ಚಿತ್ರ ಎಂದು ಸ್ಪಷ್ಟವಾಗಿ ಕಾಣುತ್ತದೆ. ಚಿತ್ರವನ್ನು

ಪುಟ 7 ನೋಡಿ

ಸಂಪಾದಕೀಯ

ಕರ್ನಾಟಕದ ಜಾತ್ಯಾತೀತ ಮೈತ್ರಿ ಕೂಟದ ಪ್ರಯೋಗ ಯಶಸ್ವಿಯಾಗಲಿ

ಕರ್ನಾಟಕ ರಾಜ್ಯದಲ್ಲಿ ಕಳೆದ ವಿಧಾನ ಸಭಾ ಚುನಾವಣೆಗಳ ನಂತರ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಒಂದು ಜಾತ್ಯಾತೀತ ಸರ್ಕಾರ ಅಸ್ತಿತ್ವಕ್ಕೆ ಬರಬಹುದು ಎಂದು ಯಾರೂ ಊಹಿಸಿರಲಿಲ್ಲ. ಅದರ ಕೀರ್ತಿ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ಸಲ್ಲುತ್ತದೆ. ಸ್ವಲ್ಪ ವಿಳಂಬವಾಗಿದ್ದರೆ ಪರಿಸ್ಥಿತಿ ಬೇರೆಯೇ ತಿರುವು ಪಡೆಯುತಿತ್ತು. ಕೋಮುವಾದಿ ಬಿಜೆಪಿ ಪಕ್ಷಕ್ಕೆ ಒಳನುಸುಳಲು ಅವಕಾಶ ದೊರೆಯಲಿಲ್ಲ. ಬಿಜೆಪಿಯೂ ಸಹ ಒಂದು ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮುವಂತಾದರೂ, ಅದಕ್ಕೆ ಮಧ್ಯಪ್ರದೇಶ ಮಾಡಲು ಅವಕಾಶ ದೊರೆಯಲಿಲ್ಲ. ಕಾಂಗ್ರೆಸ್ ಪಕ್ಷ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಉದ್ದೇಶದಿಂದ ಅತ್ಯಂತ ಸಣ್ಣ ಪಕ್ಷವಾದ ಜೆಡಿಎಸ್ ಪಕ್ಷಕ್ಕೆ ಮೈತ್ರಿ ಹಸ್ತವನ್ನು ಚಾಚಿ, ಮುಖ್ಯಮಂತ್ರಿ ಸ್ಥಾನವನ್ನು ತ್ಯಾಗಮಾಡಿ ಜೆಡಿಎಸ್ ನ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಅದು ಯಶಸ್ವಿಯಾಯಿತು. ಅನೇಕ ಆಂತರಿಕ ಹಾಗೂ ಬಾಹ್ಯ ತೊಡಕುಗಳು ಎದುರಾದರೂ ಕಾಂಗ್ರೆಸ್–ಜೆಡಿಎಸ್ ಸರ್ಕಾರ ಅಧಿಕಾರದಲ್ಲಿ ಮುಂದುವರೆದಿದೆ. ಅಷ್ಟರ ಮಟ್ಟಿಗೆ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವಲ್ಲಿ ಯಶಸ್ವಿಯಾಗಿದೆ.

ಬಿಜೆಪಿ ಎಂಬ ಪಕ್ಷ, ದೇಶದ ಬಂಡವಾಳಗಾರರು ಮತ್ತು ಜಮಿನ್ದಾರರು ಬೆಂಬಲಿಸುವ ಕೋಮುವಾದಿ ಪಕ್ಷವಾಗಿದೆ. ಬಂಡವಾಳಗಾರರು ಮತ್ತು ಪಾಳೆಗಾರರ ಜಂಟಿ ಪ್ರಭುತ್ವಕ್ಕೆ ಜನರ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಸಾಧ್ಯವಾಗದು. ಆಗ ಜನರ ಅತೃಪ್ತಿ ತೀವ್ರಗೊಂಡು ಅದು ಅನೇಕ ರೀತಿಯ ಹೋರಾಟಗಳಾಗಿ ಸ್ಫೋಟಗೊಳ್ಳುವುದು. ಜನರ ಪ್ರತಿರೋಧವನ್ನು ಛಿದ್ರಗೊಳಿಸಲು, ಅವರ ಗಮನವನ್ನು ಬೇರೆ ಕಡೆ ಸೆಳೆಯಲು ಈ ಆಳುವ ವರ್ಗಗಳ ಕೂಟ ಕೋಮುವಾದ, ಕೋಮು ಗಲಭೆ, ಕೋಮು ದಳ್ಳುರಿಯನ್ನು ಬಡಿಗೆಬ್ಬಿಸಲಾಗುವುದು. ಬಿಜೆಪಿ ಇದಕ್ಕಾಗಿ ಹೇಳಿ ಮಾಡಿಸಿದ ಪಕ್ಷ. ಕರ್ನಾಟಕದಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಲು ಸಾಧ್ಯವಾಗಿರುವುದು ಒಂದು ಸಾಧನೆಯೇ ಆಗಿದೆ.

ರಾಜ್ಯದ ಮುಗ್ಧ ಜನತೆ ಕೋಮುವಾದಿ ಬಿಜೆಪಿ ಪಕ್ಷದ ಅಪಾಯವನ್ನು ಇನ್ನೂ ಸರಿಯಾಗಿ ಮನಗಾಣದಿರುವುದು ಒಂದು ದುರಂತವೇ ಆಗಿದೆ. ಮೋದಿ ಆಡಳಿತದಲ್ಲಿ ಅದು ಸಾಬೀತಾಗಿದೆ. ಅದು ಬಡಿದೆಬ್ಬಿಸುತ್ತಿರುವ ಯುದ್ಧೋನ್ಮಾದದಿಂದ ಭಯೋತ್ಪಾದಕರಿಂದ ದೇಶ ಮೇಲಿನ ದಾಳಿಗಳು ಹೆಚ್ಚಾಗಿವೆ. ಅದು ಮಂದಿರ–ಮಸೀದಿ ವಿವಾದದ ಮೂಲಕ, ಗೋ ರಕ್ಷಣೆಯ ಹೆಸರಿನಲ್ಲಿ, ಗಲಭೆಗಳನ್ನು ಪ್ರಚೋದಿಸಿ ಅವರ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತದೆ.

ದೇಶವನ್ನು ಇಂದು ತೀವ್ರವಾಗಿ ಬಾಧಿಸುತ್ತಿರುವ ಬಡತನ, ನಿರುದ್ಯೋಗದಂತಹ ಮೂಲಭೂತ ಸಮಸ್ಯೆಗಳಿಗೆ ಒಂದು ಕೋಮುವಾದಿ ಪಕ್ಷ ಪರಿಹಾರ ಒದಗಿಸಲಾರದು ಎಂಬುದು 5 ವರ್ಷಗಳ ಮೋದಿ ಆಡಳಿತ ಸಾಬೀತು ಪಡಿಸಿದೆ. ಕೃಷಿ ಬಿಕ್ಕಟ್ಟಿಗೆ ಪರಿಹಾರ ಒದಗಿಸಲು ಮೋದಿ ಸರ್ಕಾರ ಪ್ರಯತ್ನ ಪಡಲಿಲ್ಲ. ರೈತರ ಫಸಲಿಗೆ ನ್ಯಾಯವಾದ ಬೆಲೆ ಒದಗಿಸಲಿಲ್ಲ. ರೈತರ ಸಾಲ ಮನ್ನಾ ಮಾಡಲು ಮುಂದಾಗಲಿಲ್ಲ. ಕೊಟ್ಟ ಭರವಸೆಗಳನ್ನು ಈಡೇರಿಸಲಿಲ್ಲ. ವಿದೇಶಗಳಲ್ಲಿ ಬಚ್ಚಿಡಲಾದ ಕಪ್ಪು ಹಣವನ್ನು ವಾಪಸ್ ತರಲಿಲ್ಲ. ಉದ್ಯೋಗಗಳನ್ನು ಸೃಷ್ಟಿಸಿ, ದೇಶದ ನೈಜ ಅಭಿವೃದ್ಧಿಯ ಬಾಗಿಲನ್ನು ತೆರೆಯಲಿಲ್ಲ. ಬೆಲೆ ಏರಿಕೆ ತಡೆಗಟ್ಟಲಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ಅಗತ್ಯ ಅನುದಾನ ಬಿಡುಗಡೆ ಮಾಡದೆ ಗ್ರಾಮೀಣ ಕೆಲಸಗಾರರಿಗೆ ನೆಮ್ಮದಿಯನ್ನು ಒದಗಿಸಲಿಲ್ಲ. ಇದರ ಬದಲಾಗಿ ಅಲ್ಪಸಂಖ್ಯಾತರ, ದಲಿತರ, ಆದಿವಾಸಿಗಳ ಹಾಗೂ ಮಹಿಳೆಯರ ಮೇಲೆ ದಾಳಿಗಳು ಈ ಅವಧಿಯಲ್ಲಿ ಹೆಚ್ಚಾಗಿವೆ.

ಕೋಮುವಾದ ಜನತೆಯ ಐಕ್ಯತೆಯನ್ನು ನಾಶಮಾಡುತ್ತದೆ. ಪರಸ್ಪರ ದ್ವೇಷ, ಸಂಶಯ, ಸಂದೇಹವನ್ನು ಹೆಚ್ಚಿಸುತ್ತದೆ. ಕೋಮುವಾದ ಗಲಭೆಗಳನ್ನು ಪ್ರಚೋದಿಸುತ್ತದೆ. ಉತ್ಪಾದನೆಯನ್ನು ಕುಂಠಿತಗೊಳಿಸುತ್ತದೆ. ನಿತ್ಯದ ದುಡಿಮೆಯಿಂದ ಬದುಕುತ್ತಿರುವವರಿಗೆ ಕೋಮುವಾದ ಬಹು ದೊಡ್ಡ ಶತ್ರು. ಕರ್ನಾಟಕದಲ್ಲಿ ಈ ಸಲ ಕೋಮುವಾದಿ ಬಿಜೆಪಿಗೆ ಅಧಿಕಾರದಿಂದ ದೂರ ಇಡಲು ಸಾಧ್ಯವಾಗಿರುವುದು ಹೆಮ್ಮೆಯ ವಿಷಯ. ಕರ್ನಾಟಕದ ಈ ಸಮ್ಮಿಶ್ರ ಸರ್ಕಾರದ ಪ್ರಯೋಗ ಇಡೀ ದೇಶಕ್ಕೆ ಮಾದರಿಯಾಗಿದೆ.

ಕರ್ನಾಟಕದ ಈ ಪ್ರಯೋಗ ಬಲಗೊಳ್ಳಬೇಕಾಗಿದೆ. ಅದರ ಅಸ್ತಿತ್ವವನ್ನು ಉಳಿಸಬೇಕಾದರೆ. ಆದರೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ಕೆಲವು ಶಾಸಕರಿಗೆ ಮತ್ತು ನಾಯಕರಿಗೆ ಈ ಮೈತ್ರಿ ಸರ್ಕಾರದ ಮಹತ್ವ ಅರ್ಥವಾಗದಿರುವುದು ವಿಷಾದದ ಸಂಗತಿ. ಅಧಿಕಾರಕ್ಕಾಗಿ ಹಪಾಹಪಿಸುತ್ತಿರುವ ಇವರಿಗೆ ಈ ಜಾತ್ಯಾತೀತ ಮೈತ್ರಿ ಸರ್ಕಾರವನ್ನು ಉಳಿಸಿ ಬಲಪಡಿಸಬೇಕೆಂಬ ಕಾಳಜಿ ಇಲ್ಲದಿರುವುದು ಖೇದದ ಸಂಗತಿ.

ಬಿಜೆಪಿ ಮಾತ್ರ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಭದ್ರಪಡಿಸಿ ಕೊಳ್ಳಲು ಭಾರೀ ಶ್ರಮ ಪಡುತ್ತಿದೆ. ಹಣ ಬಲ, ಜಾತಿ ಬಲ ದೊಡ್ಡದಾಗಿ ಬಳಸಿಕೊಳ್ಳುತ್ತದೆ. ಕಾರ್ಪೊರೇಟ್ ಕಂಪನಿಗಳು ಪ್ರತಿ ಚುನಾವಣೆಯಲ್ಲಿ ಭಾರೀ ಪ್ರಮಾಣದಲ್ಲಿ ಹಣವನ್ನು ಒದಗಿಸುತ್ತವೆ. ಆರೆಸ್ಸೆಸ್ ತನ್ನ ಅಸಂಖ್ಯಾತ ಸ್ವಯಂಸೇವಕರನ್ನು ಪ್ರಚಾರದ ಕೆಲಸಕ್ಕೆ ಬಳಸುತ್ತದೆ. ಸಾಮಾಜಿಕ ಜಾಲತಾಣದ ಬಳಕೆಯಲ್ಲಿ ಅದು ಮುಂಚೂಣಿಯಲ್ಲಿದೆ. ಮಾಧ್ಯಮಗಳು ಬೃಹತ್ ಪ್ರಮಾಣದಲ್ಲಿ ಅದರ ಸೇವೆಯಲ್ಲಿ ತೊಡಗಿವೆ. ಕುದುರೆ ವ್ಯಾಪಾರ, ಆಪರೇಷನ್ ಕಮಲದಂತಹ ಕಾನೂನು ಬಾಹಿರ ಕ್ರಮಗಳನ್ನು ಬಳಸಿಕೊಳ್ಳುವುದರಲ್ಲಿ ಅವರದ್ದು ಎತ್ತಿದ ಕೈ.

ಮಂಡ್ಯ ಜಾತ್ಯಾತೀತ ಶಕ್ತಿಗಳಿಗೆ ಮಾನ್ಯತೆ ನೀಡುವ ಜಿಲ್ಲೆಯಾಗಿತ್ತು. ಕೋಮುವಾದಿ ಬಿಜೆಪಿಗೆ ಅಲ್ಲಿ ನೆಲೆ ಇರಲಿಲ್ಲ. ಈಗ ಬಿಜೆಪಿ ಸ್ವತಂತ್ರ ಅಭ್ಯರ್ಥಿ ಸುಮಲತಾ ಅವರಿಗೆ ಬೆಂಬಲ ಕೊಡುವ ಮೂಲಕ ಜಿಲ್ಲೆಯಲ್ಲಿ ಕೋಮುವಾದಿ ವಿಷಬೀಜಗಳನ್ನು ಬಿತ್ತಲಾಗುತ್ತಿದೆ. ಒಂದು ಜಾತ್ಯಾತೀತ ಹಿನ್ನೆಲೆಯನ್ನು ಕೊನೆಯ ವರೆಗೂ ಹೊಂದಿದ್ದ ಖ್ಯಾತ ಚಲನಚಿತ್ರ ನಟ ಅಂಬರೀಷ ಅವರ ಮಡದಿಯಾಗಿದ್ದು ಕೋಮುವಾದಿ ಬಿಜೆಪಿಯ ಬೆಂಬಲವನ್ನು ಸ್ವಾಗತಿಸಿದ್ದು ಬೇಸರದ ವಿಷಯ.

ನಮ್ಮ ಎದುರಿನಲ್ಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಸಾಧ್ಯವಾದರೆ ಅದು ರಾಜ್ಯದಲ್ಲಿ ಜಾತ್ಯಾತೀತ ಮೈತ್ರಿ ಸರ್ಕಾರವನ್ನು ಬಲಪಡಿಸಲು ಪೂರಕವಾಗಲಿದೆ. ಅದು ಇಡೀ ದೇಶಕ್ಕೆ ಮಾದರಿಯಾಗಲಿದೆ. ಕೇಂದ್ರದಲ್ಲಿಯೂ ಒಂದು ಜಾತ್ಯಾತೀತ ಸರ್ಕಾರ ಅಸ್ತಿತ್ವಕ್ಕೆ ಬರಲು ನೆರವಾಗಲಿದೆ. ●



‘ರೈತ ವಿರೋಧಿ ಬಿಜೆಪಿ ಸರ್ಕಾರ ಸೋಲಿಸಿ’

ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ರವರು ದಾವಣಗೆರೆ ನಗರದ ರೋಟರಿ ಬಾಲಭವನದಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತ ಪ್ರಧಾನಿ ನರೇಂದ್ರ ಮೋದಿ ಕಳೆದ ಚುನಾವಣೆಯಲ್ಲಿ ನೀಡಿದ್ದ ಭರವಸೆ 5 ವರ್ಷ ಕಳೆದರೂ ಒಂದೂ ಈಡೇರಲಿಲ್ಲ. ರೈತ ವಿರೋಧಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಈ ಲೋಕಸಭಾ ಚುನಾವಣೆಯಲ್ಲಿ ಸೋಲಿಸಬೇಕು ಎಂದರು.

‘ಇತರೆ ಎಲ್ಲಾ ರಾಜಕೀಯ ಪಕ್ಷಗಳು ಜಾತಿ, ಧರ್ಮ ಮತ್ತು ಹಣ ಬಲದ ಮೇಲೆ ಗೆಲುವು ಸಾಧಿಸುತ್ತಿವೆ. ಆದರೆ ಸಿಪಿಐಎಂ ದುಡಿಯುವ ವರ್ಗ, ರೈತರ ಪರವಾಗಿ ಕೆಲಸ ಮಾಡುತ್ತಿದೆ. ಮತದಾರರು ಆಮಿಷಗಳಿಗೆ ಒಳಗಾಗಬಾರದು. ಅವರದ್ದು ಉಳ್ಳವರ ಪಕ್ಷವಾದರೆ, ನಮ್ಮದು ಬಡ ಪಕ್ಷ. ನಮ್ಮ ಕಾರ್ಯಕರ್ತರು ಮತದಾರರಲ್ಲಿ ರಾಜಕೀಯ ಅರಿವು ಮೂಡಿಸಬೇಕು’ ಎಂದು ತಿಳಿಸಿದರು.

ರಾಜ್ಯದಲ್ಲಿ ಐದು ವರ್ಷಗಳಿಂದ ಬರಗಾಲ ಇದೆ. ಜನರು ಕೂಲಿ ಸಿಗದೇ ಪರದಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಮೋದಿ ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದರು. ಆದರೆ ನಿರುದ್ಯೋಗ ಮಟ್ಟ ಹೆಚ್ಚುತ್ತಲೇ ಇದೆ. ಯುವಕರು ಸರ್ಕಾರಕ್ಕೆ ಉದ್ಯೋಗ ಕೊಡಿ ಕೇಳಿದರೆ ಪಕೋಡ ಮಾರಿ ಎನ್ನುತ್ತಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಗಳು ಕಾರ್ಮಿಕರ ಕನಿಷ್ಠ ವೇತನ ತಿಂಗಳಿಗೆ ರೂ.18,000 ಇರಬೇಕು ಎಂದು ತಿಳಿಸಿವೆ. ದೇಶದಲ್ಲಿ ರೂ. 10,000 ಕೂಡ ಸಿಗುತ್ತಿಲ್ಲ ಆತಂಕ ವ್ಯಕ್ತಪಡಿಸಿದರು.

ಎಂ.ಎಸ್. ಸ್ವಾಮಿನಾಥನ್ ಆಯೋಗ (ಕೃಷಿ ಆಯೋಗ) ಜಾರಿ, ಕೃಷಿಕರ ಆದಾಯ ಹೆಚ್ಚಳ, ಬೆಂಬಲ ಬೆಲೆ ನೀಡುವುದಾಗಿ ಭರವಸೆ ನೀಡಿದ್ದರು. ಇದುವರೆಗೆ ಜಾರಿಗೊಂಡಿಲ್ಲ. ಪ್ರತಿದಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಜನರು ಹಸಿವಿನಿಂದ ಸಾಯುತ್ತಿದ್ದಾರೆ. ಇದರ ಬಗ್ಗೆ ಗಮನ ಹರಿಸದ ಮೋದಿ ಸರ್ಕಾರವನ್ನು ಈ ಚುನಾವಣೆಯಲ್ಲಿ ಮನೆಗೆ ಕಳುಹಿಸಬೇಕು ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ನೋಟ್ ಬ್ಯಾನ್, ಜಿಎಸ್‌ಟಿಯಿಂದಾಗಿ ರೈತರು, ಕಾರ್ಮಿಕರು, ಜನಸಾಮಾನ್ಯರು, ಸಣ್ಣ ಉದ್ಯಮಿಗಳು ತೊಂದರೆ ಅನುಭವಿಸಿದರು. ಭಯೋತ್ಪಾದನೆ ನಿರ್ಮೂಲನೆ ಮಾಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ದೂರಿದರು.

‘100 ದಿನ ಅಲ್ಲ, 5 ವರ್ಷ ಕಳೆದರೂ ಅಚ್ಛೇ ದಿನ್ ಬರಲೇ ಇಲ್ಲ’

‘ಕಳೆದ ಐದು ವರ್ಷದಿಂದ ಆಡಳಿತ ನಡೆಸುತ್ತಿರುವ ಕಾರ್ಯವೈಖರಿ ಗಮನಿಸಿ ಪರಿಶೀಲಿಸಿ. ದೇಶದಲ್ಲಿ ಅಭಿವೃದ್ಧಿ ಕೆಲಸ ಮಾಡದೇ, ಕಾಲಹರಣ ಮಾಡಿದೆ. ಬಿಜೆಪಿ ಅಧಿಕಾರಕ್ಕೆ ಬಂದ 100 ದಿನದೊಳಗೆ ಅಚ್ಛೇ ದಿನ್ ಬರಲಿದೆ ಎಂದು ಹೇಳಿದ್ದರು. 5 ವರ್ಷ ಕಳೆದರೂ ಬರಲೇ ಇಲ್ಲ. ಕಳೆದ ಲೋಕಸಭಾ ಚುನಾವಣೆ ವೇಳೆ ಪ್ರಧಾನಿ ಮೋದಿ ಅವರು ನೀಡಿದ್ದ ಆಶ್ವಾಸನೆಗಳು ಈಡೇರಲೇ ಇಲ್ಲ. ರೂ. 3 ಲಕ್ಷ ಕೋಟಿ ಕಾರ್ಪೋರೇಟ್ ಸಾಲ ಮನ್ನಾ ಮಾಡಿದರು. ಆದರೆ, ರೈತರ ಸಾಲ ಮನ್ನಾ ಮಾಡಲಿಲ್ಲ’ ಎಂದು ಆರೋಪಿಸಿದರು.

ಸಮಾವೇಶದ ಅಧ್ಯಕ್ಷತೆಯನ್ನು ಜಿಲ್ಲಾ ಘಟಕದ ಕಾರ್ಯದರ್ಶಿ ಟಿ.ವಿ. ರೇಣುಕಮ್ಮ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಆರ್. ಎಸ್. ಬಸವರಾಜ್, ಕೆ.ಎಲ್. ಭಟ್, ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ತೆರಿಗೆ ವಂಚನೆ ಮಾಡಿ ವಿದೇಶಿ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ಕಪ್ಪು ಹಣವನ್ನು ವಾಪಸ್ ತಂದು ಜನರ ಖಾತೆಗೆ 15 ಲಕ್ಷ ಅಲ್ಲ, 15 ಪೈಸೆಯನ್ನೂ ಹಾಕಲಿಲ್ಲ.

–ಯು. ಬಸವರಾಜ್,
ಸಿಪಿಐಎಂ ರಾಜ್ಯ ಕಾರ್ಯದರ್ಶಿ

ಕರಾವಳಿ ಕಡೆ

ವರದಿ: ವಾ.ಉ.

ಉಡುಪಿ: ಸರ್ವಜನೋತ್ಸವ

ಕರಾವಳಿ ಜಿಲ್ಲೆಗಳು ಹಿಂದುತ್ವ ಕೋಮುವಾದದ ಪ್ರಯೋಗಶಾಲೆಯಾಗಿ ಹೆಚ್ಚುಕಡಿಮೆ 40 ವರ್ಷಗಳೇ ಕಳೆದಿವೆ. ಈ ಅವಧಿಯಲ್ಲಿ ಪುತ್ತೂರು, ಮಂಗಳೂರು, ಸುರತ್ಕಲ್ ಮತ್ತಿತರ ಕಡೆಗಳಲ್ಲಿ ಅಲ್ಪಸಂಖ್ಯಾತ ಮುಸ್ಲಿಂ, ಕ್ರೈಸ್ತರ ಮೇಲೆ ದಾಳಿಗಳು ದೊಡ್ಡ ಮಟ್ಟದಲ್ಲಿ ನಡೆದಿವೆ. ಚರ್ಚುಗಳ ಮೇಲೆ ದಾಳಿಗಳಾಗಿವೆ. ಗೋಸಂರಕ್ಷಣೆಯ ಹೆಸರಿನಲ್ಲಿ ದನಸಾಗಾಣಿಕೆ ಹಾಗೂ ಮಾರಾಟ ಮಾಡುವ ಹಿಂದುಗಳು ಮುಸ್ಲಿಮರ ಮೇಲೆ ಹಿಂದೂ ಮತಾಂಧರಿಂದ ದಾಳಿಗಳು ನಡೆದಿವೆ. ಲವ್ ಜಿಹಾದ್ ಹೆಸರಿನಲ್ಲಿ ಹೆಣ್ಮಕ್ಕಳ ಮೇಲೆ, ಮುಸ್ಲಿಮರ ಮೇಲೆ ದಾಳಿ ನಡೆದಿವೆ. ಮಹಿಳೆಯರು ತಮ್ಮ ಕಲ್ಪನೆಯ ಉಡುಪು, ನಡೆವಳಿಕೆ ಅನುಸರಿಸಬೇಕೆಂದು ಆಗ್ರಹಿಸಿ, ಪಬ್‌ದಾಳಿ ಹಾಗೂ ರೆಸಾರ್ಟ್ ದಾಳಿಗಳನ್ನೂ ನಡೆಸಿ ಮಹಿಳೆಯರನ್ನು ಹಿಂಸಿಸಲಾಗಿದೆ. ಕೊನೆಗೆ ಯಾವೊಂದು ಕ್ರಿಮಿನಲ್ ಕೃತ್ಯ ನಡೆದರೂ ಮುಸ್ಲಿಮರೇ ಕಾರಣ ಎಂದು ಹೇಳಿ, ಜಿಲ್ಲೆಗೇ ಬೆಂಕಿ ಹಚ್ಚುವ ಮಾತನ್ನು ಮಂಗಳೂರು ಸಂಸದರೇ ಹೇಳಿ ತುಪ್ಪ ಸುರಿದಿದ್ದಾರೆ. ಹಿಂದೂತ್ವ ಕೋಮುವಾದದ ನಿರೂಪಣೆಯಲ್ಲಿ ಮಡೆಮಡಸ್ನಾನ, ಪಂಕ್ತಿಭೇದ ನಮ್ಮ ಪರಂಪರೆ ಸಂಪ್ರದಾಯವೆಂದು ಹೇಳಿ, ಅದನ್ನು ಪೋಷಿಸಲು ಸಂಘಪರಿವಾರದ ಪಡೆಗಳು ಜಿಲ್ಲೆಯ ಹಿಂದೂ ಜನರ ಮನಸ್ಸನ್ನೇ ಕಲುಷಿತಗೊಳಿಸಿವೆ.

ಒಂದು ಕಾಲಕ್ಕೆ ಸೌಹಾರ್ದಕ್ಕೆ ಹೆಸರಾದ ಕರಾವಳಿ ಜಿಲ್ಲೆಗಳಲ್ಲಿ ಮತದ್ವೇಷದ ವಾತಾವರಣಕ್ಕೆ ವಿರೋಧ ಇರಲಿಲ್ಲ ಎಂದು ಅರ್ಥವಿಲ್ಲ. ಈ ದುಷ್ಟ ಶಕ್ತಿಗಳ ವಿರುದ್ಧವಾಗಿ ಪ್ರಗತಿಪರ ಸಂಘಟನೆಗಳು, ಎಡಪಕ್ಷಗಳು, ಡಿವೈಎಫ್‌ಐನಂಥ ಸಂಘಟನೆಗಳು ಜನರಿಗೆ ಅರಿವು ಕೊಡುವ ಕೆಲಸ ಮಾಡುತ್ತಲೇ ಇದೆ. ಬಲಪಂಥೀಯ ಕೋಮುವಾದಿ ಸಂಘಟನೆಗಳ ಪಾತ್ರವನ್ನು ಬಯಲುಗೊಳಿಸುತ್ತಾ ಬಂದಿದೆ. ಮಡೆಮಡಸ್ನಾನ ಮತ್ತು ಪಂಕ್ತಿಭೇದದ ವಿರುದ್ಧ ಸಿಪಿಐ(ಎಂ) ಪಕ್ಷ ಹಾಗೂ ಎಡ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಸುಬ್ರಮಣ್ಯದಿಂದ ಮಂಗಳೂರಿಗಾಗಿ ಉಡುಪಿ ತಲುಪಿದ ಜಾಥಾಗಳು ಬಹು ಮುಖ್ಯವಾದ ಹೋರಾಟಗಳು. ಪಂಕ್ತಿಭೇದದ ವಿರುದ್ಧ ಅಂಥ ಎರಡನೇ ಪ್ರತಿಭಟನೆ ನಡೆದಾಗ ಪೋಲೀಸರು ರಾಜ್ಯದ ಮೂಲೆಮೂಲೆಗಳಿಂದ ಬಂದಿದ್ದ 180 ಮೀರಿದ ಸಿಪಿಐ(ಎಂ) ಕಾರ್ಯಕರ್ತರನ್ನು ಬಂಧಿಸಿದ್ದು, ಆ ಮೂಲಕ ಕೋಮುವಾದಕ್ಕೆ ಬಲವಾದ ಸವಾಲು ನೀಡಲಾಗಿದೆ. ಈಗ ಮೂರು ವರ್ಷಗಳ ಹಿಂದೆ ಕರ್ನಾಟಕ ರಾಜ್ಯಾದ್ಯಂತದಿಂದ ಬಂದಿದ್ದ ವಿವಿಧ ಸಂಘಟನೆಗಳ ಕಾರ್ಯಕರ್ತರು 'ಉಡುಪಿ ಚಲೋ' ಎಂಬ ಕಾರ್ಯಕ್ರಮವನ್ನು ಉಡುಪಿಯಲ್ಲಿ ಏರ್ಪಡಿಸಿದ್ದು ಎರಡನೆಯ ಬೃಹತ್ ಜನಾಂದೋಲನ. ಇದರಲ್ಲಿ ಎಡ ಪಕ್ಷಗಳು ಮತ್ತು ಅವರ ಸಾಮೂಹಿಕ ಸಂಘಟನೆಗಳು, ದಲಿತ ಸಂಘರ್ಷ ಸಮಿತಿ ಹಲವು ಬಣಗಳು, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ರಾಜ್ಯದ ವಿವಿಧ ಮಹಿಳಾ ಸಂಘಟನೆಗಳು, ಇತರ ಪ್ರಗತಿಪರ ಸಂಘಟನೆಗಳು ಭಾಗವಹಿಸಿದ್ದವು. ಇದರಲ್ಲಿ ಪ್ರಧಾನ ಭಾಷಣಕಾರರಾಗಿ ಗುಜರಾತ್‌ನ ಮಾನವಹಕ್ಕು ಹೋರಾಟಗಾರ ಜಿಗ್ನೇಶ್ ಮೇವಾನಿ ಭಾಗವಹಿಸಿದ್ದರು.

ಮೊನ್ನೆ 2019 ಮಾರ್ಚ್ 17 ರಂದು ಉಡುಪಿಯ 'ಸಹಬಾಳ್ವೆ' ಸಂಘಟನೆಯ ನೇತೃತ್ವದಲ್ಲಿ ನಡೆದ 'ಸರ್ವಜನೋತ್ಸವ' ಕರಾವಳಿಯ ಕೋಮುವಾದಿ ಶಕ್ತಿಗಳಿಗೆ ಇತ್ತೀಚೆಗೆ ಒಡ್ಡಲಾದ ಬಹುದೊಡ್ಡ ಸವಾಲಾಗಿದೆ. ಐದು ವರ್ಷಗಳ ಕಾಲ ಕೇಂದ್ರ ಸರಕಾರದ ನೇತೃತ್ವ ವಹಿಸಿದ ಬಿಜೆಪಿ ಹಾಗೂ ಪ್ರಧಾನಿನರೇಂದ್ರ ಮೋದಿಯವರ ಆಡಳಿತ, ದೇಶದಾದ್ಯಂತ ಹಿಂದೂತ್ವ ಕೋಮುವಾದಿ ಶಕ್ತಿಗಳನ್ನು ಹುಚ್ಚೆಬ್ಬಿಸಿವೆ. ಕಾರ್ಪರೇಟ್ ಬಂಡವಳಿಗರ ಬೆಂಬಲದಿಂದ ಸಾಮಾನ್ಯ ಜನತೆಯನ್ನು ಅಲ್ಪ ಸಂಖ್ಯಾಕರನ್ನು ಮಹಿಳೆಯರನ್ನು ದಲಿತರನ್ನು ಫ್ಯಾಸಿಸ್ಟ್ ಮಾದರಿಯ ದಬ್ಬಾಳಿಕೆಗಳಿಗೆ ಒಳಪಡಿಸುತ್ತಿರುವ ಹಿನ್ನೆಲೆಯಲ್ಲಿ ಎಡ ಮತ್ತು ಪ್ರಗತಿಪರ ಸಂಘಟನೆಗಳು ಮಾತ್ರವಲ್ಲದೆ, ದೇಶದ ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಜನತಾದಳ (ಎಸ್) ಕೈಗೂಡಿಸುತ್ತಿರುವುದು ಬಹುಮುಖ್ಯವಾದ ಬೆಳವಣಿಗೆಯಾಗಿದೆ.

ಲೋಕಸಭಾ ಚುನಾವಣೆ ಇನ್ನೇನು ಘೋಷಿತವಾಗಿದೆ ಎನ್ನುವಾಗಲೇ, ಉಡುಪಿಯಲ್ಲಿ 'ಸಹಬಾಳ್ವೆ' ಹೆಸರಲ್ಲಿ ಕೆಲವರು ಕಾಂಗ್ರೆಸಿಗರು ಸೆಕ್ಯುಲರ್ ಸಂಘಟನೆಗಳನ್ನು ದಿಢೀರನೇ ಒಟ್ಟುಗೂಡಿಸಲು ಹೋದಾಗ ಸಾಮಾನ್ಯವಾಗಿ ಇದು ಕಾಂಗ್ರೆಸಿಗರ ಚುನಾವಣಾ ಸಿದ್ಧತಾ ಕಾರ್ಯಕ್ರಮ ಎಂದು ಭಾಸವಾದದ್ದೂ ಹೌದು. ಆದರೆ ಮಾರ್ಚ್ 17ರ ಕಾರ್ಯಕ್ರಮದಲ್ಲಿ ಕರಾವಳಿ ಜಿಲ್ಲೆಗಳ ಮೇಲು ಹಂತದ ಯಾವೊಬ್ಬ ಕಾಂಗ್ರೆಸ್ ಮುಖಂಡರೂ ಭಾಗವಹಿಸಿರಲಿಲ್ಲ ಎನ್ನುವುದು ಗಮನಿಸಬೇಕಾದುದು. ಕಾಂಗ್ರೆಸಿನ ಅಮೃತ ಶೆಟ್ಟಿ ಸಂಚಾಲಕರಾಗಿದ್ದರೂ ಅವರೇನೂ ಮುಂಚೂಣಿಯ ಮುಖಂಡರಲ್ಲ. ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಚಿಂತಕ ಹಾಗೂ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಜಿಲ್ಲಾಧ್ಯಕ್ಷ ಜಿ.ರಾಜಶೇಖರ್, ಜೆಡಿಎಸ್ ಜಿಲ್ಲಾಧ್ಯಕ್ಷ ಯೋಗೀಶ್ ಶೆಟ್ಟಿ, ಕಾಂಗ್ರೆಸ್ ಮುಖಂಡ ಅಶೋಕ್ ಕುಮಾರ್ ಕೊಡವೂರು, ಜಿಲ್ಲಾ ಮುಸ್ಲಿಂ ಒಕ್ಕೂಟದ ಹಾಜಿ ಅಬ್ದುಲ್ಲ ಪರ್ಕಳ, ದಸಂಸ ಮುಖಂಡ ಶೇಖರ ಹೆಜಮಾಡಿ, ಕೊರಗ ಮುಖಂಡರಾದ ಪುತ್ರನ್ ಹೆಬ್ರಿ, ಬೊಗ್ರ ಕೊರಗ, ಉದ್ಯಮಿ ಜೆರ್ರಿ ವಿನ್ಸೆಂಟ್ ಮತ್ತು ಕೆಲ ಸೇವಾ ಸಂಸ್ಥೆಗಳ ಮುಖಂಡರು ಈ ಸರ್ವಜನೋತ್ಸವವನ್ನು ನಡೆಸಿಕೊಟ್ಟರು. ನಾಲ್ಕು ಸಾವಿರಕ್ಕೂ ಮೀರಿದ್ದ ಈ ಸಮಾವೇಶದಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಸ್ವಯಂಸೇವಕರು ಒಟ್ಟಾಗಿ ದುಡಿಯುವ ಮೂಲಕ ಸೌಹಾರ್ದವನ್ನು ಮೆರೆದರು. ನೆರೆದ ಮಂದಿಗೆ ಇವರು ನೀರು, ಮಜ್ಜಿಗೆ ವಿತರಿಸಿದರು. ಸಾರ್ವಜನಿಕರಿಗೆ ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಸ್ವಯಂಸೇವಕರಲ್ಲಿ ಮಹಿಳೆಯರೂ ಹಿರಿಯರೂ ಇದ್ದರು.

ಸಮಾವೇಶದ ಅಧ್ಯಕ್ಷತೆಯನ್ನು ಚಿಂತಕ ಹಾಗೂ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ವಹಿಸಿದ್ದರು. ಖ್ಯಾತ ಅಂಕಣಕಾರ ಶಿವಸುಂದರ್ ದಿಕ್ಸೂಚಿ ಭಾಷಣ ಮಾಡಿದರು. ಕಲಬುರ್ಗಿ ಮರುಳಶಂಕರ ದೇವರ ಗುರುಪೀಠದ ಶ್ರೀ ಸಿದ್ಧಬಸವ ಕಬೀರ ಮಹಾಸ್ವಾಮಿ ಸಮಾವೇಶವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಾಮಾಜಿಕ ಚಿಂತಕ ಇಂದೂಧರ ಹೊನ್ನಾಪುರ, ಧರ್ಮಗುರು ಚೇತನ್ ಲೋಬೋ, ವಾರ್ತಾಭಾರತಿ ಪ್ರಧಾನ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ, ಮಾಜಿ ವಿಧಾನ ಪರಿಷತ್ ಸಭಾಪತಿ ವಿ.ಆರ್.ಸುದರ್ಶನ್, ಜೆಡಿಎಸ್ ಮುಖಂಡ ವೈ.ಎಸ್.ವಿ.ದತ್ತಾ ಮಾತನಾಡಿದರು.

ದಿಕ್ಸೂಚಿ ಭಾಷಣ ಮಾಡಿದ ಶಿವಸುಂದರ ಮಾತನಾಡಿ, 'ರಾಜಕೀಯದ ಮೋದೀಕರಣ ಆರ್ಥಿಕತೆಯ ಅಂಬಾನೀಕರಣ, ಮಾಧ್ಯಮದ ಅರ್ನಾಬ್ ಗೋಸ್ವಾಮೀಕರಣವೇ ಈ ದೇಶದ ಫ್ಯಾಸಿಸಂ ಸ್ವರೂಪವಾಗಿದ್ದು ಇವೆಲ್ಲಕ್ಕೂ ಒಂದಕ್ಕೊಂದು ಸಂಬಂಧ ಇದೆ' ಎಂದು ಹೇಳಿದರು. 'ಅಂದು ಇಂದಿರಾಗಾಂಧಿ ವಿರುದ್ಧ ತೀರ್ಪು ನೀಡಿದ ನ್ಯಾಯಾಧೀಶರು ಬದುಕಿದ್ದರು. ಆದರೆ ಇಂದು ಅಮಿತ್‌ಶಾ ವಿರುದ್ಧ ತೀರ್ಪು ನೀಡಿದ ನ್ಯಾಯಾಧೀಶರು ನಿಗೂಢವಾಗಿ ಸಾವನ್ನಪ್ಪುತ್ತಾರೆ. ಈ ಮೂಲಕ ದೇಶದಲ್ಲಿ ಹಿಂದಿಗಿಂತಲೂ ಈಗ ಬಹಳ ಭೀತಿಯ ವಾತಾವರಣ ನಿರ್ಮಾಣವಾಗಿದೆ' ಎಂದು ತಿಳಿಸಿದರು.

ತಮ್ಮ ಅಧ್ಯಕ್ಷ ಭಾಷಣದಲ್ಲಿ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅವರು ಕರಾವಳಿ ಕರ್ನಾಟಕದಲ್ಲಿ ಇರುವ ಸೌಹಾರ್ದಕ್ಕೆ ಸಂಬಂಧಿಸಿ ಹಲವಾರು ಉದಾಹರಣೆಗಳನ್ನು ನೀಡಿದರು. ಅಂಥ ಸಂಗತಿಗಳನ್ನು ಮುಂದಿಟ್ಟು ರಾಜಕೀಯವಾಗಿಯೂ ಚುನಾವಣೆಯಲ್ಲಿಯೂ ಆರೆಸ್ಸೆಸ್ ಹಿಂದುತ್ವವನ್ನು ಎದುರಿಸಲು ಅವರು ಕರೆ ನೀಡಿದರು. ●

ಬಂಟ್ವಾಳ: ಕಾರ್ಮಿಕ ವರ್ಗಕ್ಕೆ ಪ್ರಜ್ಞೆ ಮೂಡಿಸಲು ಕರೆ



2019 ಮಾರ್ಚ್ 26 ರಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ವತಿಯಿಂದ ಬಂಟ್ವಾಳ ತಾಲೂಕು ಮಟ್ಟದ ಕಾರ್ಮಿಕರ ಸಮಾವೇಶವನ್ನು ಬಿ.ಸಿ. ರೋಡಿನ ಲಯನ್ಸ್ ಸೇವಾ ಮಂದಿರದಲ್ಲಿ ಮಂಗಳವಾರ ಸಂಜೆ ನಡೆಯಿತು.

ಸಿಐಟಿಯು ಜಿಲ್ಲಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮಾತನಾಡಿ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯಿಂದ ಕಳೆದ 5 ವರ್ಷಗಳಿಂದ ಕಾರ್ಮಿಕರು ಸಂಕಷ್ಟದ ಜೀವನ ಅನುಭವಿಸುವಂತಾಗಿದೆ. ಯಾವುದೇ ಸರಕಾರವು ಕಾರ್ಮಿಕರ ಅಭ್ಯುದಯಕ್ಕೆ ಹಾಗೂ ಕಾರ್ಮಿಕರ ಭದ್ರತೆಗಾಗಿ ಸೂಕ್ತ ಯೋಜನೆ ರೂಪಿಸಿಲ್ಲ ಎಂದರು. ಬೀಡಿ ಕಾರ್ಮಿಕರಿಗೆ ಅಕ್ಷರ ದಾಸೋಹ, ಅಂಗನವಾಡಿ ಕಟ್ಟಡ ಕಾರ್ಮಿಕರ ಹಿತ ರಕ್ಷಕರು ಯಾರು ಎಂಬುವುದು ಜನರಿಗೆ ತಿಳಿಸುವ ಮೂಲಕ ಕಾರ್ಮಿಕ ವರ್ಗಕ್ಕೆ ಪ್ರಜ್ಞೆ ಮೂಡಿಸಬೇಕಾಗಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಕ. ಪ್ರಾಂತ ರೈತ ಸಂಘದ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿ 'ಕೇಂದ್ರ ಸರಕಾರವು ಕೃಷಿ ಭೂಮಿಯನ್ನು ವಿದೇಶಿ ಕಂಪನಿ ಹಾಗೂ ಕಾರ್ಪೋರೇಟ್‌ಗಳಿಗೆ ಮಾರಾಟ ಮಾಡಿದೆ. ರೈತರ ಸಾವಿರಾರು ರೂ. ಸಾಲವನ್ನು ಮನ್ನಾ ಮಾಡದೇ ರೈತ ವಿರೋಧಿಯಾಗಿದೆ. ನಮ್ಮ ಬದುಕಿಗೂ ರಾಜಕೀಯಕ್ಕೂ ಸಂಬಂಧವಿದ್ದು, ಕಾರ್ಮಿಕ ವರ್ಗ ಜಾಗೃತರಾಗಬೇಕಿದೆ' ಎಂದರು.

ಸಿಐಟಿಯು ತಾಲೂಕು ಅಧ್ಯಕ್ಷ ಸಂಜೀವ ಬಂಗೇರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಉದಯ ಕುಮಾರ್, ಅಕ್ಷರ ದಾಸೋಹದ ಅಧ್ಯಕ್ಷೆ ವಿನಯ ನಡುಮನೇರು ಮುಖಂಡರಾದ ರಾಬರ್ಟ್, ಶಾಂತಾ ವಾಮದ ಪದವು, ಲೋಲಾಕ್ಷಿ, ವಾಸುಗಟ್ಟಿ ಉಪಸ್ಥಿತರಿದ್ದರು. ಸಿಐಟಿಯು ತಾಲೂಕು ಕಾರ್ಯದರ್ಶಿ ರಾಮಣ್ಣ ವಿಟ್ಲ ಪ್ರಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ●

ಕುಂದಾಪುರದಲ್ಲಿ ಕಟ್ಟಡ ಕಾರ್ಮಿಕರಿಂದ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ:



1929 ಎಪ್ರಿಲ್ 8ಕಾರ್ಮಿಕ ವಿವಾದಗಳ ಕಾಯ್ದೆಯನ್ನು ಶಾಸನಸಭೆಯಲ್ಲಿ ಮಂಡಿಸಲು ನಿಗದಿಯಾಗಿದ್ದ ದಿನ. ಆ ದಿನದ ಆಯ್ಕೆ ಆಕಸ್ಮಿಕವಲ್ಲ. ಅಂದು ಭಾರತದ ಕಾರ್ಮಿಕ ವರ್ಗಕ್ಕೆ ಬಿಡಿಸಲಾಗದ ಕೈಕೋಳವನ್ನು ತೊಡಿಸಲು ಬ್ರಿಟಿಷ್ ಸರಕಾರ ಮೀಸಲಿರಿಸಿತ್ತು. ಸ್ವಾತಂತ್ರ್ಯ ಹೋರಾಟದ ಜೊತೆಗೆ ಕಾರ್ಮಿಕ ವರ್ಗದ ಪರ ಅಪಾರ ಕಾಳಜಿ ಹೊಂದಿದ್ದ ಭಗತ್‌ಸಿಂಗ್ ಬ್ರಿಟಿಷ್ ಶಾಸನ ಸಭೆಯಲ್ಲಿ ಈ ಕಾಯ್ದೆಗೆ ವಿರೋಧ ತೋರಲು ಯಾವೊಬ್ಬ ಪ್ರತಿನಿಧಿಗೂ ಏಟಾಗದಂತೆ ಬಾಂಬು ಸಿಡಿಸಿದರು. ಮತ್ತು ಅಲ್ಲಿಂದ ಕದಲದೆ ಬಂಧಿತರಾದರು. ಭಗತ್‌ಸಿಂಗ್ ಒಬ್ಬೊ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ಮಾತ್ರವಲ್ಲ, ಕಾರ್ಮಿಕ ವರ್ಗದ ನಾಯಕರೂ ಹೌದು ಎಂಬುದಾಗಿ ಸಿಐಟಿಯು ಮುಖಂಡ ಸುರೇಶ್ ಕಲ್ಲಾಗರ ವಿವರಿಸಿದರು.

ಕುಂದಾಪುರ ಕಟ್ಟಡ ಕಾರ್ಮಿಕರ ಸಂಘಟನೆಯ ವತಿಯಿಂದ 2019 ಮಾರ್ಚ್ 24 ರಂದು ಹೆಮ್ಮಾಡಿಯಲ್ಲಿ ನಡೆದ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಟ್ಟಡ ಕಾರ್ಮಿಕ ಸಂಘದ ಕುಂದಾಪುರ ತಾಲೂಕು ಮುಖಂಡರಾದ ಜಗದೀಶ್ ಆಚಾರ್, ಸಂತೋಷ್ ಹೆಮ್ಮಾಡಿ, ನರಸಿಂಹ ಹೆಮ್ಮಾಡಿ, ರಮೇಶ್ ಬಗ್ವಾಡಿ, ಗಿರಿಜಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ●

ಬಿಜೆಪಿ ಅಭ್ಯರ್ಥಿಯಿಂದ ಪೌರಕಾರ್ಮಿಕರ 'ಪಾದಪೂಜೆ' ಖಂಡಿಸಿ ಪ್ರತಿಭಟನೆ: ಸ್ವಯಂಪ್ರೇರಿತ ದೂರು ದಾಖಲಿಸಲು ಅಗ್ರಹ



ತಮ್ಮ ಚುನಾವಣಾ ರಾಜಕಾರಣದ ಲಾಭಕ್ಕಾಗಿ ರಾಜಕಾರಣಿಗಳು ಪೌರಕಾರ್ಮಿಕರ 'ಪಾದಪೂಜೆ' ಮಾಡುತ್ತಿರುವುದು ಅತ್ಯಂತ ಖಂಡನೀಯವಾದುದು. ಈಗಾಗಲೇ ಅಪಮಾನಕ್ಕೊಳಗಾಗಿರುವ ಪೌರಕಾರ್ಮಿಕರ ಪಾದಪೂಜೆ ಮಾಡುವ ಮುಖಾಂತರ ಅವನ್ನು ಮತ್ತಷ್ಟು ಅವಮಾನಗೊಳಿಸಲಾಗುತ್ತಿದೆ ಎಂದು ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಧರ್ಮೇಶ್ ಆಕ್ರೋಶ ವ್ಯಕ್ತಪಡಿಸಿದರು. ಮಾರ್ಚ್ 25 ರಂದು ಹಾಸನ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎ. ಮಂಜು ನಾಮಪತ್ರ ಸಲ್ಲಿಸುವ ಮುನ್ನ ಹಾಸನ ನಗರದ ಪೌರಕಾರ್ಮಿಕ ದಂಪತಿಗಳ 'ಪಾದಪೂಜೆ' ಮಾಡಿದ ಘಟನೆಯನ್ನು ಖಂಡಿಸಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಕಾಂಗ್ರೆಸ್ ಪಕ್ಷವನ್ನು ಬಿಟ್ಟಿರುವ ಅವರು ಮಾಜಿ ಸಚಿವ ಎ. ಮಂಜುರವರು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಅನುಸರಿಸಿದ್ದೇನೆ ಎಂದು ಹೇಳಿದ್ದಾರೆ. ಆದರೆ ತಾವು ಅಧಿಕಾರದಲ್ಲಿದ್ದಾಗ ಒಂದು ದಿನವಾದರೂ ಪೌರಕಾರ್ಮಿಕರ 'ಕಾಲೋನಿ'ಗಳಿಗೆ ಹೋಗದೆ ಅವರ ಕೆಲಸ ಖಾಯಂ ಮಾಡದೆ ಸುಪ್ರೀಂ ಕೋರ್ಟ್ ಆದೇಶದಂತೆ ಅವರಿಗೆ 'ಸಮಾನ ಕೆಲಸಕ್ಕೆ ಸಮಾನ ವೇತನ' ನೀತಿ ಜಾರಿ ಮಾಡದೆ ಅವರಿಗೆ ವಾಸ ಮಾಡಲು ಉತ್ತಮ ವಸತಿಗಳು ಮತ್ತು ಉತ್ತಮ ಬಡಾವಣೆಗಳನ್ನು ನಿರ್ಮಿಸದೆ ಅನ್ಯಾಯ, ಅನಾರೋಗ್ಯ ಮತ್ತು ಅವಮಾನಗಳಿಂದ ಜೀವನ ಸಾಗಿಸುತ್ತಿರುವ ಪೌರಕಾರ್ಮಿಕರಿಗೆ ಸ್ವಾಭಿಮಾನಿ ಹಾಗೂ ಘನತೆಯುಕ್ತ ಬದುಕು ಕಲ್ಪಿಸುವ ಬದಲು ಇವರಿಗೆ ಬೇಕೆಂದಾಗ ಇವರ ರಾಜಕೀಯದ ಆಟಕ್ಕೆ ಪೌರಕಾರ್ಮಿಕರು 'ಪಾದಪೂಜೆ' ಮಾಡಿಸಿಕೊಳ್ಳಲು ಹಾಗೆಯೇ ನರಕದ ಕೂಪದಲ್ಲಿ ಬದುಕಿರಬೇಕೆನ್ನುವುದು ನರೇಂದ್ರ ಮೋದಿ, ಎ. ಮಂಜು, ಬಿಜೆಪಿ ಮತ್ತು ಸಂಘಪರಿವಾರದ ಉದ್ದೇಶವಾಗಿದೆ ಎಂದು ಹೇಳಿದರು.

ನರೇಂದ್ರ ಮೋದಿ ಸರ್ಕಾರ 'ಸ್ವಚ್ಛ ಭಾರತ ಅಭಿಯಾನ' ಎಂಬ ಹೆಸರಿನಲ್ಲಿ ಸಾವಿರಾರು ಕೋಟಿ ಸಾರ್ವಜನಿಕ ಹಣವನ್ನು ಖರ್ಚು ಮಾಡಿದೆ. ನಾಗರೀಕರಿಂದ ಸ್ವಚ್ಛ ಭಾರತ ಸೆಸ್ ಕಟ್ಟಿಸಿಕೊಳ್ಳಲಾಗುತ್ತಿದೆ. ದೇಶದ ನಗರ ಹಾಗೂ ಪಟ್ಟಣಗಳು ಸ್ವಚ್ಛತೆಯಲ್ಲಿ ಹಿಂದೆ ಬಿದ್ದಿವೆ ಎನ್ನುವುದನ್ನು ವಿಶ್ವ ಆರೋಗ್ಯ ಸಂಸಂಸ್ಥೆಯ ಅಂಕಿ ಅಂಶಗಳು ಸ್ಪಷ್ಟವಾಗಿ ಹೇಳುತ್ತವೆ. ಶೌಚಾಲಯ, ಶೌಚಾಲಯದ ಗುಂಡಿಗಳು, ಮ್ಯಾನ್‌ಹೋಲ್ ಮತ್ತು ಒಳಚರಂಡಿಗಳನ್ನು ಸ್ವಚ್ಛಮಾಡಲು ಅತ್ಯಾಧುನಿಕ ಯಂತ್ರಗಳನ್ನು ಬಳಸದೆ ಇಂದಿಗೂ ಪೌರಕಾರ್ಮಿಕರ ಕೈಗಳಿಂದಲೇ ಸ್ವಚ್ಛಗೊಳಿಸಲಾಗುತ್ತಿದೆ. ಅವರಿಗೆ ಸುರಕ್ಷತಾ ಪರಿಕರಗಳನ್ನು ನೀಡಿಲ್ಲ. ಅವರ ಕೆಲಸ ಖಾಯಂ ಮಾಡಿ ಅವರಿಗೆ ಒಂದು ನ್ಯಾಯಯುತ ವೇತನ ನೀಡಿಲ್ಲ. ಅವರಿಗೆ ವಾಸಯೋಗ್ಯ ವಸತಿಗಳನ್ನು ನಿರ್ಮಿಸಿಕೊಟ್ಟಿಲ್ಲ ಹಾಗಾದರೆ ಸಾವಿರಾರು ಕೋಟಿ ಸ್ವಚ್ಛತಾ ಅಭಿಯಾನದ ಹಣ ಎಲ್ಲಿ ಹೋಯಿತು ಎಂದು ಪ್ರಶ್ನಿಸಿದರು. ಮನುವಾದದ ಪ್ರತಿಪಾದಕರಾದ ನರೇಂದ್ರ ಮೋದಿ ಮತ್ತು ಬಿಜೆಪಿಯನ್ನು ಅನಸರಿಸಿ ಎ. ಮಂಜುರವರು ಅಸ್ಪೃಶ್ಯರಲ್ಲೇ ಅಸ್ಪೃಶ್ಯರಾಗಿರುವ ಪೌರಕಾರ್ಮಿಕರನ್ನು ಮತ್ತಷ್ಟು ಅವಮಾನಿಸಿದ್ದಾರೆ ಎ. ಮಂಜು ಮತ್ತು ಬಿಜೆಪಿ ಮೇಲೆ ಚುನಾವಣಾ ಆಯೋಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಅವರ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಇಂತಹ ಚುನಾವಣೆಯ ಆಟಗಳಿಗೆ ಪೌರಕಾರ್ಮಿಕರನ್ನು ಬಳಸಿಕೊಳ್ಳದಂತೆ ರಾಜಕೀಯ ಪಕ್ಷಗಳಿಗೆ ಸೂಚನೆ ನೀಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸೇರಿದ್ದ ಪೌಕಾರ್ಮಿಕರು 'ನಿಮ್ಮ ಕಳಂಕಿತ ಕೈಗಳಿಂದ ನಮ್ಮ ಪಾದಪೂಜೆ ಮಾಡಬೇಡಿ; ನಮ್ಮ ಕೆಲಸ ಖಾಯಂ ಮಾಡಿ' ಎಂದು ಘೋಷಣೆ ಕೂಗಿದರು.

ಪ್ರತಿಭಟನೆಯಲ್ಲಿ ಕೆಪಿಆರ್‌ಎಸ್‌ನ ಜಿಲ್ಲಾಧ್ಯಕ್ಷ ಎಚ್.ಆರ್. ನವೀನ್‌ಕುಮಾರ್, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ. ಪೃಥ್ವಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಅರವಿಂದ್, ಎಸ್‌ಎಫ್‌ಐ ಜಿಲ್ಲಾ ಜಂಟಿ ಕಾರ್ಯದರ್ಶಿ ವಿವೇಕ್, ಮುನಿಸಿಪಲ್ ಕಾರ್ಮಿರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ, ಜಿಲ್ಲಾ ಖಜಾಂಚಿ ಮಂಜುನಾಥ್ ಮತ್ತಿತರೆ ಮುಖಂಡರು ಹಾಜರಿದ್ದರು.

–ಪ್ರಕಾಶ



ಬಿಜೆಪಿ ಸೋಲಿಸಲು ಮಾರ್ಚ್ 31 ರಂದು ಹಾಸನದಲ್ಲಿ ಸಿಪಿಐ(ಎಂ) ಸಭೆ

'ದೇಶದ ಭದ್ರತೆಗೆ ಹಾಗೂ ಜನರ ಬದುಕಿಗೆ ಅತ್ಯಂತ ಮಾರಕವಾಗಿರುವ ಹಾಗೂ ಸಂವಿಧಾನದ ಮೂಲ ತತ್ವಗಳಿಗೆ ವಿರುದ್ಧವಾಗಿರುವ ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವುದು ಈ ಕಾಲದ ತುರ್ತು ಅಗತ್ಯವಾಗಿದೆ. ಆದ್ದರಿಂದ ಹಾಸನ ಲೋಕಸಭಾ ಕ್ಷೇತ್ರದ ಮತದಾರರು ಮೋದಿ ನೇತೃತ್ವದ ಎನ್.ಡಿ.ಎ.ಕೂಟದ ವಿರುದ್ಧ ಮತ ಚಲಾಯಿಸಬೇಕೆಂದು' ಸಿಪಿಐ(ಎಂ) ಮತದಾರರಲ್ಲಿ ಮನವಿ ಮಾಡಿಕೊಂಡಿತು. ಈ ಹಿನ್ನೆಲೆಯಲ್ಲಿ ಚರ್ಚಿಸಲು ಮಾರ್ಚ್ 31ರಂದು ಹಾಸನದಲ್ಲಿ ರಾಜಕೀಯ ಸಮಾಲೋಚನಾ ಸಭೆ ನಡೆಸಲಾಗುತ್ತಿದೆ.

ಬಿಜೆಪಿ ಸೋಲಿಸುವಂತೆ ಸಿಪಿಐ(ಎಂ) ಹಾಸನ ಲೋಕಸಭಾ ಕ್ಷೇತ್ರದ ಮತದಾರರಿಗೆ ಸಿಪಿಐಎಂ ಮನವಿ ಮಾಡಿದೆ. ಜಿಲ್ಲೆಯಾದ್ಯಂತ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಪ್ರಚಾರ ಮಾಡಲು ಕಾರ್ಯತಂತ್ರ ರೂಪಿಸಲು ಸಿಪಿಐ(ಎಂ) ಕಾರ್ಯಕರ್ತರ ಸಭೆಯನ್ನು 2019 ಮಾರ್ಚ್ 31ರ ಭಾನುವಾರ ಬೆಳಗ್ಗೆ 11 ಗಂಟೆಗೆ ಹಾಸನದ ಪಕ್ಷದ ಕಛೇರಿಯಲ್ಲಿ ಕರೆಯಲಾಗಿದೆ. ಈ ಸಭೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಯು. ಬಸವರಾಜು ಉದ್ಘಾಟಿಸಲಿದ್ದಾರೆ ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಅವರು ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ. ●

ಚುನಾವಣೆಯ ನೀತಿ ಸಂಹಿತೆ ಉಲ್ಲಂಘನೆಯ ಕಾರಣ ನೀಡಿ ಚಿಂತಕರ ವಿರುದ್ಧ ಪೋಲೀಸು ಕೇಸು

2019 ಮಾರ್ಚ್ 17ರ ಸಹಬಾಳ್ವೆಯ ಸರ್ವಜನೋತ್ಸವದಲ್ಲಿ ಮಾತನಾಡಿದ ಚಿಂತಕರು ಮತೀಯ ದ್ವೇಷ ಪ್ರಚೋದಿಸಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ 5 ಮಂದಿ ಚಿಂತಕರ ವಿರುದ್ಧ ಉಡುಪಿ ಪೋಲೀಸರು ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಸಿಪಿಐ(ಎಂ) ಮುಖಂಡ ಜಿ.ಎನ್.ನಾಗರಾಜ್, ಚಿಂತಕ ಮಹೇಂದ್ರ ಕುಮಾರ್, ಅಂಕಣಕಾರ ಶಿವಸುಂದರ್ ಹಾಗೂ ಕಾರ್ಯಕ್ರಮದ ಸಂಘಟಕರಾದ ಅಮೃತ್ ಶೆಣೈ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ.

ಸೌಹಾರ್ದ ಎಂದರೆ ಏನು ಎಂಬುದನ್ನು ಸರಿಯಾಗಿ ಅರ್ಥೈಸಲು ನಮ್ಮ ಪೋಲೀಸು ಇಲಾಖೆ ವಿಫಲವಾಗಿರುವುದು ಕಾಣಬಹುದಾಗಿದೆ. ●

ಕೆಎಸ್‌ಆರ್‌ಟಿಸಿ ನೌಕರರ ಹಾಸನ ವಿಭಾಗ ಸಮಾವೇಶ ಧಾಳಿಗಳನ್ನು ಹಿಮ್ಮೆಟ್ಟಿಸಲು ನಿರ್ಧಾರ



ರಸ್ತೆ ಸುರಕ್ಷತಾ ಮಸೂದೆ, ಮೋಟಾರು ವಾಹನ ಕಾಯ್ದೆ ಮತ್ತಿತರ ಕಾಯ್ದೆಗಳಿಗೆ ತಿದ್ದುಪಡಿ ತರುವ ಮೂಲಕ ಸಾರಿಗೆ ನಿಗಮಗಳನ್ನು ಖಾಸಗೀಕರಣ ಮಾಡಲು ಸರ್ಕಾರಗಳು ನಿರತಂರ ಪ್ರಯತ್ನ ನಡೆಸುತ್ತಿದ್ದು, ಖಾಸಗೀಕರಣದ ಮೂಲಕ ನೌಕರರ ಹಿತರಕ್ಷಣೆ ಬಲಿ ಕೊಡಲು ಸಿಐಟಿಯು ಅವಕಾಶ ಕೊಡುವುದಿಲ್ಲ ಎಂದು ಕರ್ನಾಟಕ ರಾಜ್ಯ ಸಾರಿಗೆ ನಿಗಮಗಳ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಕೆ.ಪ್ರಕಾಶ್ ಹೇಳಿದರು.

ಗುರುವಾರ ಹಾಸನದ ಸಂಸ್ಕೃತ ಭವನದಲ್ಲಿ ನಡೆದ ಹಾಸನ ವಿಭಾಗದ ಸಾರಿಗೆ ನೌಕರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಪ್ರಕಾಶ್, 'ರಸ್ತೆ ಸುರಕ್ಷತಾ ಮಸೂದೆ–2014 ಜಾರಿ ಮೂಲಕ ಕೇಂದ್ರ ಸರ್ಕಾರವು ಸಾರಿಗೆ ರಂಗವನ್ನು ಖಾಸಗೀಕರಣ ಮಾಡಲು ಹೊರಟಿತ್ತು. ಅದನ್ನು ಸಿಐಟಿಯು ಹೋರಾಟಗಳನ್ನು ನಡೆಸಿ ಹಿಮ್ಮೆಟಿಸಿದ ಮೇಲೆ ಕೇಂದ್ರ ಸರ್ಕಾರವು ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ದೇಶದ 54 ಸಾರಿಗೆ ನಿಗಮಗಳನ್ನು ಕಾರ್ಪೋರೇಟ್ ಬಂಡವಾಳಗಾರರ ಹಿಡಿತಕ್ಕೆ ಕೊಡಲು ಯತ್ನಿಸುತ್ತಿದೆ. ಇದನ್ನು ಖಂಡಿಸಿ 2015ರ ಏಪ್ರಿಲ್ 30 ಚಾರಿತ್ರಿಕ ಹೋರಾಟ ಮಾಡಲಾಗಿತ್ತು. ಅದರ ನಡುವೆಯೇ ತಿದ್ದುಪಡಿಯನ್ನು ಲೋಕಸಭೆಯಲ್ಲಿ ಅಂಗೀಕರಿಸಿತ್ತು. ಆಧರೆ ಹೋರಾಟ ತೀವ್ರಗೊಂಡ ಹಿನ್ನೆಲೆಯಲ್ಲಿ ರಾಜ್ಯಸಭೆಯಲ್ಲಿ ಮಂಡಿಸದೆ ಬಾಕಿ ಉಳಿಸಿದೆ. ಮುಂದಿನ ಸರ್ಕಾರ ಅದನ್ನು ಅಂಗೀಕರಿಸುವ ಸಾಧ್ಯತೆ ಇದೆ. ಅದನ್ನು ಬಲಿಷ್ಟವಾದ ಸಂಘಟನೆ ಮೂಲಕ ಹಿಮ್ಮೆಟ್ಟಿಸಬೇಕಿದೆ' ಎಂದರು.

'ಸಾರಿಗೆ ನಿಗಮಗಳಲ್ಲಿ ನೌಕರರ ಮೇಲೆ ದಿನನಿತ್ಯ ಕಿರುಕುಳ ನೀಡುತ್ತಿರುವುದು ಸಾಮಾನ್ಯವಾಗಿ ಕೆಲಸಕ್ಕಾಗಿ ಗೇಟ್ ಬಳಿ ಕಾಯುವಂತಹ ಪರಿಸ್ಥಿತಿ ಇದೆ. ಕೆಲಸ

ಪುಟ 14 ಕ್ಕೆ



ಅತಿಥಿ ಅಂಕಣ




ಪ್ರೊ. ರಾಜೇಂದ್ರ ಚೆನ್ನಿ

ಅಮೆರಿಕದ ಪ್ರಭುತ್ವದ ಯುದ್ಧಕೋರತನದ ರಹಸ್ಯಗಳನ್ನು ಬಯಲು ಮಾಡಿದ 'ಪೆಂಟಗನ್ ಪೇಪರ್ಸ್' ಎಂದೇ ಪ್ರಸಿದ್ಧವಾದ ಕಡತಗಳ ಬಗ್ಗೆ, ಹನಾ ಅರೆಂಡ್‌ಳ ಬರೆದ 'Lying in Politics' ಪ್ರಬಂಧವು ಶ್ರೇಷ್ಠ ರಾಜಕೀಯ ವಿಶ್ಲೇಷಣೆಯಾಗಿದೆ. ಆಧುನಿಕ ಪ್ರಭುತ್ವಗಳು ತಮ್ಮ ಪ್ರಬಲವಾದ ಸೈನಿಕ, ಗೂಢಚರ್ಯೆ, ಮಾಧ್ಯಮ ವ್ಯವಸ್ಥೆಗಳನ್ನು ಬಳಸಿಕೊಂಡು ಕಂತೆ ಕಂತೆ ಸುಳ್ಳುಗಳನ್ನು ಉತ್ಪಾದನೆ ಮಾಡುತ್ತವೆ. ಆ ಸುಳ್ಳುಗಳನ್ನು ಬಹಿರಂಗಗೊಳಿಸುವವರನ್ನು ಅತೀವ ಕಿರುಕುಳಕ್ಕೆ ಒಳಪಡಿಸುತ್ತದೆ. ಹಾಗಾದರೆ ಸತ್ಯಕ್ಕೆ ಉಳಿಗಾಲವೇ ಇಲ್ಲವೆಂದು ಹನಾ ಹೇಳುತ್ತಿದ್ದಾರೆಯೆ? ಇಲ್ಲ. ಪ್ರಬಂಧದ ಕೊನೆಗೆ ಬರುವ ಅವರ ಮಾತುಗಳು ಇಂದು ನಮಗೆ ದಾರಿದೀಪವಾಗಬಲ್ಲವು. ನಾವು ಸುಲಭವಾಗಿ ನಂಬಿ ಬಿಡುವ "ಸತ್ಯಗಳನ್ನು" ಪ್ರಭುತ್ವವು ಯಾವ ಕಾರಣಕ್ಕಾಗಿ ಸೃಷ್ಟಿಸಿದೆ ಎನ್ನುವ ನಿರಂತರವಾದ ಎಚ್ಚರವು ಬೇಕು.

ರಾಜಕಾರಣದಲ್ಲಿ ಸುಳ್ಳಿನ ಪಾತ್ರ

"ಒಬ್ಬ ಅನುಭವಸ್ಥ ಸುಳ್ಳುಗಾರ ಅದೆಂಥ ಸುಳ್ಳುಗಳ ಹೆಣಿಗೆಯನ್ನೇ ತರಲಿ, ಅದು ವಾಸ್ತವದ ಅಗಾಧವಾದ ಶರೀರವನ್ನು ಮುಚ್ಚಲಾಗದು."


ಹೀಗೆಂದು ಹೇಳಿದ್ದು 20ನೇ ಶತಮಾನದ ಬಹುಮುಖ್ಯ ರಾಜಕೀಯ ಚಿಂತಕಿಯಾಗಿದ್ದ ಹನಾ ಅರೆಂಡ್ (Hannah Arendt). ಅವಳು ಜರ್ಮನಿ ದೇಶದ ಒಬ್ಬ ಯಹೂದೀ ಮಹಿಳೆ. ಹರೆಯದಲ್ಲಿಯೇ ಅತ್ಯಂತ ಪ್ರತಿಭಾವಂತಳಾಗಿದ್ದ ಅವಳು ಮ್ಯಾಗರ್ಡ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರವನ್ನು ಓದಲು ಹೋಗಿ ಅಲ್ಲಿ ಪ್ರಖರ ಚಿಂತಕನೆಂದು ಪ್ರಸಿದ್ಧನಾಗಿದ್ದ ಮಾರ್ಟಿನ್ ಹಡೇಗರ್ ಎನ್ನುವ ಶಿಕ್ಷಕನ ಪ್ರೇಯಸಿಯಾದಳು. ಅವನು ಶ್ರೇಷ್ಠ ತತ್ವಜ್ಞಾನಿಯೆಂದು ಹೆಸರಾದರೂ ಹಿಟ್ಲರ್‌ನ ನಾಝಿ ವಾದದ ಅನುಯಾಯಿಯಾಗಿದ್ದ. ಇದು ಅವಳ ಜೀವನದ ಉದ್ದಕ್ಕೂ ನಡೆದ ವಿಚಿತ್ರ ಪ್ರಸಂಗಗಳಲ್ಲಿ ಒಂದಾಗಿತ್ತು. ಮುಂದೆ ಅವಳು ಸ್ವತಃ ಪ್ರಸಿದ್ಧ ಚಿಂತಕಿ ಹಾಗೂ ಬರಹಗಾರಳಾದಳು. ಎರಡನೇ ಮಹಾಯುದ್ಧದ ನಂತರ ಯಹೂದಿಗಳ ಮಾರಣಹೋಮಕ್ಕೆ ಕಾರಣನಾದ ಐಕ್‌ಮನ್ ಮತ್ತು ಇತರ ನಾಝಿಗಳ ವಿಚಾರಣೆಯು ನಡೆದಾಗ ಅವರ ವರದಿಯನ್ನು ಅವಳು ಬರೆದಳು. ಇದು ಪ್ರಸಿದ್ಧವಾದ ನ್ಯುರೆಂಬರ್ಗ್ ವಿಚಾರಣೆಯ (Nuremberg Trial) ವರದಿ. ಇದರ ಅನುಭವದ ಆಧಾರದ ಮೇಲೆ ಸರ್ವಾಧಿಕಾರಿ ವ್ಯಕ್ತಿತ್ವದ ಮೇಲೆ ಅವಳು ಬರೆದ ಕೃತಿಯು ಇಂದಿಗೂ ಆ ವಿಷಯದ ಬಗೆಗಿನ ಶ್ರೇಷ್ಠ ಕೃತಿಯಾಗಿದೆ. ಮುಂದೆ ಅಮೇರಿಕವು ವಿಯೆಟ್‌ನಾಮ್ ಮೇಲೆ ಯುದ್ಧ ನಡೆಸಿದಾಗ ತನ್ನ ಗುಪ್ತಚರ ಸಂಸ್ಥೆಗಳು, ಮಾಧ್ಯಮಗಳು, ಇಡೀ ರಕ್ಷಣಾ ವ್ಯವಸ್ಥೆ ಇವುಗಳನ್ನು ಬಳಸಿಕೊಂಡು ಅಪ್ಪಟ ಸುಳ್ಳುಗಳ ಒಂದು ದೈತ್ಯಾಕರದ ಕಟ್ಟಡವನ್ನೇ ನಿರ್ಮಿಸಿತು. ಇವು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಮೂಲಕ ಬಯಲಾದಾಗ ಹನಾ ಅದನ್ನು ಕುರಿತು ಒಂದು ಅದ್ಭುತವಾದ ಚಿಕ್ಕ ಕೃತಿಯನ್ನೇ ಬರೆದಳು. ಇದೇ 'Lying in Politics' ಎನ್ನುವ ಪ್ರಬಂಧವಾಗಿದೆ. ಹೀಗೆ ಆಕಸ್ಮಾತ್ತಾಗಿ ಪ್ರಭುತ್ವದ ರಹಸ್ಯಗಳನ್ನು ಬಯಲು ಮಾಡಿದ ಕಡತಗಳು 'ಪೆಂಟಗನ್ ಪೇಪರ್ಸ್' ಎಂದೇ ಪ್ರಸಿದ್ಧವಾಗಿವೆ.



ಅಕ್ಟೋಬರ್ 2, 2017 ರಂದು ಪ್ರಕಟವಾದ ರಾಜ್ ಠಾಕ್ರೆ ಕಾರ್ಟೂನ್


ಹನಾಳ ಪ್ರಕಾರ ಸತ್ಯವನ್ನು ಹೇಳುವುದು ಎಂದಿಗೂ ರಾಜಕೀಯದ ಮೌಲ್ಯವೆಂದು ಪರಿಗಣಿತವಾಗಿಲ್ಲ. ರಾಜಕೀಯ ವ್ಯವಹಾರಗಳಲ್ಲಿ ಸುಳ್ಳುಗಳನ್ನು ನ್ಯಾಯಬದ್ಧವಾದ ಸಾಧನಗಳೆಂದೇ ನಂಬಲಾಗಿದೆ. ಹಾಗಾಗಿಯೇ ಅದರ ಬಗ್ಗೆ ನಮ್ಮ ರಾಜಕೀಯ, ತಾತ್ವಿಕ ಚಿಂತನೆಗಳಲ್ಲಿ ಹೆಚ್ಚು ಪ್ರಸ್ತಾಪವೇ ಬಂದಿಲ್ಲ. ವಾಸ್ತವವಾಗಿರುವುದನ್ನು ನಮ್ಮ ಚಿಂತನೆ ಹಾಗೂ ಮಾತುಗಳಲ್ಲಿ ತಿರಸ್ಕರಿಸುವ ನಮ್ಮ ಸ್ವಭಾವದಲ್ಲಿರುವ ಶಕ್ತಿಯ ಬಗ್ಗೆ ಅಲ್ಲಲ್ಲಿ ಚರ್ಚೆ ನಡೆದಿದೆ. ಆದರೆ ತಪ್ಪು, ಭ್ರಮೆ, ನೆನಪಿನ ಕೊರತೆ ಇವುಗಳಿಂದಾಗಿ ಸತ್ಯವನ್ನು ಕಾಣದೇ ಇರುವುದು ಬೇರೆ; ಆಕ್ರಾಮಕವಾಗಿ ಕ್ರಿಯಾಶೀಲವಾಗಿ ಸತ್ಯವನ್ನು ತಿರಸ್ಕರಿಸುವುದು ಬೇರೆ. ಅಂದರೆ ವ್ಯವಸ್ಥಿತವಾಗಿ, ಉದ್ದೇಶಪೂರ್ವಕವಾಗಿ ಸುಳ್ಳುಗಳನ್ನು ಹೇಳಿದಾಗ ಅದರ ಪರಿಣಾಮವೇನು? ಅದನ್ನು ಒಂದು ರಾಷ್ಟ್ರದ ನಾಗರೀಕರು ಒಪ್ಪಿಕೊಂಡರೆ ಅದರ ರಾಜಕೀಯ ಪರಿಣಾಮಗಳೇನು?

ಹನಾ ಇಷ್ಟು ಮೂಲಭೂತವಾದ ಪ್ರಶ್ನೆಗಳನ್ನೇ ಎತ್ತಲು ಕಾರಣವೆಂದರೆ ಈ ಪೆಂಟ್‌ಗಾನ್ ಪೇಪರ್‌ಗಳು ಎರಡನೇಯ ಮಹಾಯುದ್ಧದ ನಂತರದಿಂದ (ಸುಮಾರು 1947 ರಿಂದ) ಅಮೇರಿಕ ಸರಕಾರದ ಅತ್ಯಂತ ರಹಸ್ಯವೆಂದು ವರ್ಗೀಕರಣವಾಗಿದ್ದ ದಾಖಲೆಗಳಾಗಿದ್ದವು. ವಿಶೇಷವಾಗಿ ಅಮೇರಿಕವು ಉತ್ತರ ವಿಯೆಟ್‌ನಾಮ್ ಮೇಲೆ ದಶಕದ ಕಾಲ ನಡೆಸಿದ ಯುದ್ಧದ ಹಿಂದೆ ನಡೆದ ಸರಕಾರದ, ಸೇನೆಯ ಹಾಗೂ ಆಡಳಿತಗಾರರ ವ್ಯವಹಾರಗಳ ದಾಖಲೆಗಳಾಗಿದ್ದವು. ಅವು 47 ಸಂಪುಟಗಳಲ್ಲಿ ಸಂಕಲಿತವಾಗಿದ್ದವು. ಅವುಗಳಲ್ಲಿ ವರದಿಗಳನ್ನು, ಟಿಪ್ಪಣಿಗಳನ್ನು ಹಾಗೂ ವಿಶ್ಲೇಷಣೆಗಳನ್ನು ಬರೆದವರು, ಅತ್ಯುನ್ನತ ಬುದ್ಧಿಜೀವಿಗಳೆಂದು ಕರೆಯಬಹುದಾದ ವಿವಿಧ ಕ್ಷೇತ್ರಗಳ ವಿದ್ವಾಂಸರು ಹಾಗೂ ಆಡಳಿತಗಾರರು. ಹನಾ ಈ ದಾಖಲೆಗಳನ್ನು ವಿಶ್ಲೇಷಣೆ ಮಾಡುವುದರಿಂದ ಹೊರಬೀಳುವ ಸತ್ಯಗಳು ಆಘಾತಕಾರಿಯಾಗಿವೆ, ಕರಾಳವಾಗಿವೆ. ಉತ್ತರ ವಿಯೆಟ್‌ನಾಮ್‌ನಂಥ ಸಣ್ಣ ದೇಶದ ಮೇಲೆ ದಶಕದ ಕಾಲ ಯುದ್ಧ ಹೂಡಿದ ಅಮೇರಿಕಕ್ಕೆ ಇದ್ದ ಕಾರಣಗಳೇನು? ನಿಜವೆಂದರೆ ಏನೂ ಇಲ್ಲ! ದಕ್ಷಿಣ ವಿಯೆಟ್‌ನಾಮ್‌ನ ಸ್ನೇಹಿತನಾದ ಅಮೇರಿಕವು ತನ್ನ ದೈತ್ಯ ಮಿಲಿಟರಿ ಬಲದ ಮೂಲಕ ಆ ದೇಶವನ್ನು ಉಳಿಸಹೊರಟಿತ್ತು.



ಯಾರಿಂದ ಅಥವಾ ಯಾವುದರಿಂದ? ರಶಿಯಾದ ಬೆಂಬಲದಿಂದ ಇಡೀ ಜಗತ್ತಿನಲ್ಲಿ ಕಮ್ಯೂನಿಸಂ ತನ್ನ ಕರಾಳಬಾಹುಗಳನ್ನು ಚಾಚುತ್ತಿದೆ, ಅದರಿಂದ ಎಂದು ಮೊದಲು ಹೇಳಲಾಯಿತು. ಕಮ್ಯೂನಿಷ್ಟ್ ದೇಶಗಳು ಒಂದು ಬೃಹತ್ ಒಳಸಂಚನ್ನು ರೂಪಿಸಿವೆ ಎಂದು ಹೇಳಲಾಯಿತು. ಉತ್ತರ ವಿಯೆಟ್‌ನಾಮ್‌ನ ಫ್ಯಾಕ್ಟರಿಗಳ ಮೇಲೆ ವಿಮಾನ ದಾಳಿ ಮಾಡಿ ಆ ದೇಶದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬನ್ನು ಮುರಿಯುವುದಕ್ಕಾಗಿ ಎಂದು ಹೇಳಲಾಯಿತು. ಇವೆಲ್ಲವೂ ಅಪ್ಪಟ ಸುಳ್ಳುಗಳು! ಯಾವ ವಾಸ್ತವಗಳೂ ಗೊತ್ತಿರದ, ಗುಪ್ತಚರ ಸಂಸ್ಥೆಗಳು ಕೊಟ್ಟ ವರದಿಗಳನ್ನು ಅಲಕ್ಷಿಸಿ ಈ ಪಂಡಿತ, ಆಡಳಿತಗಾರ, ಸೇನಾಧಿಕಾರಿಗಳ ಗುಂಪು ಬೃಹತ್ ಸುಳ್ಳುಗಳ ಸರಣಿಯನ್ನೇ ಹುಟ್ಟುಹಾಕಿತು. ಆ ಸಣ್ಣ ದೇಶವು ಸೋಲಲಿಲ್ಲ; ವಿಶ್ವದಲ್ಲಿ ಮಾತ್ರವಲ್ಲ ಅಮೇರಿಕದ ಯುವ ತಲೆಮಾರು ಹಾಗೂ ಅನೇಕ ಬುದ್ಧಿ ಜೀವಿಗಳು ಈ ಯುದ್ಧವನ್ನು ವಿರೋಧಿಸಿದರು. ಆಗ ಗೋಲ್ ಪೋಸ್ಟನ್ನು ಬದಲಾಯಿಸಿ, 'ಇಲ್ಲ! ನಮ್ಮ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಮಾತ್ರ ಈ ಯುದ್ಧ'ವೆಂದು ಹೇಳಲಾಯಿತು! ಅಂದರೆ ಯುದ್ಧದ ಸೋಲಿನ ಪರಿಣಾಮವೇನೆ ಆಗಲಿ, ದೊಡ್ಡಣ್ಣ ಅಮೇರಿಕದ ಪ್ರತಿಷ್ಠೆಯ ಹಾಳಾಗಬಾರದು. ಇದೂ ಸಾಲದು ಅಂದಾಗ, ಈ ಗುಂಪು ಸತ್ಯವನ್ನೂ ಹೇಳಿತು – ನಮ್ಮ ರಾಷ್ಟ್ರದ ಅಧ್ಯಕ್ಷರಿಗೆ ಮುಂದಿನ ಚುನಾವಣೆಯಲ್ಲಿ ಸೋಲಾಗಬಾರದು! ಇದು ಎಂಥ ಕರಾಳವಾದ ಸತ್ಯವೆನ್ನುವುದನ್ನು ಅರ್ಥಮಾಡಿಕೊಳ್ಳಲು ಶ್ರಮಪಡಬೇಕಾಗುತ್ತದೆ. ಮಿಲಿಯನ್ ಸಂಖ್ಯೆಯ ಮನುಷ್ಯ ಜೀವಿಗಳನ್ನು ಕೊಲ್ಲುವ ಯುದ್ಧಕ್ಕೆ ಪರಿಣಿತರು ಕೊಡುವ ಸಮರ್ಥನೆಯೆಂದರೆ "image management" ಮತ್ತು ಸಾರ್ವಜನಿಕ ಅಭಿಪ್ರಾಯ ರೂಪಿಸುವುದು! ಇದಕ್ಕಾಗಿ ಅಮೇರಿಕನ್ ಸೈನ್ಯದ ದಾಳಿಗಳು ಎಲ್ಲಿ ನಡೆದವು, ಎಷ್ಟು ಜನ ಸತ್ತರು ಇವೆಲ್ಲವುಗಳ ಬಗ್ಗೆ ಸುಳ್ಳು ದಾಖಲೆಗಳು, ವಿಶ್ಲೇಷಣೆಗಳು. ಅನೇಕ ತಿಂಗಳುಗಳ ವಿಮಾನ ದಾಳಿಗಳು ಆದ ಮೇಲೆ "ನಮ್ಮ target ಮೇಲೆ ಹೆಚ್ಚು ಪರಿಣಾಮವಾಗಲಿಲ್ಲ" ಎಂದು ಸಣ್ಣ ವರದಿ ಬರುತ್ತದೆ.

ಹನಾ ಆರೆಂಡ್ ಪ್ರಕಾರ ಮೊದಲನೇಯದಾಗಿ ಸುಳ್ಳು ಹೇಳ ಹೊರಟವನಿಗೆ ಸತ್ಯವು ಖಚಿತವಾಗಿ ಗೊತ್ತಿರುತ್ತದೆ. ಹೀಗಾಗಿ ಅದಕ್ಕೆ ವಿರುದ್ಧವಾದ ಅಸತ್ಯವನ್ನು ಹೇಳಿ ಅದನ್ನು ಜನರು ಒಪ್ಪುವಂತೆ ಮಾಡುವ ತಂತ್ರಗಳನ್ನು ಹುಡುಕಿಕೊಳ್ಳುತ್ತಾನೆ. ಒಂದು ಸರಕಾರವು ಅಥವಾ ಪ್ರಭುತ್ವವು ಇದನ್ನು ಮಾಡುವುದಕ್ಕಾಗಿ ಅತ್ಯಂತ ಸಮರ್ಥವಾದ ವ್ಯವಸ್ಥೆಯನ್ನೇ ನಿರ್ಮಿಸಿಕೊಳ್ಳುತ್ತದೆ. ವಿಶೇಷವಾಗಿ ಈ ಸುಳ್ಳುಗಳನ್ನು ದೇಶದ ಭದ್ರತೆಯ ನೆಪದಲ್ಲಿ ವ್ಯವಸ್ಥಿತವಾಗಿ ಹೇಳಲಾಗುತ್ತದೆ. ಪೆಂಟಗನ್ ಪೇಪರ್‌ಗಳ ಬರಹಗಾರರಲ್ಲಿ/ಸಹಭಾಗಿಗಳಲ್ಲಿ ಒಬ್ಬನಾದ ವ್ಯಕ್ತಿಯೊಬ್ಬನಿಗೆ ಈ ಸುಳ್ಳುಗಳ ಉತ್ಪಾದನೆಯ ಬಗ್ಗೆ ಭ್ರಮನಿರಸನವಾಗಿ, ಅನೇಕ



ದಾಖಲೆಗಳ ಪ್ರತಿ ಮಾಡಿಕೊಂಡು ಅಮೇರಿಕರ ಸಂಸತ್ತಿನ ಕಾಂಗ್ರೆಸ್ ಸಭೆಯ ಸದಸ್ಯರಿಗೆ ಕೊಡುತ್ತಾನೆ. ಆದರೆ ಅವರಿಗೆ ಇದರಲ್ಲಿ ಯಾವ ಆಸಕ್ತಿಯೂ ಇರುವುದಿಲ್ಲ! ಆಗ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಈ ವರದಿಗಳು ತಲುಪಿ ಪ್ರಕಟವಾಗುತ್ತವೆ. ಅಮೇರಿಕದ ಸರಕಾರವು ಈ ದಾಖಲೆಗಳು ದೇಶದ ರಕ್ಷಣೆಗೆ ಸಂಬಂಧಪಟ್ಟ ರಹಸ್ಯ ದಾಖಲೆಗಳು ಎಂದು ಅಲ್ಲಿಯ ಉಚ್ಚ ನ್ಯಾಯಾಲಯದ ಮೊರೆ ಹೋಗುತ್ತದೆ. ಆದರೆ ಸರಕಾರದ ವಾದವನ್ನು ನ್ಯಾಯಾಲಯವು ತಿರಸ್ಕರಿಸುತ್ತದೆ. ಹೀಗಾಗಿ ಪೆಂಟಗಾನ್ ಪೇಪರ್ಸ್‌ಗಳ ಚರ್ಚೆಯು ಸಾರ್ವಜನಿಕ ವಲಯದಲ್ಲಿಯೂ ನಡೆಯುತ್ತದೆ.

ಹನಾ ಅರೆಂಡ್‌ಳ 'Lying in Politics' ಪ್ರಬಂಧವು ಶ್ರೇಷ್ಠ ರಾಜಕೀಯ ವಿಶ್ಲೇಷಣೆಯಾಗಿದೆ. ಆಧುನಿಕ ಪ್ರಭುತ್ವಗಳು ತಮ್ಮ ಪ್ರಬಲವಾದ ಸೈನಿಕ, ಗೂಢಚರ್ಯೆ, ಮಾಧ್ಯಮ ವ್ಯವಸ್ಥೆಗಳನ್ನು ಬಳಸಿಕೊಂಡು ಕಂತೆ ಕಂತೆ ಸುಳ್ಳುಗಳನ್ನು ಉತ್ಪಾದನೆ ಮಾಡುತ್ತವೆ. ಆ ಸುಳ್ಳುಗಳನ್ನು ಬಹಿರಂಗಗೊಳಿಸುವವರನ್ನು ಅತೀವ ಕಿರುಕುಳಕ್ಕೆ ಒಳಪಡಿಸುತ್ತದೆ. ಹಾಗಾದರೆ ಸತ್ಯಕ್ಕೆ ಉಳಿಗಾಲವೇ ಇಲ್ಲವೆಂದು ಹನಾ ಹೇಳುತ್ತಿದ್ದಾರೆಯೆ? ಇಲ್ಲ. ಪ್ರಬಂಧದ ಕೊನೆಗೆ ಬರುವ ಈ ಮಾತುಗಳ ಇಂದು ನಮಗೆ ದಾರಿದೀಪವಾಗಬಲ್ಲವು.

"…. ಸಂವಿಧಾನವು ನೀಡಿರುವ ರಕ್ಷಣೆ ಹಾಗೂ ಭರವಸೆಗಳನ್ನು ತಪ್ಪಿಸಿ; ಯಾರು ಹೆದರುವುದಿಲ್ಲವೋ ಯಾರು ಜೈಲಿಗೆ ಹೋಗುತ್ತೇವೆ ಆದರೆ ನಮ್ಮ ಸ್ವಾತಂತ್ರ್ಯಗಳನ್ನು ಕಳೆದುಕೊಳ್ಳುವುದಿಲ್ಲ ಎನ್ನುತ್ತಾರೋ, ಅವರನ್ನು ಹೆದರಿಸುವ ಪ್ರಭುತ್ವದ ಅರೆಮನಸ್ಸಿನ ಪ್ರಯತ್ನಗಳಿಂದಾಗಿ ನಮ್ಮ ಪ್ರಜಾತಂತ್ರವು ನಾಶವಾಗಲಾರದು."

ಅಂತೂ ನಾವು ಸುಲಭವಾಗಿ ನಂಬಿ ಬಿಡುವ "ಸತ್ಯಗಳನ್ನು" ಪ್ರಭುತ್ವವು ಯಾವ ಕಾರಣಕ್ಕಾಗಿ ಸೃಷ್ಟಿಸಿದೆ ಎನ್ನುವ ನಿರಂತರವಾದ ಎಚ್ಚರವು ಬೇಕು. ■



ಹಿಂದುತ್ವ ಭಯೋತ್ಪಾದನೆ ಕುರಿತು ನಾಚಿಕೆಗೇಡಿನ ತೀರ್ಪು

ಸಮಝೋತಾ, ಮಲೆಗಾಂವ್, ಮೆಕ್ಕಾ ಮಸೀದಿ ಮತ್ತು ಅಜ್ಮೇರ್ ಷರೀಫ್ ಸ್ಫೋಟ ಪ್ರಕರಣಗಳು ಹಿಂದೂ ಉಗ್ರಗಾಮಿಗಳು ಭಯೋತ್ಪಾದನೆ ದಾಳಿಗಳನ್ನು ಯೋಜಿಸಿದ್ದಾರೆ ಅಥವಾ ಕಾರ್ಯರೂಪಕ್ಕೆ ತಂದಿದ್ದಾರೆ ಎಂಬುದನ್ನು ಮೋದಿ ಸರಕಾರ ಗುರುತಿಸುವುದೂ ಇಲ್ಲ ಒಪ್ಪುವುದೂ ಇಲ್ಲ. ಮೋದಿ ಸರಕಾರದ ಪ್ರಕಾರ ಮುಸ್ಲಿಂ ಉಗ್ರಗಾಮಿಗಳು ಮಾತ್ರವೇ ಭಯೋತ್ಪಾದನೆ ಕೃತ್ಯಗಳನ್ನು ನಡೆಸುತ್ತಾರೆಯೇ ಹೊರತು ಹಿಂದೂ ಉಗ್ರಗಾಮಿಗಳಲ್ಲ. ಈ ಮೈನಡುಗಿಸುವ ಸಂದೇಶವನ್ನು ಸಾರಲು ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನೇ ಬುಡಮೇಲು ಮಾಡಲಾಗುತ್ತಿದೆ.



* ಪ್ರಕಾಶ್ ಕಾರಟ್

ಸಮ್‌ಝೋತಾ ರೈಲು ಸ್ಫೋಟ ಪ್ರಕರಣದಲ್ಲಿ ಅಸೀಮಾನಂದ (ಮೂಲ ಹೆಸರು ನಬ ಕುಮಾರ್ ಸರ್ಕಾರ್) ಮತ್ತು ಇತರ ಮೂವರನ್ನು ನಿರ್ದೋಷಿ ಎಂದು ಘೋಷಿಸಿರುವುದು ಉಗ್ರ ಹಿಂದುತ್ವ ನಮೂನೆಯ ಭಯೋತ್ಪಾದಕರನ್ನು ಅವರು ಮಾಡಿದ ಅಪರಾಧಗಳಿಗಾಗಿ ಶಿಕ್ಷೆ ವಿಧಿಸಲು ಭಾರತದ ಕ್ರಿಮಿನಲ್ ನ್ಯಾಯ ವ್ಯವಸ್ಥೆ ಸಮರ್ಥವಾಗಿಲ್ಲ ಎನ್ನುವುದನ್ನು ಇನ್ನೊಮ್ಮೆ ನೆನಪಿಸಿದೆ. ಇದು ನಾಚಿಕೆಗೇಡಿನ ಸಂಗತಿ.

2006 ಮತ್ತು 2008ರ ನಡುವೆ ಉಗ್ರ ಹಿಂದುತ್ವ ಗುಂಪುಗಳ ಜಾಲವು ಆರು ಭಯೋತ್ಪಾದನೆ ಕೃತ್ಯಗಳನ್ನು ನಡೆಸಿತ್ತು. ಅಸೀಮಾನಂದ, ಪ್ರಜ್ಞಾ ಠಾಕೂರ್ ಮತ್ತು ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ್ ಈ ಕೃತ್ಯಗಳ ಪ್ರಮುಖ ಸಂಚುಕೋರರು.

ಆರ್‌ಎಸ್‌ಎಸ್–ವಿಎಚ್‌ಪಿ ಕಾರ್ಯಕರ್ತನಾದ ಅಸೀಮಾನಂದ ಈ ಹಿಂದೆ ಮೆಕ್ಕಾ ಮಸೀದಿ ಸ್ಫೋಟ ಮತ್ತು ಅಜ್ಮೇರ್ ದರ್ಗಾ ಸ್ಫೋಟ ಪ್ರಕರಣಗಳಲ್ಲಿಯೂ ನಿರ್ದೋಷಿ ಎಂದು ಘೋಷಿತನಾಗಿದ್ದ. ಮುಸ್ಲಿಂ ಪ್ರಾರ್ಥನಾ ಸ್ಥಳಗಳ ಮೇಲಿನ ಭಯೋತ್ಪಾದನಾ ದಾಳಿಗಳ ಪ್ರಮುಖ ಸಂಘಟಕ ಈತನೇ ಎಂದು ಪರಿಗಣಿಸಲಾಗಿದೆ. ಈ ಎರಡೂ ಪ್ರಕರಣಗಳ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತನಿಖೆ ನಡೆಸಿತ್ತು. ನರೇಂದ್ರ ಮೋದಿ ಆಡಳಿತದಡಿಯಲ್ಲಿ, ಹಿಂದುತ್ವ ಉಗ್ರಗಾಮಿ ಗುಂಪುಗಳಿಗೆ ಸಂಬಂಧಿಸಿದ ಉಗ್ರಗಾಮಿ ಪ್ರಕರಣಗಳನ್ನು ಕೀಳಂದಾಜು ಮಾಡಿದ ಕುಖ್ಯಾತಿಯನ್ನು ಎನ್‌ಐಎ ಹೊಂದಿದೆ. 2017ರಲ್ಲಿ ಒಂಬತ್ತು ಜನರ ಸಾವಿಗೆ ಕಾರಣವಾದ ಮೆಕ್ಕಾ ಮಸೀದಿ ಸ್ಫೋಟ ಪ್ರಕರಣದಲ್ಲಿ ಅಸೀಮಾನಂದ ಸಹಿತ ಎಲ್ಲಾ ಆರೋಪಿಗಳನ್ನು ಬಿಡುಗಡೆ ಮಾಡಲಾಯಿತು.

ಎನ್‌ಐಎ ನಿರ್ವಹಿಸಿದ ಅಜ್ಮೇರ್ ದರ್ಗಾ ಸ್ಫೋಟ ಪ್ರಕರಣದಲ್ಲಿ ಕೂಡ ಅಸೀಮಾನಂದ ಮತ್ತು ಇತರ ಆರು ಮಂದಿಯನ್ನು ನಿರ್ದೋಷಿ ಎಂದು ಸಾರಲಾಯಿತು. ಈ ಪ್ರಕರಣದಲ್ಲಿ ಮಾತ್ರವೇ ಇಬ್ಬರು ಆರ್‌ಎಸ್‌ಎಸ್ ಕಾರ್ಯಕರ್ತರನ್ನು ತಪ್ಪಿತಸ್ಥರೆಂದು ಘೋಷಿಸಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಆದರೆ ಆ ಶಿಕ್ಷೆಗೆ ಹೈಕೋರ್ಟ್ ತಡೆ ನೀಡಿದೆ. 2008ರ ಮಾಲೆಗಾಂವ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ಞಾ ಠಾಕೂರ್ ವಿರುದ್ಧದ 'ಮೋಕಾ' ಕಾನೂನು ಅನ್ವಯದ ಆರೋಪಗಳನ್ನು ಎನ್‌ಐಎ ಕೈಬಿಟ್ಟಿತು. ಆದರೆ ವಿಶೇಷ ನ್ಯಾಯಾಲಯವು ಕಾನೂನುಬಾಹಿರ ಚಟುವಟಿಕೆಗಳ ನಿಷೇಧ (ಯುಎಪಿಎ) ಕಾನೂನು ಅನ್ವಯ ಆಕೆ ವಿರುದ್ಧದ ಆರೋಪಗಳನ್ನು ಪುನಃ ಕೈಗೆತ್ತಿಕೊಂಡಿತು.



ವ್ಯಂಗ್ಯಚಿತ್ರ: ಆರ್. ಪ್ರಸಾದ್

ಈ ಪ್ರಕರಣದಲ್ಲಿ ಮೃದು ಧೋರಣೆ ತಾಳುವಂತೆ ತನ್ನ ಮೇಲೆ ಎನ್‌ಐಎ ಒತ್ತಡ ಹೇರುತ್ತಿದೆ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ರೋಹಿಣಿ ಸಾಲಿಯಾನ್ ದೂರಿದಾಗಲೇ ಈ ಪ್ರಕರಣದಿಂದ ಪ್ರಜ್ಞಾ ಠಾಕೂರ್ ಮತ್ತು ಶ್ರೀಕಾಂತ್ ಪುರೋಹಿತ್‌ರನ್ನು ದೋಷಮುಕ್ತಗೊಳಿಸಲು ಎನ್‌ಐಎ ಪ್ರಯತ್ನಿಸುತ್ತಿರುವುದು ಬಯಲಾಗಿತ್ತು. ಪ್ರಜ್ಞಾ ಮತ್ತು ಪುರೋಹಿತ್‌ಗೆ ಜಾಮೀನು ನೀಡುವುದನ್ನು ಎನ್‌ಐಎ ವಿರೋಧಿಸಲಿಲ್ಲ.

ಸಮಝೋತಾ ರೈಲು ಸ್ಫೋಟ ಪ್ರಕರಣ ಅತ್ಯಂತ ಘೋರ ಭಯೋತ್ಪಾದನೆ ಪ್ರಕರಣಗಳಲ್ಲಿ ಒಂದಾಗಿದೆ. ಇದೀಗ ಹೊರಬಿದ್ದಿರುವ ನ್ಯಾಯಾಂಗದ ತೀರ್ಪು ಈ ಭಯೋತ್ಪಾದನೆ ಘಟನೆಗೆ ಯಾರೊಬ್ಬರೂ ಹೊಣೆಗಾರರಲ್ಲ ಎಂಬ ಸಂದೇಶವನ್ನು ಸಾರುತ್ತದೆ. ಆರ್‌ಎಸ್‌ಎಸ್ ಸಂಯೋಜಿತ ಸಂಘಟನೆಗಳ ವ್ಯಕ್ತಿಗಳಿಗೂ ಈ ಪ್ರಕರಣಕ್ಕೂ ನಂಟು ಇದೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿದ್ದರೂ ಈ ರೀತಿ ಆಗಿದೆ. ಹರ್ಯಾಣ ಪೊಲೀಸ್ ಇಲಾಖೆಯ ವಿಶೇಷ ತನಿಖಾ ತಂಡ ಮೊದಲು ಈ ಪ್ರಕರಣದ ತನಿಖೆ ನಡೆಸಿತ್ತು. ಆ ತಂಡ ರೈಲಿನಲ್ಲಿ ಸ್ಫೋಟಗೊಳ್ಳದೆ ಉಳಿದಿದ್ದ ಬಾಂಬ್‌ನ ಭಾಗಗಳನ್ನು ವಶಪಡಿಸಿಕೊಂಡಿದ್ದು ಅದನ್ನು ಇಂದೋರ್‌ನಲ್ಲಿ ಖರೀದಿಸಿದವರು ಯಾರು ಎನ್ನುವುದನ್ನು ಪತ್ತೆ ಮಾಡಿತ್ತು. ಬಾಂಬ್‌ಅನ್ನು ಇರಿಸಿದ್ದ ಸೂಟ್‌ಕೇಸನ್ನು ಕೂಡ ತಂಡ ಪತ್ತೆ ಹಚ್ಚಿ ಅದನ್ನು ನಗರದ ಯಾವ ಅಂಗಡಿಯಲ್ಲಿ ಖರೀದಿಸಲಾಗಿತ್ತು ಎನ್ನುವುದನ್ನೂ ಕಂಡುಹಿಡಿದಿತ್ತು. ಅದನ್ನು ಖರೀದಿಸಿದ ಇಬ್ಬರು ವ್ಯಕ್ತಿಗಳನ್ನು ಅಂಗಡಿಯ ಸಹಾಯಕರು ಗುರುತು ಹಿಡಿದಿದ್ದರು.

ಈ ಎಲ್ಲಾ ಪ್ರಕರಣಗಳಲ್ಲಿನ ವಿಧಾನ ಒಂದೇ ರೀತಿಯಾಗಿದೆ– ದುರ್ಬಲ ಪ್ರಾಸಿಕ್ಯೂಷನ್, ಸಾಕ್ಷಿಗಳು ತಿರುಗಿ ಬಿದ್ದಿರುವುದು ಹಾಗೂ ಈ ಪ್ರಕರಣಗಳನ್ನು ಸರಿಯಾಗಿ ತನಿಖೆಗೊಳಪಡಿಸುವಲ್ಲಿ ಎನ್‌ಐಎ ಯಲ್ಲಿ ದೃಢತೆಯ ಕೊರತೆ. ಮೆಕ್ಕಾ ಮಸೀದಿ ಪ್ರಕರಣದಲ್ಲೇ ಆಗಲಿ ಅಜ್ಮೇರ್ ದರ್ಗಾ ಪ್ರಕರಣದಲ್ಲೇ ಆಗಲಿ ಅಸೀಮಾನಂದರನ್ನು ದೋಷಮುಕ್ತಗೊಳಿಸಿದ ಕೋರ್ಟ್ ಆದೇಶವನ್ನು ಎನ್‌ಐಎ ಪ್ರಶ್ನಿಸಲಿಲ್ಲ.

43 ಪಾಕಿಸ್ತಾನಿ ಪ್ರಜೆಗಳ ಸಹಿತ 68 ಜನರ ಸಾವಿಗೆ ಕಾರಣವಾದ ಸಮಝೋತಾ ರೈಲು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ನ್ಯಾಯಾಲಯಕ್ಕೆ ಮನವಿ ಮಾಡುವುದಿಲ್ಲ ಎಂದು ಕೇಂದ್ರ ಗೃಹಸಚಿವ ರಾಜನಾಥ ಸಿಂಗ್ ಅವರೇ ಹೇಳಿದ್ದಾರೆ. ಇದು ಬಿಜೆಪಿ ಸರಕಾರದ ರಾಜಕೀಯ ಪಕ್ಷಪಾತತನವನ್ನು ತೋರಿಸುತ್ತದೆ. ಇದು 'ನ್ಯಾಯದ ವಿಡಂಬನೆ' ಎಂದು ವರ್ಣಿಸಿದ ಪಾಕಿಸ್ತಾನ ಸರಕಾರಕ್ಕೆ ಪ್ರತಿಭಟನೆ ಸಲ್ಲಿಸಲು ಒಂದು ಅವಕಾಶವನ್ನು ಒದಗಿಸಿದೆ.

ಹಿಂದೂ ಉಗ್ರಗಾಮಿಗಳು ಭಯೋತ್ಪಾದನೆ ದಾಳಿಗಳನ್ನು ಯೋಜಿಸಿದ್ದಾರೆ ಅಥವಾ ಕಾರ್ಯರೂಪಕ್ಕೆ ತಂದಿದ್ದಾರೆ ಎಂಬುದನ್ನು ಮೋದಿ ಸರಕಾರ ಗುರುತಿಸುವುದೂ ಇಲ್ಲ ಒಪ್ಪುವುದೂ ಇಲ್ಲ ಎನ್ನುವುನ್ನು ಸಮಝೋತಾ, ಮಲೆಗಾಂವ್, ಮೆಕ್ಕಾ ಮಸೀದಿ ಮತ್ತು ಅಜ್ಮೇರ್ ಷರೀಫ್ ಸ್ಫೋಟ ಪ್ರಕರಣಗಳು ತೋರಿಸಿಕೊಟ್ಟಿವೆ. ಮೋದಿ ಸರಕಾರದ ಪ್ರಕಾರ ಮುಸ್ಲಿಂ ಉಗ್ರಗಾಮಿಗಳು ಮಾತ್ರವೇ ಭಯೋತ್ಪಾದನೆ ಕೃತ್ಯಗಳನ್ನು ನಡೆಸುತ್ತಾರೆಯೇ ಹೊರತು ಹಿಂದೂ ಉಗ್ರಗಾಮಿಗಳಲ್ಲ. ಈ ಮೈನಡುಗಿಸುವ ಸಂದೇಶವನ್ನು ಸಾರಲು ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನೇ ಬುಡಮೇಲು ಮಾಡಲಾಗುತ್ತಿದೆ.

ಅನು: ವಿಶ್ವ

"ನೀಚ ಹಿಂಸಾಕೃತ್ಯ ಶಿಕ್ಷಿಸಲ್ಪಡದೆ ಹೋಗುತ್ತಿದೆ"!

ಈ ತೀರ್ಪಿನ 160 ಪುಟಗಳ ಆದೇಶವನ್ನು ಮಾರ್ಚ್ 22ರಂದು ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ನ್ಯಾಯಾಧೀಶರು ಎನ್‌ಐಎ ಯನ್ನು ತೀವ್ರವಾಗಿ ಟೀಕಿಸುತ್ತ 'ಅತ್ಯುತ್ತಮ ಸಾಕ್ಷ್ಯ'ವನ್ನು 'ತಡೆದಿಟ್ಟು' ಅದನ್ನು ದಾಖಲಿಸಲಿಲ್ಲ, ತಾನು ಅತ್ಯಂತ ಬೇಸರದಿಂದ ಈ ತೀರ್ಪನ್ನು ನೀಡಬೇಕಾಗಿ ಬಂದಿದೆ, ಏಕೆಂದರೆ ಒಂದು 'ನೀಚ ಹಿಂಸಾಕೃತ್ಯ' ಶಿಕ್ಷಿಸಲ್ಪಡದೆ ಹೋಗುತ್ತಿದೆ ಎಂದು ಬರೆದಿರುವುದಾಗಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಮಾಧ್ಯಮಗಳಲ್ಲಿ ವರದಿಯಾಗಿದೆ.

........ಚುನಾವಣಾ ಆಯೋಗಕ್ಕೆ ಎಡಪಕ್ಷಗಳ ನಿಯೋಗದ ಆಗ್ರಹ

ಪುಟ 2 ರಿಂದ

ಎಪ್ರಿಲ್ 12ರಂದು 23 ಭಾರತೀಯ ಭಾಷೆಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂಬ ವರದಿಯಿದೆ. ಮತದಾನಗಳು ಎಪ್ರಿಲ್ 11 ರಿಂದ ಆರಂಭವಾಗಿ ಮೇ 19 ರ ವರೆಗೆ ನಡೆಯಲಿವೆ.. ಆದ್ದರಿಂದ ಚಿತ್ರದ ಪ್ರದರ್ಶನವನ್ನು ಮತದಾನ ಮುಗಿಯುವ ವರೆಗೆ ನಿಲ್ಲಿಸಬೇಕು, ಮತ್ತು ಮಾಧ್ಯಮಗಳಲ್ಲಿ ಇದರ ಪ್ರಚಾರವನ್ನು ಇನ್ನು ಮುಂದೆ ಮಾಡಬಾರದು ಎಂದು ಎಡಪಕ್ಷಗಳ ನಿಯೋಗ ಅಗ್ರಹ ಪಡಿಸಿತು. ಏಕೆಂದರೆ ಇದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಎಂದು ಎಡಪಕ್ಷಗಳು ಆಯುಕ್ತರುಗಳ ಗಮನಕ್ಕೆ ತಂದರು. ಆಯೋಗ ಈ ಬಗ್ಗೆ ಯಾವುದೇ ಭರವಸೆಗಳನ್ನು ಕೊಡಲಿಲ್ಲ.

ವಿವಿಪಿಎಟಿ

ಒಟ್ಟಾರೆಯಾಗಿ ಆರಿಸಿದ 50% ದಷ್ಟು ಮತಗಟ್ಟೆಗಳಲ್ಲಿ ವಿವಿಪಿಎಟಿ (ಮತದಾರ ಪ್ರಮಾಣಿತ ಕಾಗದ ಪರಿಶೋಧನೆ ಜಾಡು) ದಾಖಲೆಗಳನ್ನು ಇಲೆಕ್ಟ್ರಾನಿಕ್ ಮತ ಯಂತ್ರಗಳ ಗಣನೆಯೊಂದಿಗೆ ಹೋಲಿಸಿ ನೋಡಬೇಕು ಎಂಬ ಬೇಡಿಕೆಯನ್ನು ಎಡಪಕ್ಷಗಳ ನಿಯೋಗ ಪುನರುಚ್ಚರಿಸಿತು. ಸುಪ್ರಿಂ ಕೋರ್ಟಿನ ನಿದೇಶನದಂತೆ, ಮಾರ್ಚ್ 28ರಂದು ಈ ವಿಷಯದಲ್ಲಿ ಒಂದು ಪ್ರಮಾಣ ಪತ್ರವನ್ನು ಚುನಾವಣಾ ಆಯೋಗ ಸಲ್ಲಿಸಲಿದೆ ಎಂದು ಅಯುಕ್ತರು ಹೇಳಿದರು.

ತ್ರಿಪುರ ಮತ್ತು ಪಶ್ಚಿಮ ಬಂಗಾಲದಲ್ಲಿ ಕಾನೂನು ಮತ್ತು ವ್ಯವಸ್ಥೆಯ ಪರಿಸ್ಥಿತಿ

ಎಡಪಕ್ಷಗಳ ನಿಯೋಗ ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಲ್ಲಿ ಗಂಭೀರ ಕಾನೂನು ಮತ್ತು ವ್ಯವಸ್ಥೆಯ ಸ್ಥಿತಿ ಇದೆ ಎಂಬ ಸಂಗತಿಯನ್ನು ಆಯೋಗದ ಗಮನಕ್ಕೆ ತಂದಿತು. ಅಲ್ಲಿ ಆಳುವ ಪಕ್ಷದ ಗೂಂಡಾಗಳು ಎಡರಂಗ ಮತ್ತು ಅದರ ಅಭ್ಯರ್ಥಿಗಳ ಮೇಲೆ ಗುರಿಯಿಟ್ಟಿದ್ದಾರೆ. ಮಾರ್ಚ್ 23ರಂದು ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದ ಎಡರಂಗ ಅಭ್ಯರ್ಥಿ ಮತ್ತು ಹಾಲಿ ಸಂಸತ್ ಸದಸ್ಯ ಶಂಕರಪ್ರಸಾದ್ ದತ್ತ ಅವರ ಮೇಲೆ ಮೂರು ಹಲ್ಲೆಗಳು ನಡೆದಿವೆ. ಮಾರ್ಚ್ 6ರಂದು ಆಯೋಗ ನೀಡಿದ ಭರವಸೆಯ ಹೊರತಾಗಿಯೂ ಇದು ನಡೆಯುತ್ತಿದೆ. ಭದ್ರತೆಯ ನಿರ್ದಿಷ್ಟ ವ್ಯವಸ್ಥೆಯನ್ನು ಕಲ್ಪಿಸದಿದ್ದರೆ ಇದು ಕೇವಲ ಆಶ್ವಾಸನೆ ಯಾಗಿಯೇ ಉಳಿಯುತ್ತದೆ ಎಂದು ಎಡಪಕ್ಷಗಳ ನಿಯೋಗ ಚುನಾವಣಾ ಆಯುಕ್ತರುಗಳಿಗೆ ಹೇಳಿದೆ.

ಪಶ್ಚಿಮ ಬಂಗಾಲದಲ್ಲೂ ಇದೇ ಕತೆ. ಕೂಚ್‌ಬೆಹಾರ್, ಡೈಮಂಡ್ ಹಾರ್ಬರ್ ನಂತಹ ಕ್ಷೇತ್ರಗಳಲ್ಲಂತೂ ಹಲ್ಲೆಗಳು ರಾಜಾರೋಷವಾಗಿ ನಡೆಯುತ್ತಿವೆ. ಚುನಾವಣಾ ರ್ತವ್ಯಗಳಿಗಾಗಿ ವರ್ಗಗೊಳ್ಳಬೇಕಾಗಿದ್ದ ಸರಕಾರೀ ಸಿಬ್ಬಂದಿ, ಈ ಹಿಂದೆ ರೂಪಿಸಿದ್ದ ನೊಯಮಾವಳಿಗಳನ್ನು ಉಪೇಕ್ಷಿಸಿ, ದೊಡ್ಡ ಸಂಖ್ಯೆಯಲ್ಲಿ ಇನ್ನೂ ಮೊದಲಿದ್ದ ಸ್ಥಳಗಳಲ್ಲೇ ಇದ್ದಾರೆ.

ಟಿಎಂಸಿ ಸಂಸತ್ ಸದಸ್ಯ ಮತ್ತು ಈಗ ಅಭ್ಯರ್ಥಿಯೂ ಆಗಿರುವ ಅಭಿಷೇಕ್ ಬ್ಯಾನರ್ಜಿಯ ಪತ್ನಿಯನ್ನು ಕುರಿತಾದ ವಿಲಕ್ಷಣ ಪ್ರಕರಣವನ್ನು ಎಡಪಕ್ಷಗಳ ನಿಯೋಗ ಚುನಾವಣಾ ಆಯೋಗದ ಗಮನಕ್ಕೆ ತಂದಿತು. ಮಾಧ್ಯಮ ವರದಿಗಳ ಪ್ರಕಾರ ಆಕೆಯ ಮೇಲ ಚಿನ್ನ ಮತ್ತು ವಿದೇಶಿ ಕರೆನ್ಸಿ ನೋಟುಗಳನ್ನು ಒಯ್ಯುತ್ತಿದ್ದ ಅರೋಪ ಬಂದಿದೆ. ಕಸ್ಟಮ್ಸ್ ಅಧಿಕಾರಿಗಳು ಈ ಕುರಿತು ಒಂದು ಎಫ್‌ಐಆರ್ ಹಾಕಿದ್ದರೂ, ಕಳ್ಳ ಸಾಗಾಣಿಕೆಯಾಗುತ್ತಿತ್ತು ಎಂಬ ವಸ್ತುಗಳ ಬಗ್ಗೆ ಕೇಸನ್ನು ದಾಖಲಿಸಿಲ್ಲ. ವಿಷಯದಲ್ಲಿ ಸತ್ಯವನ್ನು ಖಾತ್ರಿಪಡಿಸಿಕೊಳ್ಳಲು ಆಯೋಗ ಒಂದು ತನಿಖೆ ನಡೆಸಬೇಕು, ಏಕೆಂದರೆ ಇದರಲ್ಲಿ ಹಣಕಾಸಿನ ಅಂಶಗಳಿವೆ ಮತ್ತು ಮುಕ್ತ ಹಾಗೂ ನ್ಯಾಯುತ ಚುನಾವಣೆಗಳ ಮೇಲೆ ಇದು ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಎಡಪಕ್ಷಗಳ ನಿಯೋಗ ಹೇಳಿತು.

ನಿಯೋಗ ಈ ಎಲ್ಲ ವಿಷಯಗಳನ್ನು ಕುರಿತ ಮನವಿ ಪತ್ರವೊಂದನ್ನು ಚುನಾವಣಾ ಆಯುಕ್ತರುಗಳಿಗೆ ಸಲ್ಲಿಸಿತು.

ಸಿಪಿಐ(ಎಂ) ಅಭ್ಯರ್ಥಿಗಳ ಮೂರನೇ ಪಟ್ಟಿ ಬಿಡುಗಡೆ

ಮಾರ್ಚ್ 27 ರಂದು ಸಿಪಿಐ(ಎಂ) ಲೋಕಸಭಾ ಚುನಾವಣೆಯಲ್ಲಿ ಸಪರ್ಧಿಸುವ ಇನ್ನೂ ಆರು ಅಭ್ಯರ್ಥಿಗಳ ಹೆಸರುಗಳಿರುವ ಮೂರನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಇದರೊಂದಿಗೆ ಈ ಲೋಕಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ಸಂಖ್ಯೆ 71 ಆಗಿದೆ.

ರಾಜ್ಯ, ಕ್ಷೇತ್ರ ಮತ್ತು ಅಭ್ಯರ್ಥಿಗಳ ಹೆಸರುಗಳು:

ಬಿಹಾರ

ಉಜಿಯಾರ್‌ಪುರ	ಅಜಯ್ ಕುಮಾರ್

ರಾಜಸ್ಥಾನ

ಬಿಕಾನೇರ್ (ಎಸ್‌ಸಿ)	ಶೋಪತ್ ರಾಮ್
ಸಿಕರ್	ಆಮ್ರ ರಾಮ್
ಚುರು	ಪ್ರಕಟಿಸಲಾಗುವುದು

ಪಶ್ಚಿಮ ಬಂಗಾಲ

ಜಂಗೀಪುರ್	ಝುಲ್ಫಿಕರ್ ಅಲಿ
ಮಾಲ್ಡ ಉತ್ತರ	ಬಿಸ್ವನಾಥ್ ಘೋಷ್

“ಬಿಜೆಪಿ ಮೈತ್ರಿಕೂಟವನ್ನು ಸೋಲಿಸಿ–ಸಿಪಿಐ(ಎಂ) ಮತ್ತು ಎಡಪಂಥದ ಬಲವನ್ನು ಹೆಚ್ಚಿಸಿ–ಜಾತ್ಯತೀತ ಸರಕಾರದ ರಚನೆಯನ್ನು ಸಾಧ್ಯಗೊಳಿಸಿ”

ಸಿಪಿಐ(ಎಂ)ನ 17ನೇ ಲೋಕಸಭಾ ಚುನಾವಣಾ ಪ್ರಣಾಳಿಕೆ ಬಿಡುಗಡೆ

ಸಿಪಿಐ(ಎಂ) ಈ ಪ್ರಣಾಳಿಕೆಯಲ್ಲಿ, ಬಿಜೆಪಿಯ ಲೂಟಿ ಮತ್ತು ಚಮಚಾ ಬಂಡವಾಳಶಾಹಿಗೆ ಉತ್ತೇಜನೆ ನೀಡುವ, ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣ ಗೊಳಿಸುವ ಹಾಗೂ ಆರ್ಥಿಕ ಅಸಮಾನತೆ ಹೊಲಸು ಮಟ್ಟಗಳನ್ನು ತಲುಪುವಂತೆ ಮಾಡಿರುವ ಧೋರಣೆಗಳಿಗೆ ವಿರುದ್ಧವಾದ, ಜನಪರ ಅಭಿವೃದ್ಧಿಯ ಪರ್ಯಾಯ ಧೋರಣೆಗಳನ್ನು ದೇಶದ ಮುಂದಿಟ್ಟಿದೆ. – ಸೀತಾರಾಂ ಯೆಚುರಿ



17ನೇ ಲೋಕಸಭಾ ಚುನಾವಣೆಗೆ ಸಿಪಿಐ(ಎಂ)ನ ಚುನಾವಣಾ ಪ್ರಣಾಳಿಕೆಯನ್ನು ಮಾರ್ಚ್ 28 ರಂದು ಬಿಡುಗಡೆ ಮಾಡಲಾಗಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಪೊಲಿಟ್ ಬ್ಯುರೊ ಸದಸ್ಯರುಗಳಾದ ಪ್ರಕಾಶ ಕಾರಟ್, ಎಸ್.ಆರ್.ಪಿಳ್ಳ, ಬೃಂದಾ ಕಾರಟ್, ಹನ್ನನ್ ಮೊಲ್ಲ, ಸುಭಾಷಿಣಿ ಅಲಿ ಮತ್ತು ನೀಲೋತ್ಪಲ ಬಸು ಅವರೊಂದಿಗೆ ಪಕ್ಷದ ಕೇಂದ್ರ ಸಮಿತಿಯ ಕಚೇರಿಯಲ್ಲಿ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

ಪ್ರಣಾಳಿಕೆಯ ಆಡಿಯೋ ಆವೃತ್ತಿಯನ್ನೂ, ಅಂದರೆ ಧ್ವನಿಸುರಳಿಯನ್ನೂ ಬಿಡುಗಡೆ ಮಾಡಲಾಯಿತು. ಇದು ಬಹುಶಃ ದೇಶದ ಚುನಾವಣಾ ಇತಿಹಾಸದಲ್ಲಿಯೇ ಮೊದಲ ಬಾರಿ ಇರಬಹುದು, ಬಹುಶಃ ಜಗತ್ತಿನಲ್ಲೂ ಮೊದಲ ಬಾರಿಗೆ ಇರಬಹುದು ಎಂದ ಯೆಚುರಿಯವರು ಇದನ್ನು ನಮ್ಮ ಸಮಾಜದ ಅತ್ಯಂತ ಅಂಚಿಗೆ ತಳ್ಳಲ್ಪಟ್ಟಿರುವ, ಮತ್ತು ಅತ್ಯಂತ ಅನನುಕೂಲಕರ ಸ್ಥಿತಿಯಲ್ಲಿರುವ ವಿಭಾಗಗಳ ಅನುಕೂಲಕ್ಕಾಗಿ ಎಂದು ಹೇಳಿದರು.

ಪ್ರಸಕ್ತ ಚುನಾವಣೆ ಸ್ವತಂತ್ರ ಭಾರತದಲ್ಲಿನ ಅತ್ಯಂತ ನಿರ್ಣಾಯಕ ಚುನಾವಣೆಗಳಲ್ಲಿ ಒಂದು ಎಂದು ವರ್ಣಿಸಿದ ಯೆಚುರಿಯವರು ಪಕ್ಷದ ಮೂರು ಘೋಷಣೆಗಳನ್ನು ವಿವರಿಸುತ್ತ, ದೇಶದ ಭವಿಷ್ಯ ಪಣಕ್ಕೊಡ್ಡಲ್ಪಟ್ಟಿದೆ ಎಂದರು. ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರದ ಬುನಾದಿಗೇ ಅಪಾಯ ಬಂದಿದೆ. ಈ ಕಾರಣಕ್ಕಾಗಿ ಮತದಾರರು ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸಲೇ ಬೇಕಾಗಿದೆ. ಇದು ಬಿಜೆಪಿ–ವಿರೋಧಿ ಮತಗಳನ್ನು ಗರಿಷ್ಟ ಪ್ರಮಾಣದಲ್ಲಿ ಕ್ರೋಡೀಕರಿಸುವ ಮೂಲಕ ಮಾತ್ರ ಸಾಧ್ಯ ಎಂದು ಅವರು ಪುನರುಚ್ಚರಿಸಿದರು.

ಎರಡನೆಯದಾಗಿ, ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲ ಹೆಚ್ಚಬೇಕಾಗಿದೆ. ಮತ್ತು ಮೂರನೆಯದಾಗಿ, ಚುನಾವಣೆಗಳ ನಂತರ ಕೇಂದ್ರದಲ್ಲಿ ಒಂದು ಪರ್ಯಾಯ ಜಾತ್ಯತೀತ ಸರಕಾರ ರಚನೆಯಾಗುವಂತೆ ಮಾಡಬೇಕಾಗಿದೆ. “ಈ ಜಾತ್ಯತೀತ ಸರಕಾರ ಈಗ ತೀವ್ರ ದಾಳಿಗೆ ಒಳಗಾಗಿರುವ ನಮ್ಮ ಗಣತಂತ್ರವನ್ನು ರಕ್ಷಿಸಿಕೊಳ್ಳಬೇಕಷ್ಟೇ ಅಲ್ಲ, ಅದನ್ನು ಕ್ರೋಡೀಕರಿಸಬೇಕು ಮತ್ತು ಭಾರತೀಯ ಜನತೆಗೆ ಒಂದು ಉತ್ತಮ ಭಾರತವನ್ನು ಕಟ್ಟಬೇಕು” ಎಂದು ಯೆಚುರಿ ಹೇಳಿದರು.

ಆದರೆ, ಈ ರೀತಿ “ಭಾರತೀಯ ಜನತೆಗೆ ಒಂದು ಉತ್ತಮ ಭಾರತವನ್ನು ಕಟ್ಟಬೇಕಾದರೆ ಧೋರಣೆಯ ದಿಕ್ಕಿನಲ್ಲಿ ಒಂದು ತೀವ್ರಗಾಮಿ ಪಲ್ಲಟವನ್ನು ತರಬೇಕಾಗಿದೆ, ಮತ್ತು ಧೋರಣೆಗಳಲ್ಲಿನ ಈ ಪಲ್ಲಟಕ್ಕೆ ಸಂಸತ್ತಿನ ಹೊರಗೆ ನಾವು ನೇತೃತ್ವ ವಹಿಸಿರುವ ಜನಗಳ ಚಳುವಳಿಗಳು ಮತ್ತು ಹೋರಾಟಗಳೊಂದಿಗೇ, ಸಂಸತ್ತಿನ ಸದನಗಳ ಒಳಗೂ ಒತ್ತಡಗಳನ್ನು ತರಬೇಕಾಗುತ್ತದೆ, ಇದರಲ್ಲಿ ಎಡಪಕ್ಷಗಳ ಬಲವು ನಿರ್ಣಾಯಕವಾಗಿದೆ” ಎಂದು ಯೆಚುರಿ ಒತ್ತಿ ಹೇಳಿದರು.

ಸಿಪಿಐ(ಎಂ) ಈ ಪ್ರಣಾಳಿಕೆಯಲ್ಲಿ, ಬಿಜೆಪಿಯ ಲೂಟಿ ಮತ್ತು ಚಮಚಾ ಬಂಡವಾಳಶಾಹಿಗೆ ಉತ್ತೇಜನೆ ನೀಡುವ, ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣ ಗೊಳಿಸುವ ಹಾಗೂ ಆರ್ಥಿಕ ಅಸಮಾನತೆ ಹೊಲಸು ಮಟ್ಟಗಳನ್ನು ತಲುಪುವಂತೆ ಮಾಡಿರುವ ಧೋರಣೆಗಳಿಗೆ ವಿರುದ್ಧವಾದ, ಜನಪರ ಅಭಿವೃದ್ಧಿಯ ಪರ್ಯಾಯ ಧೋರಣೆಗಳನ್ನು ದೇಶದ ಮುಂದಿಟ್ಟಿದೆ ಎಂದು ಅವರು ಹೇಳಿದರು.

ಈ ಪರ್ಯಾಯ ಧೋರಣೆ ದೇಶದಲ್ಲಿನ ಕೃಷಿ ಸಂಕಟವನ್ನು ಪರಿಹರಿಸಲು ರೈತರಿಗೆ ಅವರ ಉತ್ಪನ್ನಗಳಿಗೆ ಸರಿಯಾದ ಬೆಲೆಗಳು ಮತ್ತು ಕಾರ್ಮಿಕರಿಗೆ 18,000ರೂ. ಕನಿಷ್ಟ ಸಂಬಳ ಲಭ್ಯವಾಗುವಂತೆ ಮಾಡುವುದರೊಂದಿಗೆ ಆರಂಭವಾಗುತ್ತದೆ.

ಆರ್ಥಿಕ ಧೋರಣೆಗಳ ಪರ್ಯಾಯ ಸ್ವರೂಪವನ್ನು ವಿವರಿಸುವಾಗ, ಯೆಚುರಿಯವರು, ದೇಶದಲ್ಲಿ ಸಂಪನ್ಮೂಲಗಳ ಕೊರತೆಯೇನೂ ಇಲ್ಲ ಎಂದು ಸೂಚಿಸಿದರು. ಚಮಚಾ ಬಂಡವಾಳಶಾಹಿ ಮತ್ತು ರಫೆಲ್ ವ್ಯವಹಾರದಂತಹ ಭ್ರಷ್ಟಾಚಾರದ ಹಗರಣಗಳಲ್ಲಿ ಈಗ ಆಗುತ್ತಿರುವ ನಮ್ಮ ಸಂಪನ್ಮೂಲಗಳ ಲೂಟಿಗೆ ತಡೆ ಹಾಕಿದರಷ್ಟೇ ಸಾಕು, ನಮ್ಮ ದೇಶದ ಪ್ರತಿ ನಾಗರಿಕರಿಗೂ ಶಿಕ್ಷಣ, ಗುಣಮಟ್ಟದ ಆರೋಗ್ಯ ಪಾಲನೆ, ಉದ್ಯೋಗ ಮತ್ತು ಒಂದು ಘನತೆಯ ಬದುಕನ್ನು ಒದಗಿಸಲು ಬೇಕಾಗುವ ಎಲ್ಲ ಸಂಪನ್ಮೂಲಗಳು ಲಭ್ಯ ಇವೆ.

ರಫೆಲ್ ಹಗರಣ, ಇತ್ತೀಚೆಗೆ 5 ವಿಮಾನ ನಿಲ್ದಾಣಗಳನ್ನು ಅದಾನಿಗೆ ವಹಿಸಿಕೊಟ್ಟದ್ದು, ಬ್ಯಾಂಕುಗಳ ಅಗಾಧ ಪ್ರಮಾಣದ ಸುಸ್ತಿಸಾಲಗಳು ಬಿಜೆಪಿಯ ಭ್ರಷ್ಟಾಚಾರದ ಉದಾಹರಣೆಗಳು ಎಂದು ಯೆಚುರಿ ಹೇಳಿದರು.

‘ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರಕಾರದ ಐದು ವರ್ಷಗಳ ಅಳ್ವಿಕೆ ದೇಶಕ್ಕೆ ಮತ್ತು ಜನತೆಗೆ ಒಂದು ಅಪ್ಪಟ ವಿಪತ್ತಾಗಿ ಪರಿಣಮಿಸಿದೆ’ ಎಂದು ಆರಂಭವಾಗುವ ಸಿಪಿಐ(ಎಂ) ಪ್ರಣಾಳಿಕೆಯಲ್ಲಿ ಅದು ಜಾರಿಗೊಳಿಸುವುದಾಗಿ ಪಣ ತೊಟ್ಟಿರುವ ಒಂದು ಪರ್ಯಾಯ ಧೋರಣೆಯ ವೇದಿಕೆಯ ಮುಖ್ಯಾಂಶಗಳೆಂದರೆ: ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಜಾತ್ಯತೀತತೆಯ ನೀತಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವುದು; ರೈತರು ತಮ್ಮ ಉತ್ಪನ್ನಗಳನ್ನು ಒಟ್ಟು ಉತ್ಪಾದನೆಯ ಖರ್ಚಿಗಿಂತ ಕನಿಷ್ಟ 50ಶೇ. ದಷ್ಟು ಹೆಚ್ಚಿಗೆ ಇರುವ ಕನಿಷ್ಟ ಬೆಂಬಲ ಬೆಲೆಯಲ್ಲಿ ಮಾರುವ ಹಕ್ಕನ್ನು ಜಾರಿಗೊಳಿಸುವುದು; ತಿಂಗಳಿಗೆ ರೂ.18,000ಕ್ಕಿಂತ ಕಡಿಮೆಯಿಲ್ಲದಂತೆ ಕಾರ್ಮಿಕರಿಗೆ ಶಾಸನಾತ್ಮಕ ಕನಿಷ್ಟ ಸಂಬಳ;ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ; ಪುಕ್ಕಟೆ ಆರೋಗ್ಯ ಪಾಲನೆಯ ಹಕ್ಕು; ಮಹಿಳೆಯರಿಗೆ ಸಂಸತ್ತಿನಲ್ಲಿ ಮತ್ತು ವಿಧಾನ ಸಭೆಗಳಲ್ಲಿ ಮೂರನೇ ಒಂದು ಮೀಸಲಾತಿ; ಒಂದು ಮೂಲಭೂತ ಸಂವಿಧಾನಿಕ ಹಕ್ಕಾಗಿ ಉದ್ಯೋಗದ ಹಕ್ಕು; ವಯಸ್ಸಾದವರಿಗೆ 6000 ರೂ. ಪಿಂಚಣಿ; ಖಾಸಗೀ ವಲಯದಲ್ಲಿ ಉದ್ಯೋಗದಲ್ಲಿ ಮತ್ತು ಶಿಕ್ಷಣದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿ; ಡಿಜಿಟಲ್ ಹಕ್ಕುಗಳು ಮತ್ತು ಒಂದು ಸಾರ್ವಜನಿಕ ಮೂಲರಚನೆಯಾಗಿ ಡಿಜಿಟಲ್ ಮೂಲರಚಣೆಯನ್ನು ಮಾನ್ಯ ಮಾಡುವುದು; ತೃತೀಯ ಲಿಂಗಿ ವ್ಯಕ್ತಿಗಳ ಹಕ್ಕುಗಳ ಮಸೂದೆಯನ್ನು ಅಂಗೀಕರಿಸುವುದು; ಆನುಪಾತಿಕ ಪ್ರಾತಿನಿಧ್ಯವನ್ನು ಭಾಗಶಃ ಪಟ್ಟಿ ಪದ್ಧತಿಯೊಂದಿಗೆ ಆರಂಭಿಸುವುದರೊಂದಿಗೆ ಚುನಾವಣಾ ವ್ಯವಸ್ಥೆಯ ಸುಧಾರಣೆ ಇತ್ಯಾದಿ.

ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಚುನಾವಣಾ ಬಾಂಡುಗಳನ್ನು ಕುರಿತಂತೆ ಸಿಪಿಐ(ಎಂ)ನ ನಿಲುವು ಸರಿಯೆಂಬುದು ಸಾಬೀತಾಗುತ್ತಿದೆ ಎಂದರು. ಭಾರತದ ಚುನಾವಣಾ ಆಯೋಗ ಕೂಡ ಸುಪ್ರಿಂ ಕೋರ್ಟಿನಲ್ಲಿ ಇಂತಹುದೇ ನಿಲುವನ್ನು ತಳೆದಿದೆ ಎಂದ ಅವರು ಚುನಾವಣಾ ಬಾಂಡುಗಳು ಕಾನೂನುಬದ್ಧಗೊಳಿಸಿರುವ ರಾಜಕೀಯ ಭ್ರಷ್ಟಾಚಾರ ಎಂದು ವರ್ಣಿಸಿದರು.

ಚುನಾವಣಾ ಪ್ರಣಾಳಿಕೆಯಲ್ಲದೆ, ಸಿಪಿಐ(ಎಂ) ಉದ್ಯೋಗ, ಶಿಕ್ಷಣ, ಕೃಷಿ ಮುಂತಾದ ವಿವಿಧ ವಿಷಯಗಳ ಮೇಲೆ ಕಿರುಹೊತ್ತಿಗೆಗಳ ಸರಣಿಯನ್ನು ಪ್ರಕಟಿಸಿದ್ದು ಅವನ್ನೂ ಈ ಪತ್ರಿಕಾ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಯಿತು.

ಸಿಪಿಐ(ಎಂ) ಪ್ರಣಾಳಿಕೆಯ ಮುಖ್ಯಾಂಶಗಳು:

1. ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಜಾತ್ಯತೀತತೆಯ ನೀತಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಿ.
2. ರೈತರು ತಮ್ಮ ಉತ್ಪನ್ನಗಳನ್ನು ಕನಿಷ್ಟ ಬೆಂಬಲ ಬೆಲೆಯಲ್ಲಿ ಮಾರುವ ಹಕ್ಕನ್ನು ಜಾರಿಗೊಳಿಸಿ; ಈ ಬೆಂಬಲ ಬೆಲೆ ಒಟ್ಟು ಉತ್ಪಾದನೆಯ ಖರ್ಚಿಗಿಂತ ಕನಿಷ್ಟ 50ಶೇ.ದಷ್ಟು ಹೆಚ್ಚಿರಬೇಕು.
3. ತಿಂಗಳಿಗೆ ರೂ.18,000ಕ್ಕಿಂತ ಕಡಿಮೆಯಿಲ್ಲದಂತೆ ಕಾರ್ಮಿಕರಿಗೆ ಶಾಸನಾತ್ಮಕ ಕನಿಷ್ಟ ಸಂಬಳ; ಇದನ್ನು ಬಳಕೆದಾರರ ಬೆಲೆ ಸೂಚ್ಯಂಕಕ್ಕೆ ಜೋಡಿಸಿರಬೇಕು.
4. ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪ್ರತಿ ಕುಟುಂಬಕ್ಕೆ 35 ಕೆ.ಜಿ. ಅಥವ ಪ್ರತಿ ವ್ಯಕ್ತಿಗೆ 7 ಕೆ.ಜಿ. ಆಹಾರಧಾನ್ಯಗಳು ಕೆ.ಜಿ.ಗೆ ಗರಿಷ್ಟ 2ರೂ. ಬೆಲೆಯಲ್ಲಿ.
5. ಪುಕ್ಕಟೆ ಆರೋಗ್ಯ ಪಾಲನೆಯ ಹಕ್ಕು; ಖಾಸಗಿ ವಿಮೆ ಆಧಾರಿತ ಆರೋಗ್ಯ ಪಾಲನೆ ಬೇಡ; ಆರೋಗ್ಯದ ಮೇಲೆ ಸಾರ್ವಜನಿಕ ವೆಚ್ಚವನ್ನು ಜಿ.ಡಿ.ಪಿ.ಯ 5ಶೇ.ಕ್ಕೆ ಏರಿಸಬೇಕು.
6. ಮಹಿಳೆಯರಿಗೆ ಸಂಸತ್ತಿನಲ್ಲಿ ಮತ್ತು ವಿಧಾನ ಸಭೆಗಳಲ್ಲಿ ಮೂರನೇ ಒಂದು ಮೀಸಲಾತಿಯನ್ನು ಜಾರಿಗೆ ತರಬೇಕು; ಮಹಿಳೆಯರು ಮತ್ತು ಮಕ್ಕಳ ಮೇಲಿನ ಹಿಂಸಾಚಾರವನ್ನು ಕೊನೆಗೊಳಿಸಲು ಸಮಗ್ರ ಕ್ರಮಗಳು.
7. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ–ಶಾಲೆಗಳು ಮತ್ತು ಉನ್ನತ ಶಿಕ್ಷಣದ ಬಹು ದೊಡ್ಡ ವಿಸ್ತರಣೆ; ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚದ ಪ್ರಮಾಣವನ್ನು ಜಿ.ಡಿ.ಪಿ.ಯ 6 ಶೇ.ಕ್ಕೆ ಏರಿಸಬೇಕು; ಶಿಕ್ಷಣ ವ್ಯವಸ್ಥೆಯ ಕೋಮುವಾದೀಕರಣವನ್ನು ಕೊನೆಗೊಳಿಸಬೇಕು, ಅದರ ಪ್ರಜಾಪ್ರಭುತ್ವ ಸ್ವರೂಪವನ್ನು ಖಾತ್ರಿಗೊಳಿಸಬೇಕು.
8. ಉದ್ಯೋಗದ ಹಕ್ಕು ಮೂಲಭೂತ ಸಂವಿಧಾನಿಕ ಹಕ್ಕು ಆಗಬೇಕು; ಉದ್ಯೋಗವಿಲ್ಲದವರಿಗೆ ನಿರುದ್ಯೋಗ ಭತ್ತೆಯನ್ನು ಕೊಡಬೇಕು.
9. ಎಲ್ಲ ನಾಗರಿಕರಿಗೆ ವೃದ್ಧಾಪ್ಯ ಪಿಂಚಣಿ–ಮಾಸಿಕ ಪಿಂಚಣಿ ಮೊತ್ತ ಕನಿಷ್ಟ ಸಂಬಳದ ಅರ್ಧಕ್ಕಿಂತ ಕಡಿಮೆಯಾಗಬಾರದು, ಯಾವುದೇ ಸಂದರ್ಭದಲ್ಲೂ ಇದು 6000ರೂ.ಗಿಂತ ಕಡಿಮೆಯಿರಬಾರದು.
10. ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣವನ್ನು

ಪುಟ 13 ನೋಡಿ



ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸಿಪಿಎಂ ಅಭ್ಯರ್ಥಿ ಎಸ್.ವರಲಕ್ಷ್ಮಿ ನಾಮಪತ್ರ ಸಲ್ಲಿಕೆ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸಿಪಿಎಂ ಅಭ್ಯರ್ಥಿಯಾಗಿ ಖ್ಯಾತ ಕಾರ್ಮಿಕ ನಾಯಕಿ ಎಸ್. ವರಲಕ್ಷ್ಮಿ ಅವರು ಮಾರ್ಚ್ 25ರಂದು ಸೋಮವಾರ ನಾಮಪತ್ರ ಸಲ್ಲಿಸಿದರು. ಅಂದು ಬೆಳಗ್ಗೆ 10 ಗಂಟೆಗೆ ಚಿಕ್ಕಬಳ್ಳಾಪುರದ ಒಕ್ಕಲಿಗರ ಕಲ್ಯಾಣ ಮಂಟಪದಿಂದ ನಡೆದ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪಕ್ಷದ ಸದಸ್ಯರು, ಕಾರ್ಯಕರ್ತರು, ಹಿತೈಷಿಗಳು ಭಾಗವಹಿಸಿದ್ದರು.

ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಕೇರಳದ ಮಾಜಿ ಶಿಕ್ಷಣ ಸಚಿವ ಹಾಗೂ ಸಿಪಿಎಂ ಪೊಲಿಟ್ ಬ್ಯೂರೋ ಸದಸ್ಯ ಎಂ.ಎ.ಬೇಬಿ, ಈ ಬಾರಿಯ ಚುನಾವಣೆಯಲ್ಲಿ ನಾವು ಸಿಪಿಎಂ ಪಕ್ಷಕ್ಕೆ ಮತವನ್ನು ಕೇಳುವ ಈ ಸಂದರ್ಭದಲ್ಲಿ, ಕಳೆದ 2014ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಮೋದಿ ದೇಶದ ಜನತೆಗೆ ಕೊಟ್ಟಂತಹ ಭರವಸೆಗಳು ಹಾಗೂ ಅವರು ಅಧಿಕಾರಕ್ಕೆ ಬಂದು 5 ವರ್ಷಗಳ ಕಾಲ ಅವರು ನಡೆದುಕೊಂಡ ರೀತಿ, ಧೋರಣೆಗಳು ಜನರನ್ನು ಯಾವ ರೀತಿ ದಿವಾಳಿಯೆಬ್ಬಿಸಿದವು ಅನ್ನೊದನ್ನು ಯೋಚಿಸಿ ಮತ ನೀಡಬೇಕು ಎಂದು ಕರೆ ನೀಡಿದರು.

ಈ ಕ್ಷೇತ್ರದಲ್ಲಿ ಸುಮಾರು ವರ್ಷಗಳಿಂದ ನಿರಂತರವಾಗಿ ಆಯ್ಕೆಗೊಂಡು ಏನೇನು ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು ಅನ್ನೋದನ್ನು ಕೂಡಾ ಆಲೋಚಿಸಬೇಕಿದೆ. ಸಿಪಿಎಂ, ಸಿಪಿಐ ಸೇರಿ ಇನ್ನಿತರ ಎಡ ಪಕ್ಷಗಳು ಸೇರಿ ಕಳೆದ 5 ವರ್ಷಗಳಲ್ಲಿ ಏನೆಲ್ಲಾ ಹೋರಾಟಗಳನ್ನು, ಕೆಲಸಗಳನ್ನು ಮಾಡಿದ್ದಾರೆ. ಈ ರಾಜ್ಯದ ದುಡಿಯುವ ವರ್ಗದ ಪರವಾಗಿ ಯಾವ ರೀತಿ ಹೋರಾಡಿದ್ದಾರೆ ಎನ್ನುವ ಅಂಶಗಳನ್ನು ಪರಿಶೀಲಿಸಿ ಎಡಪಕ್ಷಗಳ ಜಂಟಿ ಅಭ್ಯರ್ಥಿಯಾಗಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಿರುವ ಎಸ್. ವರಲಕ್ಷ್ಮಿ ಅವರನ್ನು ಬೆಂಬಲಿಸಿ ಮತ ನೀಡಿ ಗೆಲ್ಲಿಸಿ ಇನ್ನಷ್ಟು ದುಡಿಯುವ, ಶೋಷಿತರ ಪರ ಸೇವೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕ್ಷೇತ್ರದ ಜನತೆಯಲ್ಲಿ ಬೇಬಿ ಅವರು ಮನವಿ ಮಾಡಿದರು.

ಚಿಕ್ಕಬಳ್ಳಾಪುರ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಹಿಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಅನುಸರಿಸಿದ ನೀತಿಯಿಂದಾಗಿ ಇಲ್ಲಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. 2014ರ ಚುನಾವಣೆಯಲ್ಲಿ ಮೋದಿಯವರು ನಾನು ರೈತರ ಸಂಕಷ್ಟಗಳನ್ನು ಪರಿಹಾರ ಮಾಡ್ತೀನಿ. ಅದರ ಪರಿಹಾರಕ್ಕಾಗಿ ಇರುವ ಡಾ.ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿ ಮಾಡ್ತೀನಿ ಅನ್ನೋ ಭರವಸೆಯನ್ನು ಈ ದೇಶದ ಜನತೆಗೆ ನೀಡಿದ್ದರು. ಆದರೆ ವಾಸ್ತವವಾಗಿ ರೈತರನ್ನು ಕಡೆಗಣೆಸಿ ಮೊದಲಿಗಿಂತಲೂ ಹೆಚ್ಚು

ಪುಟ 16 ಕ್ಕೆ











ಹೋರಾಟಗಳಲ್ಲಿ ಜನರಿಗೆ ನಂಬಿಕೆ ಇದೆ

ಕಮ್ಯೂನಿಸ್ಟ್ ಪಕ್ಷಗಳು ಜನರು, ರೈತರು, ಕಾರ್ಮಿಕರ ಅಭಿವೃದ್ಧಿಗಾಗಿ, ಸಮಾನತೆಯ ಸಮಾಜಕ್ಕಾಗಿ ದಿನದ 24 ಗಂಟೆ ಹೋರಾಟ ನಡೆಸುತ್ತಿವೆ. ಆದರಿಂದ ನಾವು ಕ್ರಿಮಿನಲ್ ಪ್ರಕರಣಗಳನ್ನು ಸಂಪಾದಿಸಿದ್ದೇವೆ ಹೊರತು ಆಸ್ತಿಯಲ್ಲ. ಹೋರಾಟಗಳಲ್ಲಿ ಜನರಿಗೆ ನಂಬಿಕೆ ಇರುವುದರಿಂದ ಮತದಾರರು ನಮ್ಮ ಕೈಹಿಡಿಯುತ್ತಾರೆ ಎಂದು ನಂಬಿರುವೆ. ಈ ಚುನಾವಣೆ ಹಣ ಮತ್ತು ಬದ್ಧತೆ, ಸಿದ್ಧಾಂತ, ಜನರ ಅಭಿವೃದ್ಧಿ ನಡುವೆ ನಡೆಯುವ ಹೋರಾಟ, ಜನ ಹಣದ ಹಿಂದೆ ಹೋಗುವುದಿಲ್ಲ. ಬದ್ಧತೆಯನ್ನು ಬೆಂಬಲಿಸುತ್ತಾರೆ.

ಈ ಕ್ಷೇತ್ರದಲ್ಲಿ ಹಿಂದೆ ಆಯ್ಕೆಯಾದವರು ಯಾವುದೇ ರೀತಿಯಲ್ಲಿ ಅಭಿವೃದ್ಧಿ ಕಾರ್ಯ ಮಾಡಿಲ್ಲ ಎಂದು ಮತದಾರರೇ ಇವತ್ತು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಅನೇಕ ತಾಲ್ಲೂಕುಗಳು ಬರಗಾಲದ ತೀವ್ರ ಸಮಸ್ಯೆ ಎದುರಿಸುತ್ತಿವೆ. ಶಾಶ್ವತ ನೀರಾವರಿ ಒದಗಿಸುವ ಕೆಲಸದಲ್ಲಿ ಜನಪ್ರತಿನಿಧಿಗಳು ವಿಫಲತೆ ಅನುಭವಿಸಿರುವುದೇ ಇವತ್ತು ಜನರ ನೋವಿಗೆ ಪ್ರಮುಖ ಕಾರಣ.

ಚುನಾವಣೆಯಲ್ಲಿ ಜನರ ಸಮಸ್ಯೆಗಳು ಚರ್ಚೆಯಾಗಬೇಕು. ಆದರೆ ಅದು ಆಗುತ್ತಿಲ್ಲ. ನಾವು ಜನರ ಪ್ರಶ್ನೆಗಳ ಆಧಾರದಲ್ಲಿ ಮತ ಕೇಳಲು ನಿರ್ಧರಿಸಿದ್ದೇವೆ. ದುಡಿಯುವ ವರ್ಗದ ಬೆಂಬಲ ನಮಗೆ ಇದೆ. ಅವರು ಕೈಬಿಡುವುದಿಲ್ಲ ಎಂದು ನಂಬಿರುವೆ.

–ಎಸ್. ವರಲಕ್ಷ್ಮಿ, ಸಿಪಿಐಎಂ ಪಕ್ಷದ ಅಭ್ಯರ್ಥಿ

ಲೋಕಸಭಾ ಚುನಾವಣೆ 2019 ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ

ಮತದಾರರಿಗೆ ಸಿಪಿಐ(ಎಂ) ಮನವಿ

*** ರಾಜ್ಯ ಕಾರ್ಮಿಕರ ಮತ್ತು ಚಿಕ್ಕಬಳ್ಳಾಪುರದ ಜನತೆಯ ದನಿ ಲೋಕಸಭೆಯಲ್ಲಿ ಮೊಳಗಲು**
*** ಜಾತ್ಯತೀತ ಪ್ರಜಾಪ್ರಭುತ್ವ ಉಳಿಸಿ ಬೆಳೆಸಲು * ಜಾತ್ಯತೀತ ಬದಲಿ ಜನಪರ ಸರಕಾರಕ್ಕಾಗಿ**

ಹದಿನೇಳನೇ ಲೋಕಸಭಾ ಚುನಾವಣೆ ಘೋಷಣೆಯಾಗಿದೆ. ಇದು ಸಾಧಾರಣ ಚುನಾವಣೆಯಲ್ಲ. ಭಾರತದ ಭವಿಷ್ಯವನ್ನು ನಿರ್ಧರಿಸುವ ಒಂದು ಮಹತ್ವದ ಚುನಾವಣೆಯಾಗಲಿದೆ. ಏಕೆಂದರೆ ನಮ್ಮ ಜಾತ್ಯತೀತ ಪ್ರಜಾಪ್ರಭುತ್ವ ಅಪಾಯದಲ್ಲಿದೆ. ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ, ಪ್ರತಿ ವರ್ಷ 2 ಕೋಟಿ ಉದ್ಯೋಗಗಳು, ವಿದೇಶೀ ಕಪ್ಪು ಹಣ ವಾಪಸು ತಂದು ತಲಾ 15 ಲಕ್ಷ ರೂ. ಹಂಚುವುದು, ಭಯೋತ್ಪಾದನೆಯನ್ನು ತೊಡೆದು ಹಾಕುವುದೇ ಮುಂತಾದ ಮೋದಿ ನಾಯಕತ್ವದ ಬಿಜೆಪಿ ಸರಕಾರ ನೀಡಿದ್ದ ಯಾವುದೇ ಪ್ರಮುಖ ಆಶ್ವಾಸನೆಗಳನ್ನು ಪೂರೈಸುವಲ್ಲಿ ಅದು ವಿಫಲವಾಗಿದೆ. ಬದಲಿಗೆ ದೇಶದ ಜನಸಾಮಾನ್ಯರ ಎಲ್ಲಾ ಸಮಸ್ಯೆಗಳು ಉಲ್ಬಣಗೊಂಡಿವೆ. ಪ್ರಧಾನಿ ಮೋದಿಯವರ 'ಅಚ್ಛೇ ದಿನ್'ಗಳು ಅದಾನಿ, ಅಂಬಾನಿ ಮುಂತಾದ ಅವರ ಮಿತ್ರರಿಗೆ ಮಾತ್ರ ಬಂದಿವೆ. ಮಾತ್ರವಲ್ಲ, ಈ ಸರಕಾರ ನಮ್ಮ ಸಂವಿಧಾನದ ನಾಲ್ಕು ಆಧಾರಸ್ತಂಭಗಳು ಮತ್ತು ಸಂಸ್ಥೆಗಳನ್ನು ಬುಡಮೇಲು ಮಾಡಲು ಹೊರಟಿದೆ. ಸಂವಿಧಾನದ ನಾಲ್ಕು ಆಧಾರಸ್ತಂಭಗಳಾದ ಜಾತ್ಯತೀತ ಪ್ರಜಾಪ್ರಭುತ್ವ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ತತ್ವ ಈಗ ತೀವ್ರ ಅಪಾಯದಲ್ಲಿವೆ. ದೇಶ ಉಳಿಸಬೇಕಾದರೆ ಅವುಗಳನ್ನು ರಕ್ಷಿಸಿ ಬೆಳೆಸಬೇಕಾದರೆ, ಮೋದಿ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿ, ನಮ್ಮ ಸಂವೈಧಾನಿಕ ಗಣತಂತ್ರವನ್ನು ರಕ್ಷಿಸಿ ಇನ್ನಷ್ಟು ಬಲಪಡಿಸಬಲ್ಲ ಬದಲಿ ಜನಪರ ಆರ್ಥಿಕ ನೀತಿಗಳ ಜಾತ್ಯತೀತ ಸರಕಾರವನ್ನು ಅಧಿಕಾರಕ್ಕೆ ತರಬೇಕಾಗಿದೆ.

ಸಂವಿಧಾನದ ಈ ನಾಲ್ಕು ಆಧಾರಸ್ತಂಭಗಳನ್ನು ಉಳಿಸಿ ಬೆಳೆಸಲು, ಬದಲಿ ಜನಪರ ಆರ್ಥಿಕ ನೀತಿಗಳ ಜಾತ್ಯತೀತ ಸರಕಾರದ ರಚನೆಗೆ 17ನೇ ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರಬಲ ಪ್ರಾತಿನಿಧ್ಯ ಅಗತ್ಯವಾಗಿದೆ. ಏಕೆಂದರೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರ ಪರ್ಯಾಯ ಜನಪರ ನೀತಿಗಳನ್ನು ಪ್ರತಿನಿಧಿಸುತ್ತವೆ. ಅದಕ್ಕಾಗಿ ಸಿಪಿಐ(ಎಂ) ದೇಶದಾದ್ಯಂತ ಪಕ್ಷಕ್ಕೆ ಜನಬೆಂಬಲ ಇರುವ ಹಲವು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಇದರ ಭಾಗವಾಗಿ ಪಕ್ಷ ಹಿಂದೆ ಹಲವು ಬಾರಿ ಸ್ಪರ್ಧಿಸಿ ಪ್ರತಿನಿಧಿಸಿದ್ದ ವಿಧಾನಸಭೆ ಕ್ಷೇತ್ರಗಳಿರುವ ಮತ್ತು ಹಿಂದೆಯೂ ಸ್ಪರ್ಧಿಸಿದ್ದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಸಿಪಿಐ(ಎಂ) ನಿರ್ಧರಿಸಿದೆ. **ರಾಜ್ಯದ ದುಡಿಯುವ ಜನರ ಪರ ಹೋರಾಟಗಾರ್ತಿ, ಕಾರ್ಮಿಕರ ಅಪ್ರತಿಮ ನಾಯಕಿ, ಸಿಐಟಿಯು ರಾಜ್ಯ ಅಧ್ಯಕ್ಷರು, ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಮತ್ತು ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರು ಆಗಿರುವ, ದುಡಿಯುವ ಜನರ ಪರವಾಗಿ ದಣಿವರಿಯದ ಕೆಲಸ ಮಾಡುತ್ತಿರುವ ಎಸ್. ವರಲಕ್ಷ್ಮಿ ಅವರು ಸಿಪಿಐ(ಎಂ) ಅಭ್ಯರ್ಥಿಯಾಗಿರುತ್ತಾರೆ.** ಈ ಲೋಕಸಭಾ ಕ್ಷೇತ್ರದಲ್ಲಿ ಯಾವುದೇ ರಾಷ್ಟ್ರೀಯ ಪಕ್ಷ ಮಹಿಳಾ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತಿರುವುದು ಇದೇ ಮೊದಲು ಎಂಬುದು ಅವರ ಇನ್ನೊಂದು ಹೆಗ್ಗಳಿಕೆ.

ಸಿಪಿಐ(ಎಂ) ಈ ಲೋಕಸಭಾ ಕ್ಷೇತ್ರದಲ್ಲಿರುವ ಪ್ರದೇಶದಲ್ಲಿ ರೈತ–ಕಾರ್ಮಿಕರ ಮತ್ತು ಜನತೆಯ ಸಾಮಾನ್ಯ ಸಮಸ್ಯೆಗಳ ಪರಿಹಾರಕ್ಕೆ ಸತತವಾಗಿ ಹೋರಾಟ ನಡೆಸುತ್ತಾ ಬಂದಿದೆ. ಅವಿಭಜಿತ ಕೋಲಾರ ಜಿಲ್ಲೆಯ 60–70ರ ದಶಕದ ಪ್ರಸಿದ್ಧ ಭೂಹೋರಾಟಗಳ ನಾಯಕತ್ವ ಪಕ್ಷದ್ದಾಗಿತ್ತು. ಚಿಕ್ಕಬಳ್ಳಾಪುರ ಜಿಲ್ಲೆಯ ಬರ ಮತ್ತು ನೀರಿನ ಸಮಸ್ಯೆ ಬಗೆಹರಿಸಲು ಪರಮಶಿವಯ್ಯ ವರದಿಯ ಶಿಫಾರಸುಗಳನ್ನೊಳಗೊಂಡ ಶಾಶ್ವತ ನೀರಾವರಿ ಯೋಜನೆಯ ಜಾರಿಗೆ ದಶಕಗಳಿಂದ ಸತತ ಹೋರಾಟ ಮಾಡುತ್ತಾ ಬಂದಿದೆ. ಅದರ ಬದಲು ಕಾರ್ಯಸಾಧ್ಯವಲ್ಲದ ಅವೈಜ್ಞಾನಿಕ ಎತ್ತಿನಹೊಳೆ ಯೋಜನೆಯಿಂದ ಎರಡೇ ವರ್ಷಗಳಲ್ಲಿ ನೀರು ಒದಗಿಸಲಾಗುವುದು ಎಂಬ ಭರವಸೆ ಹತ್ತು ವರ್ಷಗಳಾದರೂ ಜಾರಿಯಾಗಿಲ್ಲ. ಬಾಗೇಪಲ್ಲಿ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿದ್ದ ಸಿಪಿಐ(ಎಂ)ನ ಹಿರಿಯ ನಾಯಕ ಜಿ.ವಿ.ಶ್ರೀರಾಮರೆಡ್ಡಿ ಶಾಶ್ವತ ನೀರಾವರಿ ಯೋಜನೆಯ ಜಾರಿಗೆ ಹೋರಾಟದ ನಾಯಕತ್ವ ವಹಿಸಿದ್ದಲ್ಲದೆ ಶಾಸಕರಾಗಿ ಬಾಗೇಪಲ್ಲಿ ಕ್ಷೇತ್ರದ ಬೆಳವಣಿಗೆಗೂ ಸತತವಾಗಿ ಶ್ರಮಿಸಿದ್ದಾರೆ. ಯಲಹಂಕ, ನೆಲಮಂಗಲ, ಹೊಸಕೋಟೆ, ದೇವನಹಳ್ಳಿ ಗಳ ಕೈಗಾರಿಕಾ ಕ್ಷೇತ್ರಗಳ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಎಸ್.ವರಲಕ್ಷ್ಮಿ ನಾಯಕತ್ವದ ಸಿಐಟಿಯು ಸತತವಾಗಿ ಹೋರಾಡುತ್ತಾ ಬಂದಿದೆ. ಇಡೀ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬಗರ್ ಹುಕುಂ ಸಾಗುವಳಿ ಭೂಮಿಯ ಹಕ್ಕುಪತ್ರ ಮುಂತಾದ ರೈತರ ಸಮಸ್ಯೆಗಳ ಪರಿಹಾರಕ್ಕೂ ಸತತವಾಗಿ ಪಕ್ಷ ಹೋರಾಡುತ್ತಾ ಬಂದಿದೆ. ಇಡೀ ಕ್ಷೇತ್ರದ ಸಾಮಾನ್ಯ ಸಮಸ್ಯೆಗಳಾದ ಕುಡಿಯುವ ನೀರು, ನಿರುದ್ಯೋಗ, ಕೃಷಿ–ಕೈಗಾರಿಕಾ ಅನಭಿವೃದ್ಧಿ, ಮೂಲ ಸೌಕರ್ಯಗಳ ಕೊರತೆಯ ಸಮಸ್ಯೆ ಪರಿಹಾರಕ್ಕೂ ಪಕ್ಷ ಹೋರಾಟ ನಡೆಸಿದೆ. ಇಂತಹ ಹೋರಾಟಗಳನ್ನು ಬಲಪಡಿಸಿ ಜನರ ಸಮಸ್ಯೆ ಪರಿಹರಿಸಲು ಲೋಕಸಭೆಯಲ್ಲಿ ಸಿಪಿಐ(ಎಂ) ಪ್ರಾತಿನಿಧ್ಯ ಹೆಚ್ಚಾಗುವುದು ಅಗತ್ಯವಾಗಿದೆ.

ಸಿಪಿಐ(ಎಂ) ಅಭ್ಯರ್ಥಿಯಾಗಿರುವ ವರಲಕ್ಷ್ಮಿಯವರು, ಕೋಲಾರದ ಮಾಲೂರು ತಾಲ್ಲೂಕಿನ ಹಳ್ಳಿಯೊಂದರ ಹಿಂದುಳಿದ ಸಮುದಾಯದ ಬಡಕುಟುಂಬದಿಂದ ಬಂದವರು. ಮುಂದೆ ಇವರ ಕುಟುಂಬ ಬೆಂಗಳೂರಿನ ಕುಂಬಳಗೋಡಿಗೆ ವಲಸೆ ಬಂದು ವರಲಕ್ಷ್ಮಿ ಒಂದು ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡು, ಸಂಜೆ ಕಾಲೇಜಿಗೆ ಸೇರಿ ವಿದ್ಯಾಭ್ಯಾಸ ಮುಂದುವರೆಸಿದರು. ಈ ಸಂದರ್ಭದಲ್ಲಿ ಅವರು ಕಾರ್ಮಿಕರ ಮುಂಚೂಣಿ ಸಂಘಟನೆ ಸಿಐಟಿಯು ನ ಸಂಪರ್ಕಕ್ಕೆ ಬಂದು, ಅಲ್ಲಿಂದ ಮುಂದಿನದ್ದು ಅವಿಸ್ಮರಣೀಯ ಕಾರ್ಮಿಕ ಹೋರಾಟಗಳ ಪರ್ವ.

ಕುಂಬಳಗೋಡು ಕಾರ್ಖಾನೆಯಲ್ಲಿ 1993ರಲ್ಲಿ ಕಾರ್ಮಿಕರು ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಸಿಡಿದೆದ್ದು ನಡೆಸಿದ ಹೋರಾಟದಲ್ಲಿ, ಪೊಲೀಸರು ವರಲಕ್ಷ್ಮಿಯವರಿಗೆ ಹೊಡೆದು, ಹಿಂಸಿಸಿ ಜೈಲಿಗಟ್ಟಿದರು. ಇದರಿಂದ ವಿಚಲಿತರಾಗುವ ಬದಲು ಜೈಲಿನಿಂದ ಬಿಡುಗಡೆ ಹೊಂದಿದ ಮರುವರ್ಷವೇ ಅವರು ಸಿಐಟಿಯು ನ ಪೂರ್ಣಾವಧಿ ಕಾರ್ಯಕರ್ತೆಯಾಗಿ ಕಾರ್ಮಿಕರನ್ನು ಸಂಘಟಿಸಲು ದೃಢಸಂಕಲ್ಪ ಮಾಡಿದರು. ಮುಂದಿನ ದಿನಗಳಲ್ಲಿ ಅಂಗನವಾಡಿ, ಬಿಸಿಯೂಟ, ಗುತ್ತಿಗೆ ಕಾರ್ಮಿಕರು ಹಾಗೂ ಆಶಾ ಕಾರ್ಯಕರ್ತೆಯರ ಅಲ್ಲದೇ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರ ಹಕ್ಕುಗಳಿಗಾಗಿ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಸಿಐಟಿಯು



ನೇತೃತ್ವದಲ್ಲಿ ಹೋರಾಟಗಳನ್ನು ಸಂಘಟಿಸುತ್ತಾ ಮುಂಚೂಣಿಯಲ್ಲಿ ನಿಂತರು. ದೇಶದ ಗಮನ ಸೆಳೆಯುವ ರೀತಿಯಲ್ಲಿ ಸಹಸ್ರಾರು ಮಹಿಳೆಯರ ಅಹೋರಾತ್ರಿ ಹೋರಾಟಗಳಲ್ಲಿ ತೊಡಗಿಸಿಕೊಂಡರು. ಕಳೆದ 25 ವರ್ಷಗಳಿಂದ ರಾಜ್ಯದ ಕಾರ್ಮಿಕರು, ಮಹಿಳೆಯರು ಮತ್ತು ದುಡಿಯುವ ಜನರ ಸೇವೆಗೆ ವರಲಕ್ಷ್ಮಿಯವರು ಪೂರ್ಣವಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ವರಲಕ್ಷ್ಮಿಯವರು ಸಿಐಟಿಯು ರಾಜ್ಯ ಘಟಕವೊಂದರ ಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದಾರೆ. ದುಡಿಯುವ ಜನರ ಪಕ್ಷವಾದ ಸಿಪಿಐ(ಎಂ)ನ ಪ್ರಮುಖ ರಾಜ್ಯ ನಾಯಕರಾಗಿ ಬೆಳೆದಿದ್ದಾರೆ.

ಈ ಬಾರಿ ಮತದಾನ ಮಾಡುವಾಗ, ಹಿಂದೆ ಹೇಳಿದ ಸಂವಿಧಾನದ ನಾಲ್ಕು ಆಧಾರಸ್ತಂಭಗಳಿಗೆ ಇರುವ ಅಪಾಯಗಳ ಬಗ್ಗೆ ಮತದಾರರು ವಿಶೇಷ ಎಚ್ಚರಿಕೆ ವಹಿಸಬೇಕು ಎಂದು ನಮ್ಮ ವಿನಂತಿ.

ಜಾತ್ಯತೀತ ಪ್ರಜಾಪ್ರಭುತ್ವ ತೀವ್ರ ಅಪಾಯದಲ್ಲಿದೆ. ಗೋರಕ್ಷಣೆ, ನೈತಿಕ ಪೋಲಿಸ್‌ಗಿರಿ ಮತ್ತು ಧರ್ಮ ರಕ್ಷಣೆಗಳ ಹೆಸರಲ್ಲಿ ಖಾಸಗಿ ಸೇನೆಗಳು ಯಾವುದೇ ಎಗ್ಗಿಲ್ಲದೆ ದಲಿತರು, ಮುಸ್ಲಿಮರು, ಮಹಿಳೆಯರ ಮೇಲೆ ಹಿಂಸಾತ್ಮಕ ದಾಳಿ ದೌರ್ಜನ್ಯಗಳನ್ನು ನಡೆಸುತ್ತಿವೆ. ಕೋಮುವಾದೀಕರಣ ಮನುವಾದೀಕರಣ ವಿಷದಂತೆ ಹಬ್ಬುತ್ತಿದ್ದು ಸಾಮಾಜಿಕ ಸೌಹಾರ್ದ ಕದಡಿದೆ. ಉಚ್ಛ ಶಿಕ್ಷಣ ಸಂಸ್ಥೆಗಳ ಮೇಲೆ ಅವುಗಳನ್ನು ನಾಶ ಮಾಡುವ ಅಥವಾ ಕೋಮುವಾದೀಕರಿಸುವ ಉದ್ದೇಶದಿಂದ ದಾಳಿ ಮಾಡಲಾಗುತ್ತಿದೆ. ಕಾರ್ಮಿಕರು, ರೈತರು ಮತ್ತಿತರ ಜನವಿಭಾಗಗಳ ಹಕ್ಕುಗಳ ದಮನ ಮಾಡಲಾಗುತ್ತಿದೆ. ಅಭಿವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ರಾಷ್ಟ್ರೀಯ ಭದ್ರತೆಯ ಹೆಸರಲ್ಲಿ ದಾಳಿ ಮಾಡಲಾಗುತ್ತಿದೆ.

ಸ್ವಾವಲಂಬನೆ ಆಧಾರಿತ ಆರ್ಥಿಕ ಬೆಳವಣಿಗೆಯ ಗುರಿಯಿಂದ ಈ ಸರಕಾರ ಮತ್ತಷ್ಟು ದೂರ ಸರಿದಿದೆ. ಐದು ವರ್ಷಗಳಲ್ಲಿ ಕೃಷಿ, ಕೈಗಾರಿಕೆ, ಇತರ ಕ್ಷೇತ್ರಗಳು ಸೇರಿದಂತೆ ಸಾಧಿಸಿದ ಒಟ್ಟಾರೆ ಆರ್ಥಿಕ ಬೆಳವಣಿಗೆ ಹಲವು ದಶಕಗಳಲ್ಲೇ ಅತ್ಯಂತ ಕಳಪೆಯಾಗಿದೆ. ಕಳೆದ 45 ವರ್ಷಗಳಲ್ಲೇ ನಿರುದ್ಯೋಗ ಅತ್ಯಂತ ಹೆಚ್ಚಾಗಿದೆ. ರೈತ ಮತ್ತು ಕೃಷಿಯ ಸಂಕಷ್ಟಗಳು ಇನ್ನಷ್ಟು ತೀವ್ರ ಮತ್ತು ಆಳಗೊಂಡಿದ್ದು ರೈತರ ಆತ್ಮಹತ್ಯೆಗಳು ಅವ್ಯಾಹತವಾಗಿ ಮುಂದುವರೆದಿವೆ. ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ ಕನಸಿನ ಗಂಟಾಯಿತು. ಸಾಲದಿಂದ ವಿಮೋಚನೆಯ ಆಶ್ವಾಸನೆ ಈಡೇರಲೇ ಇಲ್ಲ. ಉದ್ಯೋಗ ಖಾತ್ರಿ ಯೋಜನೆಯನ್ನು ಸಾಯಿಸಲಾಗುತ್ತಿದ್ದು ಗ್ರಾಮೀಣ ಕೂಲಿಕಾರರ ಕಳವಳಕಾರಿ ವಲಸೆ ಹೆಚ್ಚುತ್ತಿದೆ. ಆರ್ಥಿಕ ಸ್ಥಗಿತತೆ ಮತ್ತು ಬೆಲೆಏರಿಕೆ ಜನರ ಜೀವನವನ್ನು ದುರ್ಭರಗೊಳಿಸಿದೆ. ಇದು ಸಾಲದೆಂಬಂತೆ ನೋಟು ನಿಷೇಧ ಮತ್ತು ಜಿ.ಎಸ್.ಟಿ ತೆರಿಗೆ ಭಾರ ಹೇರಿಕೆಯಿಂದ, ಗಾಯದ ಮೇಲೆ ಬರೆ ಎಳೆದಂತಾಗಿದ್ದು ಸಣ್ಣ ಮತ್ತು ಮಧ್ಯಮ ವಲಯದ ಉತ್ಪಾದನಾ ಘಟಕಗಳ ಮೇಲೆ ತೀವ್ರ ದುಷ್ಪರಿಣಾಮ ಬೀರಿದೆ. ಅದೇ ಸಮಯದಲ್ಲಿ ಬಹುರಾಷ್ಟ್ರೀಯ ಮತ್ತು ದೇಶೀಯ ಕಾರ್ಪೊರೇಟುಗಳ 15 ಲಕ್ಷ ಕೋಟಿ ರೂ.ನಷ್ಟು ಸಾಲ ಮನ್ನಾ ಮಾಡಿ ಲಾಭ ಗರಿಷ್ಟಗೊಳಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಚಮಚಾ ಬಂಡವಾಳಶಾಹಿ ವ್ಯವಸ್ಥೆ ಅತ್ಯಂತ ಅಪಾಯಕಾರಿಯಾಗಿ ಬೆಳೆದಿದೆ. ಮೋದಿಯ ಮಿತ್ರರು ಬಹುಪಾಲು ಸಾಲ ಮನ್ನಾ ಮತ್ತಿತರ ಸವಲತ್ತುಗಳನ್ನು ಬಾಚಿಕೊಳ್ಳುತ್ತಿದ್ದು, ರಾಫೆಲ್ ಹಗರಣಗಳಂತಹ ಹಗರಣಗಳಿಗೆ ಹಾದಿ ಮಾಡಿಕೊಟ್ಟಿದೆ. ಅಪಾರದರ್ಶಕ 'ಚುನಾವಣಾ' ಬಾಂಡುಗಳು ಹೊಸ ಕಾನೂನುಬದ್ಧ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಿದೆ. ಆ ಮೂಲಕ ಹರಿದು ಬಂದ ಕಾರ್ಪೊರೆಟ್ ನಿಧಿಯಲ್ಲಿ ಶೇ. 95 ಬಿಜೆಪಿಗೆ ಹೋಗಿದೆ. ಯಾವ ಕಾರ್ಪೊರೇಟುಗಳು ಈ ನಿಧಿ ಕೊಟ್ಟವು ಎಂದು ಊಹಿಸುವುದು ಕಷ್ಟವೇನಲ್ಲ.

ದಲಿತ/ಆದಿವಾಸಿ ದೌರ್ಜನ್ಯ ತಡೆ ಕಾಯಿದೆ, ಶಿಕ್ಷಣ ಸಂಸ್ಥೆಗಳಲ್ಲಿ ರೋಸ್ಟರ್ ಪದ್ಧತಿಯ ನೇಮಕ, ಬಡ್ತಿಯಲ್ಲಿ ಮೀಸಲಾತಿ, ಅರಣ್ಯವಾಸಿಗಳ ಹಕ್ಕು ಕಾಯಿದೆ ಇತ್ಯಾದಿ ಸಾಮಾಜಿಕ ನ್ಯಾಯದತ್ತ ಜಾರಿಯ ಹಲವು ಕ್ರಮಗಳನ್ನು ಈ ಐದು ವರ್ಷಗಳಲ್ಲಿ ಪರೋಕ್ಷವಾಗಿ ದುರ್ಬಲ ಅಥವಾ ಸಡಿಲಗೊಳಿಸಲಾಗುತ್ತಿದೆ. ಇಂತಹ ಕ್ರಮಗಳ ವಿರುದ್ಧ ಪ್ರತಿಭಟಿಸಿದರೆ ಅವರ ಮೇಲೆ ದಮನಚಕ್ರ ಹರಿಬಿಡಲಾಗುತ್ತಿದೆ. ದಲಿತರು, ಮುಸ್ಲಿಮರು, ಮಹಿಳೆಯರ ಮೇಲೆ ದೌರ್ಜನ್ಯದ ಪ್ರಕರಣಗಳು ವಿಪರೀತವಾಗಿ ಏರಿವೆ. ಸಾಮಾಜಿಕ ನ್ಯಾಯ ತೀವ್ರ ಅಪಾಯದಲ್ಲಿದೆ.

ಬಿಜೆಪಿಯೇತರ ಸರಕಾರಗಳ ಬಗ್ಗೆ ತಾರತಮ್ಯ ಧೋರಣೆ, ವಿರೋಧ ಪಕ್ಷಗಳ ಸರಕಾರಗಳನ್ನು ಬುಡಮೇಲು ಮಾಡಲು ಸತತ ಯತ್ನ, ಯೋಜನಾ ಆಯೋಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ರದ್ದತಿ, ರಾಜ್ಯ ಸರಕಾರಗಳ ಆದಾಯಕ್ಕೆ ಧಕ್ಕೆ ತರುವ ರೀತಿಯಲ್ಲಿ ಜಿ.ಎಸ್.ಟಿ. ಜಾರಿ, ಮುಂತಾದ ಕ್ರಮಗಳು ರಾಜ್ಯ ಸರಕಾರಗಳನ್ನು ಕೇಂದ್ರದ ಕರುಣೆಯಲ್ಲಿಯೇ ಇರಬೇಕಾದ ಭಿಕ್ಷುಕರ ಮಟ್ಟಕ್ಕೆ ಇಳಿಸಿದೆ. ಇದು ಸಾಂವಿಧಾನಿಕ ಒಕ್ಕೂಟ ತತ್ವಗಳನ್ನು ಉಲ್ಲಂಘಿಸುತ್ತಿದ್ದು ಆರೆಸ್ಸೆಸ್ ನ ಮನುವಾದ ಪ್ರೇರಿತ ಕೇಂದ್ರೀಕೃತ ಹಿಂದೂರಾಷ್ಟ್ರ ನಿರ್ಮಾಣಕ್ಕೆ ಅನುವು ಮಾಡಿಕೊಡುತ್ತಿದೆ.

ಸಂವಿಧಾನದ ಈ ನಾಲ್ಕು ಆಧಾರಸ್ತಂಭಗಳನ್ನು ಉಳಿಸಿ ಬೆಳೆಸಲು, ಮೋದಿ ಸರಕಾರವನ್ನು ಇಳಿಸಿ ಬದಲಿ ಜನಪರ ಆರ್ಥಿಕ ನೀತಿಗಳ ಜಾತ್ಯತೀತ ಸರಕಾರದ ರಚನೆಗೆ 17ನೇ ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರಬಲ ಪ್ರಾತಿನಿಧ್ಯ ಅಗತ್ಯವಾಗಿದೆ ಎಂದು ಇನ್ನೊಮ್ಮೆ ಒತ್ತಿ ಹೇಳಬೇಕಾಗಿದೆ. ರಾಜ್ಯದ ಕಾರ್ಮಿಕರ, ಚಿಕ್ಕಬಳ್ಳಾಪುರ ಕ್ಷೇತ್ರದ ಜನತೆಯ ದನಿ ಲೋಕಸಭೆಯಲ್ಲಿ ಮೊಳಗಬೇಕಾದರೆ, ಜಾತ್ಯತೀತ ಬದಲಿ ಜನಪರ ಸರ್ಕಾರ ರಚನೆಯಾಗಬೇಕಾದರೆ ಸಿಪಿಐ(ಎಂ) ಅಭ್ಯರ್ಥಿ ಎಸ್.ವರಲಕ್ಷ್ಮಿ ಅವರಿಗೆ ನಿಮ್ಮ ಅಮೂಲ್ಯ ಮತ ನೀಡಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ. ●

ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಕುರಿತ ಜನತಾ ಪ್ರಣಾಳಿಕೆ

ಯಾವುದೇ ಸಮಾಜದ ಅಭಿವೃದ್ಧಿಯಲ್ಲಿ ಶಿಕ್ಷಣ ವ್ಯವಸ್ಥೆಯ ಪಾಲು ನಿರ್ಣಾಯಕವಾದುದು. ಇದೀಗ ದೇಶದಲ್ಲಿ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ. ನಮ್ಮ ಜನತೆ ದೇಶವನ್ನು ಸರ್ವತೋಮುಖ ಅಭಿವೃದ್ಧಿಯೆಡೆಗೆ ಕೊಂಡೊಯ್ಯುವ ಜವಾಬ್ದಾರಿಯುತ ಸರಕಾರವನ್ನು ಚುನಾಯಿಸಬೇಕಿದೆ. ಈ ಹಿನ್ನೆಲೆಯಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿ(ಬಿ.ಜಿ.ವಿ.ಎಸ್.) ಮತ್ತು ಅಖಿಲ ಭಾರತ ಜನವಿಜ್ಞಾನ ಚಳುವಳಿಗಳ ಜಾಲಬಂಧ (ಎ.ಐ.ಪಿ.ಎಸ್.ಎನ್.) ಗಳು ಶಿಕ್ಷಣದ ಕುರಿತ ಜನತಾ ಪ್ರಣಾಳಿಕೆಯನ್ನು ರೂಪಿಸಿ ಜನರ ಮುಂದಿಟ್ಟಿವೆ.

ಸಂಗ್ರಹಾನುವಾದ: **ಆರ್. ರಾಮಕೃಷ್ಣ**

2011 ರ ಜನಗಣತಿಯ ಪ್ರಕಾರ ಭಾರತದ ಸಾಕ್ಷರತೆಯ ಪ್ರಮಾಣ ಶೇ. 73 ರಷ್ಟು, ಅಂದರೆ ಶೇ. 27 ರಷ್ಟು ಜನರು ಅನಕ್ಷರಸ್ತರು. ಇದೇ ಜನಗಣತಿಯ ಪ್ರಕಾರ ಭಾರತದ ಮಹಿಳೆಯರ ಸಾಕ್ಷರತೆ ಶೇ. 65 ರಷ್ಟು, ಅಂದರೆ ಶೇ. 35 ರಷ್ಟು ಮಹಿಳೆಯರು ಅನಕ್ಷರಸ್ತರು. ಒಟ್ಟಾರೆ ಭಾರತದಲ್ಲಿ ಸುಮಾರು 30 ಕೋಟಿಯಷ್ಟು ಜನರು ಅನಕ್ಷರಸ್ತರು. ಇದೇ 2011 ರ ಜನಗಣತಿಯಂತೆ ಮಹಿಳೆಯರು, ದಲಿತರು, ಆದಿವಾಸಿಗಳು ಹಿಂದುಳಿದ ಸಮುದಾಯಗಳ ಸಾಕ್ಷರತೆಯು ಭಾರತದ ಸರಾಸರಿ ಸಾಕ್ಷರತೆಯಾದ ಶೇ. 73 ಕ್ಕಿಂತಲೂ ಸಾಕಷ್ಟು ಕಡಿಮೆ ಇದೆ. 2013–14 ರ ಯುನೆಸ್ಕೋದ ಜಾಗತಿಕ ಮೇಲ್ವಿಚಾರಣಾ ವರದಿ–ಗ್ಲೋಬಲ್ ಮಾನಿಟರಿಂಗ್ ರಿಪೋರ್ಟ್(ಜಿ.ಎಂ.ಆರ್.) ಪ್ರಕಾರ ಜಗತ್ತಿನ ಒಟ್ಟು ವಯಸ್ಕ ಅನಕ್ಷರಸ್ತರ ಶೇ. 37 ರಷ್ಟು ಜನರು, ಅಂದರೆ 28.7 ಕೋಟಿ ಅನಕ್ಷರಸ್ತ ವಯಸ್ಕರರು ಭಾರತದಲ್ಲಿಯೇ ಇದ್ದಾರೆ.

2014–15 ರ ಅಧಿಕೃತ ದಾಖಲೆಗಳಂತೆ 36, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 1 ರಿಂದ 12 ನೇ ತರಗತಿಯ ವರೆಗೆ ಒಟ್ಟು 26 ಕೋಟಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಈ 26 ಕೋಟಿ ವಿದ್ಯಾರ್ಥಿಗಳಲ್ಲಿ 19.2 ಕೋಟಿ ಪ್ರಾಥಮಿಕ ಶಾಲಾ ಮಕ್ಕಳು. 3.8 ಕೋಟಿ ಮಾಧ್ಯಮಿಕ ಶಾಲೆಯ ಮಕ್ಕಳು, 2.4 ಕೋಟಿ ಮಕ್ಕಳು ಪ್ರೌಢಶಾಲೆಯ ಮಕ್ಕಳು.

ದೇಶದ ಒಟ್ಟು ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಶೇ.75, ಮಾಧ್ಯಮಿಕ ಶಿಕ್ಷಣದ ಶೇ. 43 ಮತ್ತು ಪ್ರೌಢ ಶಾಲಾ ಶಿಕ್ಷಣದ ಶೇ. 40 ಶಾಲೆಗಳು ಮಾತ್ರ ಸರಕಾರದ ಒಡೆತನದವಾಗಿದ್ದು ಉಳಿದವು ಖಾಸಗಿ ಒಡೆತನದ ಶಿಕ್ಷಣ ಸಂಸ್ಥೆಗಳಾಗಿವೆ. ಬಡವರು–ಶ್ರೀಮಂತರು ಎಂಬ ಅಸಮಾನತೆ, ನಗರ–ಗ್ರಾಮಾಂತರ ಪ್ರದೇಶಗಳೆಂಬ ನಾನಾ ಬಗೆಯ ಅಸಮಾನತೆಗಳು ತುಂಬಿರುವ ನಮ್ಮ ದೇಶದಲ್ಲಿ ಸರಕಾರಿ ಶಿಕ್ಷಣ ವ್ಯವಸ್ಥೆ ಅಂದರೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯೇ ಬಹುಸಂಖ್ಯಾತ ಜನಸಮುದಾಯವನ್ನು ಶಿಕ್ಷಣ ವ್ಯವಸ್ಥೆಯೊಂದಿಗೆ ಬೆಸೆಯಲು ಸಾಮರ್ಥ್ಯವಿರುವ, ಶಿಕ್ಷಣ ವ್ಯವಸ್ಥೆಯೊಳಕ್ಕೆ ಅವರನ್ನು ಸೆಳೆದುಕೊಳ್ಳಲು ಸಾಧ್ಯವಿರುವ ವ್ಯವಸ್ಥೆಯಾಗಿದೆ.

ಆದರೆ ಶಾಲೆಯಲ್ಲಿರಬೇಕಾದ ವಯಸ್ಸಿನ ಲಕ್ಷಾಂತರ ಮಕ್ಕಳು ಇಂದಿಗೂ ಶಾಲೆಯಿಂದ ಹೊರಗುಳಿದಿದ್ದಾರೆ. ಈ ಮಕ್ಕಳ ಸಂಖ್ಯೆಯ ಬಗೆಗೆ ವಿಶ್ವಾಸಾರ್ಹ ನಿಖರ ಮಾಹಿತಿಗಳು ಲಭ್ಯವಿಲ್ಲ. ಶಾಲಾ ಕೊಠಡಿಗಳ ಕೊರತೆ, ಕುಡಿಯುವ ನೀರಿನ ಕೊರತೆ, ಶೌಚಾಲಯಗಳ ಕೊರತೆ ಮುಂತಾದವುಗಳು ಸಹ ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣವಾಗುತ್ತಿವೆ. ಶೌಚಾಲಯಗಳ ಕೊರತೆ, ಸಮರ್ಪಕ ಶೌಚಾಲಯಗಳ ಕೊರತೆ ಹೆಣ್ಣು ಮಕ್ಕಳು ಶಾಲೆಬಿಡಲು ಒಂದು ಪ್ರಮುಖ ಕಾರಣವಾಗಿದೆ.

ಭಾರತ ದೇಶದಲ್ಲಿ ಒಂದನೇ ತರಗತಿಗೆ ಸೇರಿದ 10 ಮಕ್ಕಳಲ್ಲಿ ಕೇವಲ 6 ಮಕ್ಕಳು ಮಾತ್ರ 8 ನೇ ತರಗತಿಯನ್ನು ತಲುಪುತ್ತಾರೆ. ದೇಶದ ಒಟ್ಟು ಶೇ. 8 ರಷ್ಟು ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿವೆ. ಶೇ. 14 ರಷ್ಟು ಶಾಲೆಗಳಲ್ಲಿ ವೈಜ್ಞಾನಿಕ ಶಿಫಾರಸ್ಸಿನಂತೆ ಇರಬೇಕಾದ 6 ಜನ ಶಿಕ್ಷಕರು ಇಲ್ಲ.

ಸರಕಾರಗಳು ಅನುದಾನ ರಹಿತ ಖಾಸಗಿ ಶಾಲೆಗಳಿಗೆ ವ್ಯಾಪಕವಾಗಿ ಅನುಮತಿಯನ್ನು ನೀಡುತ್ತಿವೆ. ಮತ್ತೊಂದೆಡೆ ಶಿಕ್ಷಣ ಹಕ್ಕು ಕಾಯ್ದೆ(ಆರ್.ಟಿ.ಇ.) ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಕೆಲವು ರಾಜ್ಯಗಳಲ್ಲಿ ಖಾಸಗಿ–ಸರ್ಕಾರಿ ಸಹಭಾಗಿತ್ವ(ಪಿ.ಪಿ.ಪಿ.)ದ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಖಾಸಗಿಯವರಿಗೆ ಒಪ್ಪಿಸಲಾಗುತ್ತಿದೆ.

2017 ರಲ್ಲಿ ಭಾರತ ದೇಶದಲ್ಲಿ ಶಿಕ್ಷಣಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿ.ಡಿ.ಪಿ.)ದ ಶೇ. 2.7 ರಷ್ಟನ್ನು ಮಾತ್ರ ವ್ಯಯ ಮಾಡಲಾಗಿದೆ. ಕೊಠಾರಿ ಆಯೋಗ ಸೇರಿದಂತೆ ಎಲ್ಲ ತಜ್ಞ ವರದಿಗಳೂ ಶಿಕ್ಷಣಕ್ಕೆ ಕನಿಷ್ಟ ಜಿ.ಡಿ.ಪಿ.ಯ ಶೇ. 6 ರಷ್ಟನ್ನು ನೀಡಬೇಕೆಂದು ಶಿಫಾರಸ್ಸು ಮಾಡಿವೆ. 1990–91 ರಲ್ಲಿ ಜಿ.ಡಿ.ಪಿ.ಯ ಶೇ. 3.84 ರಷ್ಟನ್ನು ಶಿಕ್ಷಣಕ್ಕೆ ನೀಡಲಾಗಿತ್ತು ಎಂಬುದನ್ನು ಗಮನಿಸಿದರೆ ನಂತರದ ಅವಧಿಯಲ್ಲಿ ಶಿಕ್ಷಣಕ್ಕೆ ನೀಡಲಾಗುವ ಬಜೆಟ್‌ನಲ್ಲಿ ಆಗಿರುವ ಅಗಾಧ ಕಡಿತವು ಗೊತ್ತಾಗುತ್ತದೆ. ಕ್ಯೂಬಾದಂತಹ ಪುಟ್ಟ ದೇಶವು ತನ್ನ ಜಿ.ಡಿ.ಪಿ.ಯ ಶೇ. 18 ರಷ್ಟನ್ನು ಶಿಕ್ಷಣಕ್ಕೆ ನೀಡುತ್ತದೆ. ಮಲೇಶಿಯಾ, ಕೀನ್ಯಾದಂತಹ ಹಿಂದುಳಿದ ದೇಶಗಳು ಸಹ ಶಿಕ್ಷಣಕ್ಕೆ ಜಿ.ಡಿ.ಪಿ.ಯ ಶೇ. 6 ಕ್ಕಿಂತ ಹೆಚ್ಚು ಖರ್ಚು ಮಾಡುತ್ತವೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಫೆಬ್ರವರಿ 2019 ರಲ್ಲಿ ಮಂಡಿಸಲಾಗಿರುವ ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿಯೂ ಸಹ ಇದೇ ರೀತಿಯ ಶಿಕ್ಷಣದ ನಿರ್ಲಕ್ಷ್ಯ ಮುಂದುವರಿದಿದೆ.

ಜಾಗತೀಕರಣ, ಉದಾರೀಕರಣ ನೀತಿಗಳ ಭಾಗವಾಗಿ ದೇಶದಲ್ಲಿಂದು ಶಿಕ್ಷಣದ ಖಾಸಗೀಕರಣ ತೀವ್ರವಾಗುತ್ತಿದೆ. ಆಳುವ ಸರಕಾರಗಳು ಶಿಕ್ಷಣ ನೀಡುವ ಜವಾಬ್ದಾರಿಯಿಂದ ಜಾರಿಕೊಳ್ಳುತ್ತಿವೆ. ಜಾತಿವಾದಿ, ಕೋಮುವಾದಿ, ಲಿಂಗ ತಾರತಮ್ಯದ ಧೋರಣೆಗಳು ನಮ್ಮ ಸಮಾಜದಲ್ಲಿ ಇಂದಿಗೂ ಬಲವಾದ ಬೇರುಗಳನ್ನು ಹೊಂದಿದ್ದು ಶಿಕ್ಷಣ ಕ್ಷೇತ್ರದ ಮೇಲೆಯೂ ಅವುಗಳು ಪ್ರಭಾವ ಬೀರುತ್ತಲೇ ಇರುತ್ತವೆ. ಇದೀಗ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ. ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ರೂಪಿಸುವ ಹೊತ್ತಿದು. ಈ ಹಿನ್ನೆಲೆಯಲ್ಲಿ ನಾವು ಈ ಕೆಳಕಂಡ ಬೇಡಿಕೆಗಳಿಗಾಗಿ ಆಗ್ರಹಿಸಬೇಕಿದೆ. ಈ ಕುರಿತು ವ್ಯಾಪಕ ಪ್ರಚಾರಾಂದೋಲನ ಕೈಗೊಳ್ಳಬೇಕಾಗಿದೆ.



ಪ್ರಣಾಳಿಕೆಯ ಪ್ರಮುಖ ಬೇಡಿಕೆಗಳು


1. ದೇಶದಲ್ಲಿ ರೂಪುಗೊಳ್ಳುವ ಶಿಕ್ಷಣ ನೀತಿಗಳು ಸಂವಿಧಾನಿಕ ಬದ್ಧತೆಗಳನ್ನು ಆಧರಿಸಿರಬೇಕು.
2. ಶಿಕ್ಷಣ ನೀತಿಗಳಲ್ಲಿನ ಯಾವುದೇ ಸುಧಾರಣೆಯೂ ಸಂವಿಧಾನದ ಮೂಲ ತತ್ವಗಳಾದ ಪ್ರಜಾಪ್ರಭುತ್ವ, ಸಮಾನತೆ, ಧರ್ಮನಿರಪೇಕ್ಷತೆ(ಸೆಕ್ಯುಲರಿಸಂ), ಸಾಮಾಜಿಕ ನ್ಯಾಯಗಳನ್ನು ಎತ್ತಿ ಹಿಡಿಯಬೇಕು. ಈ ವಿಷಯದಲ್ಲಿ ಯಾವುದೇ ರಾಜಿಗೆ ಅವಕಾಶ ಇರಕೂಡದು.
3. 'ಬಾಲ್ಯ' ಎಂಬುದರ ವ್ಯಾಖ್ಯಾನವನ್ನು ಅಂತರ ರಾಷ್ಟ್ರೀಯ ಮಾನ್ಯತೆ ಪಡೆದ 'ಅರ್ಲಿ ಚೈಲ್ಡ್ ಕೇರ್ ಅಂಡ್ ಎಜುಕೇಷನ್'(ಇ.ಸಿ.ಸಿ.ಇ.) ಮಾನದಂಡದಂತೆ ಮಗುವಿನ ಜನನದಿಂದ 18 ವರ್ಷದವರೆಗೆ ವಿಸ್ತರಿಸಬೇಕು. ಶಿಕ್ಷಣ ಹಕ್ಕು ಕಾಯ್ದೆಯ ವ್ಯಾಪ್ತಿಯನ್ನು ಇದಕ್ಕೆ ತಕ್ಕಂತೆ ಹಿಗ್ಗಿಸಬೇಕು.
4. 'ಶಿಕ್ಷಣ ಹಕ್ಕು ಕಾಯ್ದೆ'ಯು ಅದರ ನೈಜ ಸ್ಫೂರ್ತಿಯ ಆಧಾರದಲ್ಲಿ ಅಕ್ಷರಶಃ ಜಾರಿಯಾಗುವುದನ್ನು ಖಾತ್ರಿಗೊಳಿಸಬೇಕು. ಸರ್ಕಾರವೇ ಇದಕ್ಕೆ ಹೊಣೆಗಾರನಾಗಬೇಕು.
5. ಪರಿಶಿಷ್ಟ ಪಂಗಡ(ಎಸ್.ಸಿ.) ಮತ್ತು ಪರಿಶಿಷ್ಟ ಜಾತಿ(ಎಸ್.ಟಿ.)ಯ ಮಕ್ಕಳು, ಗ್ರಾಮೀಣ ಹೆಣ್ಣು ಮಕ್ಕಳು, ಅಲ್ಪಸಂಖ್ಯಾತ ಸಮುದಾಯದ ಮಕ್ಕಳು, ವಲಸೆಗಾರರ ಮಕ್ಕಳಿಗಾಗಿರುವ ಶಿಕ್ಷಣ ನೀತಿಯನ್ನು ಸಮಗ್ರವಾಗಿ ವಿಮರ್ಶೆಗೊಳಪಡಿಸಿ, ಸಮರ್ಪಕವಾಗಿ ಪುನರ್‌ರೂಪಿಸಬೇಕು.
6. ಅವಕಾಶ ವಂಚಿತ ದಲಿತ, ಆದಿವಾಸಿ, ಅಲ್ಪಸಂಖ್ಯಾತ ಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಪಡೆದುಕೊಳ್ಳುವ ನಿಟ್ಟಿನಲ್ಲಿ ಇರುವ ನಿರ್ಬಂಧ, ಅಡೆತಡೆಗಳನ್ನು ನಿವಾರಿಸಲು, ಶಾಲೆಗಳಲ್ಲಿ ಸುರಕ್ಷಿತ ಶೈಕ್ಷಣಿಕ ವಾತಾವರಣವನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು. ಶಾಲಾಪೂರ್ವ ಅವಧಿಯಲ್ಲಿ ಶಿಶುಗಳ ಆರೈಕೆಯ ದೃಷ್ಟಿಯಿಂದಲೂ ಇಂತಹ ಕ್ರಮಗಳನ್ನು ಕೈಗೊಳ್ಳಬೇಕು.
7. ಶಿಕ್ಷಣವು ಮಹಿಳೆಯರಲ್ಲಿ ಆತ್ಮಸ್ಥೈರ್ಯವನ್ನು ಬೆಳೆಸುವಂತೆ, ಸಮಾಜದಲ್ಲಿ ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವಂತೆ ಹಾಗೂ ಲಿಂಗ ಅಸಮಾನತೆಗೆ ಸವಾಲು ಎಸೆಯುವಂತಹ ಪರಿವರ್ತನೆಯನ್ನು ತರಲು ಸಮರ್ಥವಾಗಿರಬೇಕು.
8. ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು. 18 ವರ್ಷದ ವರೆಗೆ ಎಲ್ಲರೂ ಶಿಕ್ಷಣ ಪಡೆಯುವುದನ್ನು ಖಾತ್ರಿಪಡಿಸಬೇಕು. 'ಬಾಲಕಾರ್ಮಿಕ ಪದ್ಧತಿ(ನಿಷೇಧ ಮತ್ತು ನಿಯಂತ್ರಣ)' ಕಾನೂನಿನಲ್ಲಿ 'ಕುಟುಂಬ ಉದ್ಯಮ'ದಲ್ಲಿ ಮಕ್ಕಳು ಕೆಲಸ ಮಾಡುವುದನ್ನು ಕಾನೂನು ಬದ್ಧಗೊಳಿಸುವ ಪರಿಚ್ಛೇಧ 3 ಅನ್ನು ತೆಗೆದು ಹಾಕಬೇಕು.
9. ಶಿಕ್ಷಣ ವ್ಯವಸ್ಥೆಯಲ್ಲಿ ಅಸಮಾನತೆಗೆ ಕಾರಣವಾಗುವ ಬಹು ಪದರಗಳ– ವಿವಿಧ ಬಗೆಯ ಶಿಕ್ಷಣ ಪದ್ಧತಿಗಳನ್ನು ತೆಗೆದು ಹಾಕಬೇಕು. 'ಸಮಾನ ಶಾಲಾ ಶಿಕ್ಷಣ ಪದ್ಧತಿ'ಯನ್ನು ಜಾರಿಗೆ ತರಬೇಕು.
10. ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಗಳಲ್ಲಿ ನಿರೀಕ್ಷಿಸಲಾದಂತೆ ಹಾಗೂ ಶಿಕ್ಷಣ ವೆಚ್ಚದ ವಿಷಯದಲ್ಲಿ ಜಾಗತಿಕ ಮಾನದಂಡದಂತೆ, ಜಿ.ಡಿ.ಪಿ.ಯ ಕನಿಷ್ಟ ಶೇ. 6 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಬೇಕು.
11. ಈಗ ರದ್ದು ಮಾಡಲಾಗಿರುವ 'ಶಿಕ್ಷಣ ಹಕ್ಕು ಕಾಯ್ದೆ'ಯ ಪರಿಚ್ಛೇಧ 16 ಮಗುವಿನ ಶಿಕ್ಷಣದ ಮೂಲಭೂತ ಹಕ್ಕಿನ ಬೆನ್ನುಮೂಳೆಯಾಗಿದೆ. ಅದನ್ನು ಪುನರ್ ಸ್ಥಾಪಿಸಬೇಕು. ಆ ಮೂಲಕ 'ಶಿಕ್ಷಣ ಹಕ್ಕು ಕಾಯ್ದೆ'ಯ ಜಾರಿಯನ್ನು ಹಾಗೂ ಮಗುವಿಗೆ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಖಾತ್ರಿಪಡಿಸಬೇಕು. ಮಕ್ಕಳನ್ನು ಅನುತ್ತೀರ್ಣಗೊಳಿಸಿ, ಮುಂದಿನ ತರಗತಿಗೆ ಹೋಗದಂತೆ ತಡೆಹಿಡಿಯುವ ಕ್ರಮಗಳನ್ನು ಕೈಬಿಡಬೇಕು, ಆ ಮೂಲಕ ಮಕ್ಕಳನ್ನು ಶಾಲೆಯಿಂದ ಹೊರಹಾಕುವುದನ್ನು ತಪ್ಪಿಸಬೇಕು.
12. 'ಕಾರ್ಯಸಾಧುವಲ್ಲ' ಎಂದು ಹೇಳಿ ಸರಕಾರಿ ಶಾಲೆಗಳನ್ನು ಮುಚ್ಚುವ ಕ್ರಮಗಳಿಗೆ ಕೊನೆಹಾಡಬೇಕು. 'ಶಿಕ್ಷಣ ಹಕ್ಕು ಕಾಯ್ದೆ–2009' ಅಂಗೀಕರಿಸಿದ ನಂತರ, ಬೇರೆ ಶಾಲೆಗಳೊಂದಿಗೆ ವಿಲೀನಗೊಳಿಸಲಾಗಿರುವ ಮತ್ತು ಮುಚ್ಚಲಾಗಿರುವ ಸರಕಾರಿ ಶಾಲೆಗಳನ್ನು ಪುನರಾಂಭಿಸಬೇಕು.
13. ಪ್ರತಿಯೊಂದು ತರಗತಿಗೂ ಪ್ರತ್ಯೇಕವಾದ ಖಾಯಂ ಶಿಕ್ಷಕರನ್ನು ನೇಮಿಸಬೇಕು.
14. ಶಿಕ್ಷಕರ ವೃತ್ತಿ ಕೌಶಲ್ಯದ ಬೆಳವಣಿಗೆಗೆ ಅಗತ್ಯವಾದ ತರಬೇತಿ ಕಾರ್ಯಕ್ರಮವನ್ನು ಖಾತ್ರಿಪಡಿಸಬೇಕು.
15. ಶಿಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡು ಅವರನ್ನು ಶೋಷಿಸುವುದನ್ನು ತಪ್ಪಿಸಬೇಕು.
16. ನಮ್ಮ ಸಂವಿಧಾನದ ಗುರಿಗಳಿಗೆ ಪೂರಕವಾಗುವಂತೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ರೂಪಿಸಬೇಕು. ಆ ಮೂಲಕ ಮಗುವು ಸಂವಿಧಾನದಲ್ಲಿ ಅಳವಡಿಸಲಾಗಿರುವ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡಬೇಕು. ದೇಶದ ವೈವಿಧ್ಯಮಯತೆಯನ್ನು ಎತ್ತಿಹಿಡಿಯುವ ಪಠ್ಯಕ್ರಮವನ್ನು ರೂಪಿಸಬೇಕು. ದೇಶಾದ್ಯಂತ ಯಾವುದೇ ಒಂದು ಭಾಷೆಯನ್ನು ಎಲ್ಲ ಮಕ್ಕಳಿಗೂ ಕಡ್ಡಾಯ ಮಾಡುವ ನೀತಿಯನ್ನು ಕೈಬಿಡಬೇಕು. ತಾಯಿನುಡಿಯಲ್ಲಿ ಶಿಕ್ಷಣವನ್ನು ಖಾತ್ರಿಪಡಿಸಬೇಕು. ಶಿಕ್ಷಣದ ಕೋಮುವಾದೀಕರಣವನ್ನು, ಪಠ್ಯಗಳಲ್ಲಿ ಕೋಮುದ್ವೇಷ ನುಸುಳುವುದನ್ನು ತಡೆಗಟ್ಟಬೇಕು. ಇತಿಹಾಸದ ಕುರಿತು, ಚಾರಿತ್ರಿಕ ಆಧಾರಗಳ ಬೆಂಬಲವಿಲ್ಲದ ಅವೈಚಾರಿಕ ದೃಷ್ಟಿಕೋನವನ್ನು ನಿವಾರಿಸಬೇಕು. ಮಗುವಿನಲ್ಲಿ ವಿಷಯಗಳನ್ನು ವಿಮರ್ಶಾತ್ಮಕವಾಗಿ ನೋಡುವ ವೈಚಾರಿಕ ಶಕ್ತಿಯನ್ನು ಬೆಳೆಸುವಂತಹ ಶಿಕ್ಷಣವನ್ನು ನೀಡಬೇಕು. ಶಿಕ್ಷಣವು ಮಗುವಿನಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ವಿಜ್ಞಾನದ ಕ್ರಮಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪೂರಕವಾಗಿರಬೇಕು. ಮಕ್ಕಳ ವಯೋಮಾನಕ್ಕನುಗುಣವಾಗಿ ವಿವಿಧ ಕೆಲಸಗಳ ಅನುಭವವನ್ನು ಪಡೆದುಕೊಳ್ಳಲು ಅವಕಾಶ ಒದಗಿಸಿಕೊಡಬೇಕು.
17. ಮಾಧ್ಯಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣಕ್ಕೂ ನಡುವೆ ಸಹಜವಾದ ಸಂಬಂಧವನ್ನು

ಪುಟ 14 ಕ್ಕೆ

ಉದ್ಯೋಗ, ಆರೋಗ್ಯ, ಕುಡಿಯುವ ನೀರೂ ಒದಗಿಸದ 'ಅಚ್ಛೇ ದಿನ್' -ಎಡಿಆರ್ ಸರ್ವೆಯಲ್ಲಿ ವ್ಯಕ್ತಗೊಂಡ ಮತದಾರರ ಅಳಲು

ಉದ್ಯೋಗ, ಆರೋಗ್ಯ, ಕುಡಿಯುವ ನೀರು, ರಸ್ತೆಗಳು, ಸಾರ್ವಜನಿಕ ಸಾರಿಗೆ, ಕೃಷಿಗೆ ನೀರು, ಕೃಷಿ ಸಾಲ ಲಭ್ಯತೆ, ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಲಭ್ಯತೆ, ಬೀಜ-ಗೊಬ್ಬರಗಳಿಗೆ ಸಬ್ಸಿಡಿಗಳು ಮತ್ತು ಕಾನೂನು ವ್ಯವಸ್ಥೆ ಇವು ದೇಶದ ಮತದಾರರ ಹತ್ತು ಪ್ರಮುಖ ಆತಂಕಗಳು. 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರೈಟ್ಸ್(ಎಡಿಆರ್-ಪ್ರಜಾಪ್ರಭುತ್ವ ಹಕ್ಕುಗಳ ಸಂಘ) ಅಕ್ಟೋಬರ್ 2018ರಿಂದ ಡಿಸೆಂಬರ್ 2018ರ ನಡುವೆ ನಡೆಸಿರುವ ಒಂದು ಸರ್ವೆಯಲ್ಲಿ ವ್ಯಕ್ತಗೊಂಡಿರುವ ಅಂಶಗಳಿವು. ಸರಕಾರದ ಬಗ್ಗೆ ಅತ್ಯಂತ ಹೆಚ್ಚು ಅತೃಪ್ತಿ ಇರುವ ಪ್ರಶ್ನೆಗಳೂ ಇವೇ ಎಂಬುದು ಕೂಡ ಈ ಸರ್ವೆಯಲ್ಲಿ ಕಂಡು ಬಂದಿದೆ.

ಇದರಲ್ಲಿ ಉದ್ಯೋಗಾವಕಾಶಗಳ ಪ್ರಶ್ನೆಯೇ ಮೊದಲ ಸ್ಥಾನದಲ್ಲಿದೆ. ಸರ್ವೆ ಮಾಡಿದವರಲ್ಲಿ 46.8% ಮಂದಿ ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಮತ್ತು ಜನಗಳಲ್ಲಿ ಸರಕಾರದ ಬಗ್ಗೆ ಅತಿ ಹೆಚ್ಚು ಅತೃಪ್ತಿ ಇರುವುದೂ ಈ ವಿಷಯದಲ್ಲೇ. ಇದು, ಬಹಳಷ್ಟು ಉದ್ಯೋಗ ಸೃಷ್ಟಿಯಾಗಿದೆ, ಅಂಕಿ-ಅಂಶಗಳು ಇದನ್ನು ಸರಿಯಾಗಿ ಬಿಂಬಿಸುತ್ತಿಲ್ಲವಷ್ಟೇ ಎಂಬ ಅಚ್ಛೇ ದಿನ್ ಸರಕಾರದ ಪ್ರಚಾರ ಶುದ್ಧ ಸುಳ್ಳು ಎಂಬುದನ್ನು ಮತ್ತೊಮ್ಮೆ ದೃಢಪಡಿಸಿದೆ. ಈ ಮೊದಲು ಎನ್‌ಎಸ್‌ಎಸ್‌ಒ, ಲೇಬರ್ ಬ್ಯುರೊ ಮತ್ತು ಮುದ್ರಾ ಸರ್ವೆಗಳ ಅಂಕಿ-ಅಂಶಗಳ ಪ್ರಕಟಣೆಗಳನ್ನು ಒಂದೊಂದಾಗಿ ತಡೆ ಹಿಡಿದಾಗ ಹೆಚ್ಚುತ್ತ ಬಂದಿರುವ ಈ ಅನುಮಾನಕ್ಕೆ ಈಗ ಎಡೆಯೇ ಇಲ್ಲದಂತಾಗಿದೆ. ಜನಗಳಲ್ಲಿ ಸರಕಾರದ ಬಗ್ಗೆ ಅತಿ ಹೆಚ್ಚು ಅಸಂತೃಪ್ತಿ ಇರುವುದೂ ಈ ಪ್ರಶ್ನೆಯ ಬಗ್ಗೆಯೇ ಎಂಬುದು ಕೂಡ ಗಮನಾರ್ಹ.



ಸಂಬಂಧಪಟ್ಟ ಪ್ರಶ್ನೆಯನ್ನು ತಮ್ಮ ಮೊದಲ 10 ಆತಂಕವಾಗಿ ನಮೂದಿಸಿದವರ ಶೇಕಡಾವಾರು ಮತ್ತು ಸರಕಾರದ ಕೆಲಸದ ರೇಟಿಂಗ್


ಉದ್ಯೋಗಾವಕಾಶ	46.8	2.2
ಆರೋಗ್ಯ ಪಾಲನೆ	34.6	2.4
ಕುಡಿಯುವ ನೀರು	30.5	2.5
ರಸ್ತೆಗಳು	28.3	2.4
ಸಾರ್ವಜನಿಕ ಸಾರಿಗೆ	27.4	2.6
ಕೃಷಿಗೆ ನೀರು	26.4	2.3
ಕೃಷಿಸಾಲ	25.6	2.2
ಬೆಳೆಗಳಿಗೆ ಹೆಚ್ಚಿನ ಬೆಲೆ	25.4	2.2
ಬೀಜ-ಗೊಬ್ಬರ ಸಬ್ಸಿಡಿ	25.1	2.1
ಕಾನೂನು ವ್ಯವಸ್ಥೆ	23.9	2.3

ರೇಟಿಂಗ್ :5-ಚೆನ್ನಾಗಿದೆ 3-ಸಾಧಾರಣ 1-ಕೆಟ್ಟದಾಗಿದೆ

ಬಿಹಾರ, ಛತ್ತೀಸ್‌ಗಡ, ಝಾರ್ಖಂಡ್, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಾಖಂಡ ಮತ್ತು ಉತ್ತರಪ್ರದೇಶದಲ್ಲಿ ಈ ಅಸಂತೃಪ್ತಿ ಅತಿ ಹೆಚ್ಚು ಎಂದು ಸರ್ವೆಯ ಫಲಿತಾಂಶಗಳು ಹೇಳುತ್ತವೆ. ಈ ಏಳು ರಾಜ್ಯಗಳಲ್ಲಿ 4 ರಲ್ಲಿ ಈಗಲೂ, ಮತ್ತು ಉಳಿದ ಮೂರರಲ್ಲಿ ಇತ್ತೀಚಿನ ವರೆಗೂ ಅಚ್ಛೇ ದಿನ್ ಮಂದಿಯ ರಾಜ್ಯ ಸರಕಾರಗಳಿದ್ದವು ಎಂಬುದೂ ಗಮನಾರ್ಹ. ಇತ್ತೀಚೆಗೆ ಮೂರು ರಾಜ್ಯಗಳನ್ನು ಅವರು ಕಳಕೊಂಡಿರುವುದಕ್ಕೆ ಕಾರಣವೇನು ಎಂಬುದುರ ಒಂದು ಸಂಕೇತವೂ ಬಹುಶಃ ಇಲ್ಲಿ ಸಿಗುತ್ತದೆ.

ಎಡಿಆರ್ ನಡೆಸಿರುವ ಈ ಸರ್ವೇ ಸಾಕಷ್ಟು ದೊಡ್ಡದಾಗಿದೆ. 534 ಲೋಕಸಭಾ ಕ್ಷೇತ್ರಗಳ 2,3,487 ಮಂದಿಯ ಬಳಿ ಹೋಗಿ ಈ ಸರ್ವೆಯಲ್ಲಿ ಪ್ರಶ್ನೆಗಳನ್ನು ಕೇಳಲಾಯಿತು. ಮತದಾರರು ತಮ್ಮ ಮೊದಲ ಐದು ಆದ್ಯತೆಗಳ ಪಟ್ಟಿ ಮಾಡಲು ಮತ್ತು ಆ ವಿಷಯಗಳಲ್ಲಿ ಸರಕಾರದ ಕೆಲಸ-ಕಾರ್ಯಗಳ ಬಗ್ಗೆ ಅಂಕಗಳನ್ನು ಕೊಡಲು ಈ ಸರ್ವೆಯಲ್ಲಿ ಕೇಳಲಾಗಿತ್ತು. ಇಲ್ಲಿರುವ ಗ್ರಾಫ್ ತೋರಿಸುವಂತೆ ಉದ್ಯೋಗಾವಕಾಶಗಳನ್ನು ಒದಗಿಸುವ ಪ್ರಶ್ನೆಯಲ್ಲಿ ಸರಕಾರಕ್ಕೆ ಸಿಕ್ಕಿರುವುದು 5ರಲ್ಲಿ ಕೇವಲ 2.2 ಅಂಕಗಳು. 5 ಅಂಕಗಳನ್ನು ಪಡೆದರೆ ಉತ್ತಮ ಅಭಿಪ್ರಾಯ, 3 ತೃಪ್ತಿಕರ, ಅದಕ್ಕಿಂತ ಕಡಿಮೆಯಾದರೆ ಅತೃಪ್ತಿಕರ. ಈ 10 ಪ್ರಮುಖ ಪ್ರಶ್ನೆಗಳಲ್ಲಿ 5 ಕೃಷಿಗೆ ಸಂಬಂಧಪಟ್ಟ ಪ್ರಶ್ನೆಗಳು ಎಂಬುದನ್ನೂ ಗಮನಿಸಬೇಕು.

ಬಹುಶಃ ಅಚ್ಛೇ ದಿನ್ ಮಂದಿ ಇದು ಬಾಲಾಕೋಟ್ ವಾಯುಪ್ರಹಾರದ ಮೊದಲಿನ ಸರ್ವೆ, ಈಗ ಅದು ಬದಲಾಗಿದೆ, 'ಮಿಶನ್ ಶಕ್ತಿ'ಯ ನಂತರವಂತೂ ಇನ್ನಷ್ಟು ಬದಲಾಗಿದೆ ಎಂದು ಹೇಳಬಹುದು. ಜನಗಳ ಗಮನವನ್ನು ತಮ್ಮ ಬದುಕಿನ ಜ್ವಲಂತ ಪ್ರಶ್ನೆಗಳಿಂದ ಬೇರೆಡೆಗೆ ಸೆಳೆಯಲು ಚೌಕೀದಾರ್, ಮಿಂಚಿನ ಪ್ರಹಾರ ಅಂದರೆ ಸರ್ಜಿಕಲ್ ಸ್ಟ್ರೈಕ್ ಮತ್ತಿತರ ಪ್ರಚಾರದ ಅಗತ್ಯ ಉಂಟಾಗಿದೆ ಎಂಬುದಂತೂ ಚುನಾವಣಾ ಪ್ರಚಾರ ಮುಂದುವರೆದಂತೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.



ವ್ಯಂಗ್ಯಚಿತ್ರ: ಮಿಕ ಅಜೀಜ್

ಚೌಕೀದಾರನಿಂದ ಸೇಲ್ಸ್‌ಮನ್ ವರೆಗೆ

"ಚೌಕೀದಾರ್ ನರೇಂದ್ರ ಮೋದಿ" ಇತ್ತೀಚಿನ ಒಂದು ಟ್ವೀಟ್-" 31ರ #ಮೈ ಭೀ ಚೌಕೀದಾರ್ ಕಾರ್ಯಕ್ರಮ ಆಕರ್ಷಕ ಸಾಮಗ್ರಿಗಳೊಂದಿಗೆ ಇನ್ನಷ್ಟು ಉತ್ತಮವಾಗಿ ಕಾಣುತ್ತದೆ. ನಿಮ್ಮ ಆರ್ಡರ್ ಕಳಿಸಿದ್ದೀರಾ?" ಇದರೊಂದಿಗೆ 'ನಮೋ ಮರ್ಕೆಂಡೈಸ್'ನ ಟ್ವಿಟನ್ನು ಸೇರಿಸಲಾಗಿದೆ. ಈ ಟ್ವೀಟ್ ಹೀಗಿದೆ: "ಫಿರ್ ಏಕ್ ಭಾರ್, ನಮೋ ಚೌಕೀದಾರ್! ಭಾರತ ಮತ್ತೊಮ್ಮೆ ಮೈಭೀ ಚೌಕೀದಾರ್ ಟಿ-ಶರ್ಟ್‌ಗಳೊಂದಿಗೆ ನಮೋಗೆ ಬೆಂಬಲ ತೋರಿಸುತ್ತಿದೆ. ನಿಮ್ಮ ಸ್ವಂತ ಟಿ-ಶರ್ಟನ್ನು ಪಡೆಯಿರಿ" ಅದನ್ನು ಪಡೆಯಲು ಈ ಟ್ವೀಟ್ ಸೂಚಿಸಿರುವ ವೆಬ್‌ಸೈಟ್ ಆಳುವ ಪಕ್ಷದ ಪ್ರಚಾರಕ್ಕೆ ನೋಟ್‌ಬುಕ್‌ಗಳು, ಗಡಿಯಾರಗಳು, ಪುಸ್ತಕಗಳು, ಪೆನ್‌ಗಳು, ಕ್ಯಾಪ್‌ಗಳು, ಮಗ್‌ಗಳು, ಟಿ-ಶರ್ಟ್‌ಗಳು ಇತ್ಯಾದಿಗಳನ್ನು ಮಾರುವಂತದ್ದು. (ನ್ಯೂಸ್‌ಸೆಂಟ್ರಲ್, ಮಾರ್ಚ್ 25)

ಇದು ಸಾಮಾಜಿಕ ಮಾಧ್ಯಮಗಳಲ್ಲಿ 'ಮೈಭೀ ಚೌಕೀದಾರ್' ನಂತರ ಮತ್ತೊಂದು ಸುತ್ತಿನ ವ್ಯಂಗ್ಯ-ಕಟಕಿಗಳಿಗೆ ಆಹಾರವಾಗಿದೆ.

"ಇನ್ನೇನು ಪ್ರಧಾನ ಮಂತ್ರಿಗಳು ತಮ್ಮ ರ್‍ಯಾಲಿಗಳಿಗೆ ಟಿಕೆಟ್‌ಗಳನ್ನು ಬುಕ್‌ಮೈಶೋ ಮೂಲಕ ಮಾರಲಿದ್ದಾರೆ" ಎಂದು ಒಬ್ಬರು ಬರೆದರೆ, ಇನ್ನೊಬ್ಬರು, ದೇಶದ ಪ್ರಧಾನಿಗಳು 'ಆಕರ್ಷಕ ಸಾಮಗ್ರಿಗಳನ್ನು' ಮಾರುವ ಮೂಲಕ 70ವರ್ಷಗಳಲ್ಲಿ ಮತ್ತೊಂದು 'ಮೊದಲು' ದಾಖಲಿಸಿದ್ದಾರೆ, ಎಂದಿದ್ದಾರೆ; ಮತ್ತೊಬ್ಬರು "ಚೌಕೀದಾರ್ ನರೇಂದ್ರ ಮೋದಿ" ಎಂಬುದನ್ನು "ಸೇಲ್ಸ್‌ಮನ್ ನರೇಂದ್ರ ಮೋದಿ" ಎಂದು ಬದಲಿಸಬೇಕು ಎಂದು ಸೂಚಿಸಿದ್ದಾರೆ. ಒಬ್ಬರಂತೂ ಹೊಸದೊಂದು ಪ್ರಚಾರದ ಸಲಹೆ ಮುಂದಿಟ್ಟಿದ್ದಾರೆ #ಮೈಭೀದುಕಾನ್‌ದಾರ್‌ಚೌಕೀದಾರ್‌ಪ್ರಧಾನ್‌ಸೇವಕ್‌ಚಾಯ್‌ಪಕೋಡಾವಾಲಾಫಕೀರ್.

ಈ ನಡುವೆ ಅಚ್ಛೇ ದಿನ್ ಮಾದರಿ ರಾಜ್ಯ ಗುಜರಾತಿನಲ್ಲಿ ಕನಿಷ್ಟ ಸಂಬಳ ಕೇಳಿದ್ದಕ್ಕೆ ವಜಾ ಆದ ಒಬ್ಬ ನಿಜವಾದ ಚೌಕೀದಾರರು, 4 ವರ್ಷಗಳ ಕೋರ್ಟ್ ಹೋರಾಟದ ನಂತರ ತನ್ನ ಚೌಕೀದಾರ್ ಹುದ್ದೆಯನ್ನು ಕನಿಷ್ಟ ಸಂಬಳದೊಂದಿಗೆ ವಾಪಾಸು ಪಡೆದ ಸುದ್ದಿ (ನ್ಯೂಸ್‌ಸೆಂಟ್ರಲ್, ಮಾರ್ಚ್ 24) ಬೆಳಕಿಗೆ ಬಂದಿದೆ. ಇನ್ನೊಂದಡೆಯಲ್ಲಿ ಹೈದರಾಬಾದಿನ ಚೌಕೀದಾರ ನಾಮಾಂಕಿತ ಮುಖಂಡರು 2.17 ಕೋಟಿ ರೂ.ವಂಚನೆಯ ಕೇಸಿನಲ್ಲಿ ಸಿಲುಕಿ ಕೊಂಡಿದ್ದಾರೆ ಎಂಬ ಸುದ್ದಿಯೂ ಬಂದಿದೆ.

ಚುನಾವಣಾ ಬಾಂಡ್‌ಗಳ ಬಗ್ಗೆ ಚುನಾವಣಾ ಆಯೋಗದ ಅಫಿಡವಿಟ್: ಸರಕಾರದ ಅಪಾರದರ್ಶಕ ಹುನ್ನಾರಕ್ಕೆ ಸಾಕ್ಷಿ

ಬಹುಶಃ ಚುನಾವಣಾ ಬಾಂಡ್ ಎಂಬುದು ಅಚ್ಛೇ ದಿನ್‌ಗಳ ನಿಜಚಿತ್ರವನ್ನು, ಮಾತು ಮತ್ತು ಕೃತಿಯ ನಡುವೆ ಇಷ್ಟೊಂದು ಕಂದರ ಇರಲು ಸಾಧ್ಯವೇ ಎಂದು ಅಚ್ಚರಿ ಪಡುವಂತೆ ಮಾಡಿರುವ ಕ್ರಮ. ಚುನಾವಣಾ ನಿಧಿ ಸಂಗ್ರಹದಲ್ಲಿ ಪಾರದರ್ಶಕತೆಯನ್ನು ತರಲಿಕ್ಕಾಗಿ ಈ ಕ್ರಮ ಎಂದ ಹಣಕಾಸು ಮಂತ್ರಿಗಳು, ಈ ಬಗ್ಗೆ ಸರಕಾರಕ್ಕೆ ಬಹುಮತವಿಲ್ಲದ ರಾಜ್ಯಸಭೆಯಲ್ಲಿ ಈ ಬಗ್ಗೆ ಚರ್ಚೆಯನ್ನೇ ತಪ್ಪಿಸಲು 'ಹಣಕಾಸು ಮಸೂದೆ'ಯ ಹೆಸರಲ್ಲಿ ಪಾಸು ಮಡಿಕೊಂಡಾಗಲೇ ಇದು ಸ್ಪಷ್ಟವಾಗಿತ್ತು. ಆದರೂ ಸತ್ಯದ ತಲೆಗೆ ಹೊಡೆಯುವಂತೆ ಈ ಪಾರದರ್ಶಕತೆಯ ಸೋಗು ಮುಂದುವರೆದಿದೆ.

ಈ ವಾರ ಸುಪ್ರಿಂ ಕೋರ್ಟಿನಲ್ಲಿ ಸ್ವತಃ ಚುನಾವಣಾ ಆಯೋಗವೇ ಇದೊಂದು ಅತ್ಯಂತ ಅಪಾರದರ್ಶಕ ಕ್ರಮ ಎಂದು ಅಫಿಡವಿಟ್ ಸಲ್ಲಿಸಿರುವುದು ಇದೊಂದು ಅಪಾಯಕಾರೀ ಸೋಗು ಎಂಬುದನ್ನು ದೃಢಪಡಿಸಿದೆ, ಚುನಾವಣಾ ಬಾಂಡ್ ಮತ್ತು ಕಾರ್ಪೊರೇಟ್ ನಿಧಿ ನೀಡಿಕೆಯ ಮೇಲಿನ ಮಿತಿಗಳನ್ನು ತೆಗೆದಿರುವುದು ರಾಜಕೀಯ ಹಣಕಾಸು /ರಾಜಕೀಯ ಪಕ್ಷಗಳ ನಿಧಿಸಂಗ್ರಹದ ವಿಷಯದಲ್ಲಿ ಗಂಭೀರ ದುಷ್ಪರಿಣಾಮಗಳನ್ನು ಬೀರುತ್ತವೆ ಎಂದಿದೆ.

ವಿದೇಶಿ ವಂತಿಗೆಗಳ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) ಯನ್ನು ತಿದ್ದುಪಡಿ ಮಾಡುವ ಮೋದಿ ಸರಕಾರದ ನಿರ್ಧಾರ ಭಾರತದಲ್ಲಿ ರಾಜಕೀಯ ಪಕ್ಷಗಳಿಗೆ ಅಡೆತಡೆಯಿಲ್ಲದೆ ವಿದೇಶಿ ಹಣ ಹರಿದು ಬರಲು ಅವಕಾಶ ಕಲ್ಪಿಸುತ್ತದೆ, ಇದರಿಂದ ಭಾರತೀಯ ಧೋರಣೆಗಳನ್ನು ವಿದೇಶಿ ಕಂಪನಿಗಳು ಪ್ರಭಾವಿಸುವಂತಾಗಬಹುದು ಎಂದೂ ಚುನಾವಣಾ ಆಯೋಗ ತನ್ನ ಅಫಿಡವಿಟ್‌ನಲ್ಲಿ ಹೇಳಿದೆ. ನಿಧಿ ಸಂಗ್ರಹದ ವಿಷಯದಲ್ಲಿ ಹೆಚ್ಚಿನ ಪಾರದರ್ಶಕತೆ ತರಬೇಕು ಎಂದು ತಾನು ಕಳೆದ 15 ವರ್ಷಗಲಿಂದಲೂ ಭಾರತ ಸರಕಾರಕ್ಕೆ ಹೇಳುತ್ತ ಬರುತ್ತಿದ್ದು, ಮೋದಿ ಸರಕಾರದ 'ಹಣಕಾಸು ಮಂತ್ರಿಗಳು ಚುನಾವಣಾ ಬಾಂಡ್‌ನ ವಿಚಾರ ಮಂಡಿಸಿ, ಇದಕ್ಕಾಗಿ ಆದಾಯ ತೆರಿಗೆ ಕಾಯ್ದೆ, ಜನತಾ ಪ್ರಾತಿನಿಧ್ಯ ಕಾಯ್ದೆ ಮುಂತಾದವುಗಳಲ್ಲಿ ತಿದ್ದುಪಡಿಗಳ ಬಗ್ಗೆ ಪ್ರಸ್ತಾಪಿಸಿದಾಗ ಇದರ ಪರಿಣಾಮಗಳ ಬಗ್ಗೆ ಸರಕಾರಕ್ಕೆ ಮಾರ್ಚ್ 15, 2017 ರಲ್ಲಿ ಒಂದು ಪತ್ರ ಬರೆದರೆ, ಚುನಾವಣೆಗಳಲ್ಲಿ ಕಾರ್ಪೊರೇಟ್ ನಿಧಿ ನೀಡಿಕೆಯ ಬಗ್ಗೆ ಮೋದಿ ಸರಕಾರ ದಯೋಚನೆಗಳು ವಾಸ್ತವವಾಗಿ ಪಾರದರ್ಶಕತೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡಬಹುದು ಎಂದು ಹೇಳುವ ಪತ್ರವನ್ನು ಮೇ 26, 2017ರಂದು ಇನ್ನೊಂದು ಪತ್ರವನ್ನು ಕಳಿಸಿತು. ಈ ಎರಡೂ ಪತ್ರಗಳ ಪ್ರತಿಗಳನ್ನು ಚುನಾವಣಾ ಆಯೋಗ ಈಗ ತನ್ನ ಅಫಿಡವಿಟ್‌ನಲ್ಲಿ ಸಲ್ಲಿಸಿದೆ.

ಸುಪ್ರಿಂ ಕೋರ್ಟ್ ಚುನಾವಣಾ ಬಾಂಡ್ ಮತ್ತು ಚುನಾವಣಾ ನಿಧಿ ಸಂಗ್ರಹ ಕುರಿತ ಕಾನೂನುಗಳಲ್ಲಿ ಮಾಡಿರುವ ಬದಲಾವಣೆಗಳನ್ನು ಪ್ರಶ್ನಿಸಿ ಸಿಪಿಐ(ಎಂ), ಅಸೋಸಿಯೇಷನ್ ಫಾರ್ ಡೆಮಾಕ್ರಸಿ(ಎಡಿಆರ್), ಕಾಮನ್ ಕಾಸ್ ಮತ್ತಿತರ ಸಂಘಟನೆಗಳು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯ ಸಂದರ್ಭದಲ್ಲಿ ಚುನಾವಣಾ ಆಯೋಗ ಈ ಅಫಿಡವಿಟ್‌ನ್ನು ಸಲ್ಲಿಸಿದೆ.

ಈ ಫೆಬ್ರುವರಿ 28ರಂದು ಹಣಕಾಸು ಇಲಾಖೆ ಚುನಾವಣಾ ಬಾಂಡ್‌ಗಳ ನೀಡಿಕೆಯ ವೇಳಾಪಟ್ಟಿಯನ್ನು ಪ್ರಕಟಿಸಿತು. ಇದರ ಪ್ರಕಾರ ಇವನ್ನು ಮಾರ್ಚ್ 1ರಿಂದ 15, ಎಪ್ರಿಲ್ 1ರಿಂದ 20, ಮತ್ತು ಮೇ 6ರಿಂದ 15 ಈ ಅವಧಿಗಳಲ್ಲಿ ಕೊಡಲಾಗುವುದು. ಇದು ಲೋಕಸಭಾ ಚುನಾವಣೆಗಳ ವೇಳಾಪಟ್ಟಿಗೆ ಅನುಗುಣವಾಗಿಯೇ ಇದೆ ಎಂಬ ಸಂಗತಿಯನ್ನು ಸುಪ್ರಿಂ ಕೋರ್ಟಿನ ಗಮನಕ್ಕೆ ತರುತ್ತ ಎಡಿಆರ್ ಈ ಚುನಾವಣಾ ಬಾಂಡ್ ಯೋಜನೆಗೆ ತಡೆಯಾಜ್ಞೆ ನೀಡಬೇಕು ಎಂದೂ ಕೇಳಿದೆ.

ಜನವರಿ 2018 ರಂದು ಈ ಯೋಜನೆ ಅಧಿಕೃತವಾಗಿ ಆರಂಭವಾಗಿದ್ದು, ಬಿಜೆಪಿ ತನ್ನ 2017-18ರ ಹಣಕಾಸು ವರ್ಷದ ವಾರ್ಷಿಕ ವರದಿಯಲ್ಲಿ 1000 ಕೋಟಿ ರೂ. ಈ ಬಾಬ್ತಿನಲ್ಲಿ ಸಂಗ್ರಹವಾಗಿದೆಂದು ತಿಳಿಸಿದೆ. ಈ ಯೋಜನೆ ಅಧಿಕೃತವಾಗಿ ಆರಂಭವಾದದ್ದೇ ಜನವರಿ 2018ರಲ್ಲಿ. ಅಂದರೆ ಮೂರೇ ತಿಂಗಳಲ್ಲಿ ಬಿಜೆಪಿ ಇದನ್ನು ಸಂಗ್ರಹಿಸಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು, ಪಕ್ಷದ ಚುನಾವಣಾ ಪ್ರಣಾಳಿಕೆಯ ಬಿಡುಗಡೆಯ ಸಂದರ್ಭದಲ್ಲಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತ ಚುನಾವಣಾ ಆಯೋಗದ ಅಫಿಡವಿಟ್ ಸಿಪಿಐ(ಎಂ)ನ ನಿಲುವು ಸರಿಯೆಂಬುದನ್ನು ದೃಢಪಡಿಸಿದೆ ಎನ್ನುತ್ತ ಚುನಾವಣಾ ಬಾಂಡುಗಳು ಕಾನೂನುಬದ್ಧಗೊಳಿಸಿರುವ ರಾಜಕೀಯ ಭ್ರಷ್ಟಾಚಾರ ಎಂದೇ ವರ್ಣಿಸಿದ್ದಾರೆ.

2019ರ ವಿಶ್ವ ನೆಮ್ಮದಿ ಸೂಚ್ಯಂಕ ಪ್ರಕಟವಾಗಿದೆ. ಭಾರತದ ಸ್ಥಾನ 156 ದೇಶಗಳಲ್ಲಿ 140ನೇ ಯದು. ಕಳೆದ ವರ್ಷ 133 ನೇ ಸ್ಥಾನದಲ್ಲಿತ್ತು. 2014ರಿಂದ ಭಾರತದ ಶ್ರೇಯಾಂಕ ಈ ಸೂಚ್ಯಂಕದಲ್ಲಿ ಇಳಿಯುತ್ತಲೇ ಇದೆ. 2015ರಲ್ಲಿ 117, 2016ರಲ್ಲಿ 118 ಮತ್ತು 2017ರಲ್ಲಿ 122. ಯುದ್ಧಪೀಡಿತ ಅಫಘಾನಿಸ್ತಾನ ಬಿಟ್ಟರೆ, ನೆರೆದೇಶ ಪಾಕಿಸ್ತಾನವೂ ಸೇರಿದಂತೆ ದಕ್ಷಿಣ ಏಶ್ಯಾದ ಎಲ್ಲದೇಶಗಳೂ ಶ್ರೇಯಾಂಕದಲ್ಲಿ ಭಾರತಕ್ಕಿಂತ ಮೇಲೆಯೇ ಇವೆ. -ಸುದ್ದಿ



ವ್ಯಂಗ್ಯಚಿತ್ರ: ಸಂದೀಪ್ ಆದ್ವರ್ಯು, ಟೈಂಸ್ ಆಫ್ ಇಂಡಿಯ

ಸಿಪಿಐ(ಎಂ) 17ನೇ ಲೋಕಸಭಾ ಚುನಾವಣಾ ಪ್ರಣಾಳಿಕೆಯ ಮುಖ್ಯಾಂಶಗಳು

ಪುಟ 8 ರಿಂದ

ನಿಲ್ಲಿಸಬೇಕು ಮತ್ತು ರಕ್ಷಣೆ, ಇಂಧನ ಮತ್ತು ರೈಲ್ವೆ ಹಾಗೂ ಮೂಲ ಸೇವೆಗಳ ಖಾಸಗೀಕರಣವನ್ನು ಹಿಂದಕ್ಕೆ ಪಡೆಯಬೇಕು.

11. ಖಾಸಗೀ ವಲಯದಲ್ಲಿ ಉದ್ಯೋಗದಲ್ಲಿ ಮತ್ತು ಶಿಕ್ಷಣದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿ
12. ಶ್ರೀಮಂತರು ಮತ್ತು ಕಾರ್ಪೊರೇಟ್‌ಗಳ ಲಾಭಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಬೇಕು; ಅತಿ ಶ್ರೀಮಂತರ ಮೇಲೆ ಸಂಪತ್ತು ತೆರಿಗೆಯುನ್ನು ಹಾಗೂ ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಯನ್ನು ಮತ್ತೆ ತರಬೇಕು ಮತ್ತು ವಾರಸುದಾರಿಕೆ ತೆರಿಗೆಯನ್ನು ಆರಂಭಿಸಬೇಕು.
13. ಚುನಾವಣಾ ವ್ಯವಸ್ಥೆಯ ಸುಧಾರಣೆ; ಆನುಪಾತಿಕ ಪ್ರಾತಿನಿಧ್ಯವನ್ನು ಭಾಗಶಃ ಪಟ್ಟಿ ಪದ್ಧತಿಯೊಂದಿಗೆ ಆರಂಭಿಸಬೇಕು. ಚುನಾವಣಾ ಬಾಂಡುಗಳನ್ನು ರದ್ದು ಮಾಡಬೇಕು; ಚುನಾವಣಾ ವೆಚ್ಚಗಳಿಗೆ ವಸ್ತು ರೂಪದಲ್ಲಿ ಪ್ರಭುತ್ವದಿಂದ ನಿಧಿ ನೀಡಿಕೆ
14. ಡಿಜಿಟಲ್ ಹಕ್ಕುಗಳು

1. ಡಿಜಿಟಲ್ ಮೂಲರಚನೆಯನ್ನು ಸಾರ್ವಜನಿಕ ಮೂಲರಚನೆಯಾಗಿ ಮಾನ್ಯ ಮಾಡಬೇಕು ಮತ್ತು ಅದನ್ನು ಸಾರ್ವಜನಿಕ ಒಳಿತಿಗೆ ಬಳಸಬೇಕು; 2. ಸೆಕ್ಷನ್ 69ರ ಅಡಿಯಲ್ಲಿ ಪ್ರಭುತ್ವದಿಂದ ಸಾರಾಸಗಟು ನಿಗಾವಣೆಯುನ್ನು ನಿಲ್ಲಿಸಬೇಕು. ನಾಗರಿಕರ ಖಾಸಗಿತ್ವವನ್ನು ಉಲ್ಲಂಘಿಸುವ ಯಾವುದೇ ನಿಗಾವಣೆಗೆ ಸ್ಪಷ್ಟ ಅಂಶಗಳು ಮತ್ತು ನ್ಯಾಯಾಂಗದ ಉಸ್ತುವಾರಿ ಇರಬೇಕು; 3. ಮಾಹಿತಿ ಬಳಸುವವರು ಖಾಸಗಿ ಮಾಹಿತಿಯನ್ನು ವಾಣಿಜ್ಯ ಉಪಯೋಗಕ್ಕೆ ಸ್ವಾಧೀನಪಡಿಸಿಕೊಳ್ಳದಂತೆ/ದುರುಪಯೋಗಪಡಿಸಿಕೊಳ್ಳದಂತೆ ಜನಗಳಿಗೆ ರಕ್ಷಣೆ ನೀಡುವ ಮಾಹಿತಿ ಖಾಸಗಿತ್ವ ಕಾನೂನುಗಳನ್ನು ರೂಪಿಸಬೇಕು; 4. ಜಿಯೊ/ಏರ್ ಟೆಲ್/ವೊಡಫೋನ್ ಮುಂತಾದ ಟೆಲಿಕಾಂಗಳನ್ನು ಅಥವ ಗೂಗಲ್, ಫೇಸ್ ಬುಕ್ ಮುಂತಾದ ಇಂಟರ್ನೆಟ್ ಸೇವೆಗಳ ವೇದಿಕೆಗಳನ್ನು ಬಳಸುವ ಗುತ್ತೇದಾರಿಗಳನ್ನು ತಡೆಯಬೇಕು.

15. ತೃತೀಯ ಲಿಂಗಿಗಳ ಹಕ್ಕುಗಳು:

ಎಲ್ಲ ತೃತೀಯ ಲಿಂಗಿ ವ್ಯಕ್ತಿಗಳ ಹಕ್ಕುಗಳನ್ನು ಎತ್ತಿ ಹಿಡಿಯಲು ಮತ್ತು ಪ್ರಸಕ್ತ ತೃತೀಯ ಲಿಂಗಿ ವ್ಯಕ್ತಿಗಳ ಮಸೂದೆ, 2018 ರಲ್ಲಿರುವ ಕೊರತೆಗಳನ್ನು ನಿವಾರಿಸಲು ತೃತೀಯ ಲಿಂಗಿವ್ಯಕ್ತಿಗಳ ಹಕ್ಕುಗಳ ಮಸೂದೆ, 2018ನ್ನು ಅಂಗೀಕರಿಸಬೇಕು; ಎಲ್.ಜಿ.ಬಿ.ಟಿ. ಅನ್ವಯವಾಗುವ ಒಂದು ಸಮಗ್ರ ಪಕ್ಷಪಾತ–ವಿರೋಧಿ ಮಸೂದೆ; ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ; ಉದ್ಯೋಗದಲ್ಲಿ ಸಮಾಂತರ ಮೀಸಲಾತಿಯನ್ನು ಲಭ್ಯಗೊಳಿಸುವುದು; ಎಲ್.ಜಿ.ಬಿ.ಟಿ. ವ್ಯಕ್ತಿಗಳ ವಿರುದ್ಧದ ಅಪರಾಧಗಳನ್ನು ಎಲ್.ಜಿ.ಬಿ.ಟಿ. ಅಲ್ಲದ ವ್ಯಕ್ತಿಗಳ ವಿರುದ್ಧದ ಅಪರಾಧಗಳಂತೆಯೇ ಪರಿಗಣಿಸುವುದು.

ಜಾತ್ಯತೀತತೆಯ ರಕ್ಷಣೆ:

ಬಿ.ಜೆ.ಪಿ. ಸರಕಾರ ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಿರುವ ಆರೆಸ್ಸೆಸ್ ಸಿಬ್ಬಂದಿಯನ್ನು ತೆಗೆದು ಹಾಕಬೇಕು; ಕೋಮುವಾದಿ ಹಿಂಸಾಚಾರದ ವಿರುದ್ಧ ಒಂದು ಸಮಗ್ರ ಕಾನೂನು ತರಬೇಕು;

ಕೋಮುವಾದಿ ಹಿಂಸಾಚಾರಗಳಿಗೆ ಒಳಗಾದವರಿಗೆ, ಒಕ್ಕೂಟ ಚೌಕಟ್ಟನ್ನು ಉಲ್ಲಂಘಿಸದೆ, ತ್ವರಿತ ನ್ಯಾಯ ಮತ್ತು ಸಾಕಷ್ಟು ಪರಿಹಾರ ಹಾಗೂ ಪ್ರಭುತ್ವದ ಬೆಂಬಲ;

ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಗೋರಕ್ಷಣೆಯ ಹೆಸರಿನಲ್ಲಿ ಹಲ್ಲೆಗಳನ್ನು ನಡೆಸುವ ಮತ್ತು ದ್ವೇಷವನ್ನು ಹರಡಿಸುವ ವಿವಿಧ 'ಸೇನೆಗಳು' ಮತ್ತಿತರ ಕಾನೂನುಬಾಹಿರ ಖಾಸಗಿ ಪಡೆಗಳು ಮತ್ತು ಕಾವಲುಕೋರ ಗುಂಪುಗಳು ಎಲ್ಲವನ್ನೂ ತಕ್ಷಣವೇ ನಿಷೇಧಿಸಬೇಕು;

ಕೋಮುವಾದಿ ದ್ವೇಷವನ್ನು ಹರಡುವಲ್ಲಿ ಮತ್ತು ಅಲ್ಪಸಂಖ್ಯಾತರ ಮೇಲೆ ಹಲ್ಲೆ ಮಾಡುವಲ್ಲಿ ತೊಡಗಿರುವ ಸಂಘಟನೆಗಳು ಮತ್ತು ಸಂಸ್ಥೆಗಳ ಮೇಲೆ ಲಗಾಮು ಹಾಕಲು ಮತ್ತು ಅವುಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳಲು ಸೂಕ್ತ ಶಾಸನಾತ್ಮಕ ಕ್ರಮಗಳನ್ನು ರೂಪಿಸಬೇಕು;

ಹೊಡೆದು ಸಾಯಿಸುವುದರ ವಿರುದ್ಧ ಒಂದು ಕಾನೂನನ್ನು ರೂಪಿಸಬೇಕು;

ಕೋಮುವಾದಿ ಹಿಂಸಾಚಾರವನ್ನು ನಡೆಸುವವರಿಗೆ ಅವರ ಸಾರ್ವಜನಿಕ ಅಥವ ಅಧಿಕೃತ ಸ್ಥಾನಮಾನವನ್ನು ಪರಿಗಣನೆಗೆ ತಗೊಳ್ಳದೆ ಉದಾಹರಣೆಯಾಗಬಲ್ಲ ಶಿಕ್ಷೆಯಾಗುವುದನ್ನು ಖಾತ್ರಿಪಡಿಸಬೇಕು;

ಯಾವುದೇ ಭಯ ಅಥವ ಪಕ್ಷಪಾತವಿಲ್ಲದೆ ಒಂದು ಸಮಾನತೆಯ ಮತ್ತು ಘನತೆಯ ಬದುಕು ನಡೆಸುವ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಬೇಕು;

ಎಲ್ಲ ಶಾಲಾ ಪಠ್ಯಪುಸ್ತಕಗಳಲ್ಲಿ ಕೋಮುವಾದಿ ಪಕ್ಷಪಾತ ಮತ್ತು ಪೂರ್ವಾಗ್ರಹಯುಕ್ತ ಅಂಶಗಳನ್ನು ತೆಗೆದು ಹಾಕಬೇಕು.

ಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ:

ಯಾವುದೇ ಅಂತರ್ರಾಷ್ಟ್ರೀಯ ಸಂಧಿಗೆ ಸಂಸದೀಯ ಮಂಜೂರಾತಿಯನ್ನು ಕಡ್ಡಾಯಗೊಳಿಸುವಂತೆ ಸಂವಿಧಾನಕ್ಕೆ ತಿದ್ದುಪಡಿಯನ್ನು ತರಬೇಕು;

ವಸಾಹತುಶಾಹೀ ಕಾಲದ ರಾಜದ್ರೋಹದ ಕಾಯ್ದೆ, ಭಾರತೀಯ ದಂಡ ಸಂಹಿತೆ(ಐ.ಪಿ.ಸಿ.)ಯ ಸೆಕ್ಷನ್ 124ಎ ನ್ನು ರದ್ದು ಮಾಡಬೇಕು;

ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಎ.ಎಫ್.ಪಿ. ಎಸ್.ಎ.)ಯನ್ನು ರದ್ದು ಮಾಡಿ ಅದರ ಜಾಗದಲ್ಲಿ ಸಶಸ್ತ್ರ ಪಡೆಗಳ ಕಾರ್ಯಾಚರಣೆಗಳಿಗೆ ಕರಾಳ ಅಂಶಗಳಿಲ್ಲದ ಒಂದು ಕಾನೂನು ಚೌಕಟ್ಟನ್ನು ಒದಗಿಸುವ ಸೂಕ್ತ ಕಾಯ್ದೆಯನ್ನು ರೂಪಿಸಬೇಕು;

ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್.ಎಸ್.ಎ.)ಯನ್ನು ರದ್ದು/ ತಿದ್ದುಪಡಿ ಮಾಡಬೇಕು;

ಮಾನಹರಣ ಕುರಿತ ಐ.ಪಿ.ಸಿ.ಯ ಸೆಕ್ಷನ್ 499ನ್ನು ರದ್ದು ಮಾಡಬೇಕು;

ಪೀಡನೆ ಮತ್ತು ಇತರ ಕ್ರೂರ, ಅಮಾನವೀಯ ಅಥವ ಕೀಳಾಗಿಸುವ ವರ್ತನೆ ಅಥವ ಶಿಕ್ಷೆಯ ವಿರುದ್ಧ ಕೈಗೊಂಡಿರುವ ಅಧಿನಿರ್ಣಯವನ್ನು ಊರ್ಜಿತಗೊಳಿಸಬೇಕು;

ಮರಣ ದಂಡನೆಯನ್ನು ತೆಗೆದು ಹಾಕಲು ಭಾರತೀಯ ದಂಡ ಸಂಹಿತೆ ಮತ್ತು ಇತರ ಶಾಸನಗಳಲ್ಲಿ ತಿದ್ದುಪಡಿ ಮಾಡಬೇಕು;

ಒಂದು ನಾಗರಿಕರ ಸನ್ನದು ಮತ್ತು ದೂರು ಪರಿಹಾರ ಕಾಯ್ದೆಯನ್ನು ರೂಪಿಸಬೇಕು, ಈ ಮೂಲಕ ಸಮಯುಬದ್ಧವಾಗಿ ಸೇವೆಗಳು ಒದಗುವಂತಾಗಲು ಮತ್ತು ದೂರು ಪರಿಹಾರ ಸಿಗುವಂತಾಗಲು ಒಂದು ಕಾನೂನು ಚೌಕಟ್ಟನ್ನು ಒದಗಿಸಬೇಕು;

ಸಾರ್ವಜನಿಕ ಕಾರ್ಯಕ್ರಮಗಳ ಪರಿಣಾಮ ಮತ್ತು ನಿರ್ವಹಣೆಯ ಮೌಲ್ಯಮಾಪನಕ್ಕೆ ಸಾಮಾಜಿಕ ಪರಿಶೋಧನೆ ಮತ್ತು ಜವಾಬುದಾರಿಕೆಯನ್ನು ಕಡ್ಡಾಯಗೊಳಿಸಲು ಒಂದು ಶಾಸನವನ್ನು ರೂಪಿಸಬೇಕು ಮತ್ತು ಇದನ್ನು ಆಳ್ವಿಕೆಯ ಎಲ್ಲ ಕ್ಷೇತ್ರಗಳಿಗೆ ವಿಸ್ತರಿಸಬೇಕು ಮತ್ತು ಸರಕಾರ ತನ್ನ ಜನಾದೇಶಕ್ಕೆ ಜವಾಬುದಾರನಾಗುವಂತೆ ಮಾಡಲು ಪ್ರತಿಯೊಬ್ಬ ನಾಗರಿಕರನ್ನು ಸಬಲೀಕರಿಸಬೇಕು;

ಎಲ್ಲ ಸಾಮಾಜಿಕ ಕಲ್ಯಾಣ ಕ್ರಮಗಳಿಗೆ ಆಧಾರ್ ಮತ್ತು ಬಯೋಮೆಟ್ರಿಕ್ ಬಳಕೆಯನ್ನು ರದ್ದುಪಡಿಸಬೇಕು.





ತೆಲಂಗಾಣ, ಆಂಧ್ರ ಪ್ರದೇಶ ವಿಧಾನ_ಪರಿಷತ್ MLC ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷಗಳಿಗೆ 4 MLC ಸ್ಥಾನಗಳಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ.

ಈ ರಾಜ್ಯಗಳಲ್ಲಿ ಎಡ ಪಕ್ಷಗಳಿಗೆ MLA, MP ಇಲ್ಲದಿದ್ದರೂ ವಿಧಾನ ಪರಿಷತ್ ನಲ್ಲಿ ನಿರಂತರವಾಗಿ ಪದವೀಧರರು, ಶಿಕ್ಷಕ ಕ್ಷೇತ್ರದ ಚುನಾವಣೆಯಲ್ಲಿ ಎಡಪಕ್ಷಗಳ ವಿದ್ಯಾರ್ಥಿ, ಯುವಜನ, ಶಿಕ್ಷಕರ ಸಂಘಟನಾ ಶಕ್ತಿ, ಐಕ್ಯ ಚಳುವಳಿಯಿಂದ ಒಐಅ ಸ್ಥಾನಗಳಲ್ಲಿ ಗೆಲುವು ಸಾಧಿಸುತ್ತಿರುವುದು ಸ್ಫೂರ್ತಿದಾಯಕ.

ಶಿಕ್ಷಿತ ಜನರ ಆಯ್ಕೆ ಕಮ್ಯುನಿಸ್ಟ್ ಪಕ್ಷಗಳಾಗಿರುವುದು ಸಂತೋಷ ಹಿಮ್ಮಡಿಯಾಗಿದೆ.

ಪದವಿಧರ, ಶಿಕ್ಷಕರ ಸಮಸ್ಯೆಗಳ ಅರಿವು ಇಲ್ಲದವರು ಹಣ, ಜಾತಿ, ಬಲದಿಂದ ಒಐಅ ಗಳಾಗಿ ಮೇಲ್ಮನೆಯ ಘನತೆ ಗೌರವ ನಾಶ ಮಾಡುತ್ತಿರುವ ಸನ್ನಿವೇಶದಲ್ಲಿ, ಇನ್ನು ಈ ವ್ಯವಸ್ಥೆಯಲ್ಲಿ ನ್ಯಾಯ ನೀತಿ, ಹಕ್ಕುಗಳಿಗಾಗಿ ಹೋರಾಡುವವರಿಗೆ ಶಾಸನಸಭೆಗಳಿಗೆ ಆಯ್ಕೆ ಮಾಡುವ ವಿಶ್ವಾಸ ಉಳಿಸಿದ ತೆಲುಗು ರಾಜ್ಯಗಳ ಪದವಿಧರ ಶಿಕ್ಷಕ ಸಮುದಾಯಕ್ಕೆ ಧನ್ಯವಾದಗಳು.

ಫಲಿತಾಂಶದ ವಿವರಣೆ

1) ಕಾಮ್ರೇಡ್. ಐ. ವೆಂಕಟೇಶ್ವರಲು
ಆಂಧ್ರ ಈಸ್ಟ್ ವೆಸ್ಟ್ ಪದವಿದರರ ಕ್ಷೇತ್ರದ CPIM ಅಭ್ಯರ್ಥಿ
Final Result
ಕಾಮ್ರೇಡ್ ಐ. ವೆಂಕಟೇಶ್ವರಲು – 96670;
ನರಸಿಂಹ ರೆಡ್ಡಿ – 38415;
Majority – 58255;
IV has won with first priority Votes

2) ಕಾಮ್ರೇಡ್. ಕೆ.ಎಸ್. ಲಕ್ಷ್ಮಣ್ ರಾವ್
ಕೃಷ್ಣಾ–ಗುಂಟೂರು ಪದವಿಧರರ ಕ್ಷೇತ್ರದ CPIM ಅಭ್ಯರ್ಥಿ.
ಕೃಷ್ಣಾ–ಗುಂಟೂರು MLC
4ನೇ ರೌಂಡ್
ಒಟ್ಟು ಮತದಾರರು: 42000
ಕೆ.ಎಸ್. ಲಕ್ಷ್ಮಣ್ ರಾವ್: 23592

3) ಕಾಮ್ರೇಡ್ ಅಲುಗುಬೆಲ್ಲಿ ನರಸಿರೆಡ್ಡಿ ತೆಲಂಗಾಣ ರಾಜ್ಯದ ಖಮ್ಮಂ, ವಾರಂಗಲ್ ನಲ್ಲಗೊಂಡ ಶಿಕ್ಷಕರ ಕ್ಷೇತ್ರದ CPIM ಅಭ್ಯರ್ಥಿ ರವರಿಗೆ 2736 ಮತಗಳ ಅಂತರದ ಅಮೋಘ ಗೆಲುವು.
ಖಮ್ಮಂ, ವಾರಂಗಲ್, ನಲ್ಲಗೊಂಡ, ಶಿಕ್ಷಕರ ಕ್ಷೇತ್ರದ ನೂತನ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.
3rd round completed (3886)
ನರಸಿರೆಡ್ಡಿ 2052
ರವೀನದೇರ್ 1301
ಒಟ್ಟು ಮೂರನೇ ಟೌಂಡ್
ನರಸಿರೆಡ್ಡಿ 8954
ರವೀನದೇರ್ 6218
Lead 2736
ವಿಜೇತರಾಗಿ ಘೋಷಣೆ.

4) ಕಾಮ್ರೇಡ್ ರಘುವರ್ಮಾ
ಶ್ರೀಕಾಕುಳಂ–ವಿಜಯನಗರಂ–ವಿಶಾಖಪಟ್ಟಣಂ
ಶಿಕ್ಷಕರ ಕ್ಷೇತ್ರದ CPIM ಬೆಂಬಲಿತ CPI-ML ಅಭ್ಯರ್ಥಿ

ಈ ನಾಲ್ಕು ಜನ ನೂತನ ವಿಧಾನ ಪರಿಷತ್ ಸದಸ್ಯರಿಗೆ ಕೆಂಪು ಅಭಿನಂದನೆಗಳು.

ಕಟ್ಟಡ ಕಾರ್ಮಿಕರ ನೋಂದಣಿಗೆ ವಿನಾಯ್ತಿ ಕೋರಿ ಚುನಾವಣಾ ಆಯೋಗಕ್ಕೆ ಮನವಿ

ರಾಜ್ಯದಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹೊಸದಾಗಿ ಕಟ್ಟಡ ಕಾರ್ಮಿಕರನ್ನು ಮಂಡಳಿಯಲ್ಲಿ ನೋಂದಾಯಿಸಬಾರದು ಹಾಗೂ ಹೊಸದಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಬಾರದು ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಕಾರ್ಯದರ್ಶಿಗಳು ದಿನಾಂಕ 27-03-2019 ರಂದು ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಾನೂನು 1996 ರ ಅಡಿಯಲ್ಲಿ ಲಕ್ಷಾಂತರ ಕಾರ್ಮಿಕರು ಮಂಡಳಿಯಲ್ಲಿ ನೋಂದಣಿಯಾಗಿ ಸೌಲಭ್ಯಗಳನ್ನು ಪಡೆಯುತ್ತಿರುವುದು ತಮಗೆ ತಿಳಿದಿರುವ ಸಂಗತಿಯಾಗಿದೆ. ಮಂಡಳಿಯು ಇತ್ತೀಚಿಗೆ ಆನ್‌ಲೈನ್ ನೊಂದಣಿ ಆರಂಭಿಸಿದೆ ಆದರೆ ಸರ್ವರ್ ಸಮಸ್ಯೆಯಿಂದಾಗಿ ಪ್ರತಿ ಜಿಲ್ಲೆಯಲ್ಲಿ ಸಾವಿರಾರು ಅರ್ಜಿಗಳು ನೊಂದಣಿಯಾಗುತ್ತಿಲ್ಲ ಇದರಿಂದಾಗಿ ಸುಮಾರು ಒಂದು ಲಕ್ಷ ಅರ್ಜಿಗಳು ಬಾಕಿ ಉಳಿದಿವೆ ಇದಲ್ಲದೆ ಸಿಬ್ಬಂದಿ ಕೊರತೆ, ಕಾರ್ಮಿಕ ಇಲಾಖೆಯಲ್ಲಿ ಕೆಲಸದ ಒತ್ತಡದಿಂದಾಗಿ ಫಲಾನುಭವಿಗಳಿಗೆ 12 ಸೌಲಭ್ಯಗಳು ಸರಿಯಾಗಿ ಸಿಗುತ್ತಿಲ್ಲ. ಈ ಸಂಬಂಧ ಇತ್ತೀಚಿಗೆ ಕಾರ್ಮಿಕ ಸಂಘಗಳು ಪ್ರತಿಭಟನೆ ನಡೆಸಿದಾಗ ಆದಷ್ಟು ಬೇಗ ಕಾರ್ಮಿಕ ಸಂಘಗಳ ನೀಡುವ ಹೊಸ ಅರ್ಜಿಗಳನ್ನು ಪಡೆದು ನೋಂದಣಿ ಹಾಗೂ ಫಲಾನುಭವಿ ಆಯ್ಕೆ ಪ್ರಕ್ರಿಯೆಯನ್ನು ಏಪ್ರಿಲ್ 15 ರೊಳಗೆ ಬಗೆಹರಿಸುವ ಭರವಸೆಯನ್ನು ಮಂಡಳಿ ಅಧಿಕಾರಿಗಳು ನೀಡಿದ್ದರು.

ಆದರೆ ಈಗ ಏಕಾಏಕಿ ಹೊಸ ಅರ್ಜಿಗಳ ನೋಂದಣಿಯನ್ನು ಚುನಾವಣಾ ನೀತಿ ಸಂಹಿತೆ ನೆಪದಲ್ಲಿ ತಡೆಹಿಡಿಯಲು ಸುತ್ತೋಲೆ ಹೊರಡಿಸಿರುವುದು ಸಾವಿರಾರು ಕಾರ್ಮಿಕರಿಗೆ ತೊಂದರೆಯನ್ನುಂಟು ಮಾಡಿದೆ. ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿ ಯಾರಾದರೂ ಯಾವುದೇ ಪಕ್ಷದ ಪರವಾಗಿ ನೋಂದಣಿ ಮಾಡಿಸಲು ಪ್ರಯತ್ನ ನಡೆಸಿದಲ್ಲಿ, ಅಂತಹ ನಿರ್ದಿಷ್ಟ ವ್ಯಕ್ತಿ/ಅಧಿಕಾರಿ ಹಾಗೂ ಸಂಘಟನೆ ವಿರುದ್ಧ ಕಾನೂನು ಕ್ರಮವಹಿಸಲು ನಮ್ಮ ಯಾವ ಅಭ್ಯಂತರವಿಲ್ಲ. ಆದರೆ ಇದನ್ನು ಸಾರ್ವತ್ರಿಕಗೊಳಿಸುವುದರಿಂದ ಇಡೀ ರಾಜ್ಯದ ಕಟ್ಟಡ ನಿರ್ಮಾಣ ವಲಯದ ಸಾವಿರಾರು ಕಾರ್ಮಿಕರು ತೊಂದರೆ ಅನುಭವಿಸಲಿದ್ದಾರೆ.

ಆದ್ದರಿಂದ ಚುನಾವಣಾ ನೀತಿ ಸಂಹಿತೆ ನೆಪದಲ್ಲಿ ಹೊಸದಾಗಿ ಕಟ್ಟಡ ಕಾರ್ಮಿಕರ ನೋಂದಣಿ ಹಾಗೂ ಫಲಾನುಭವಿ ಆಯ್ಕೆಯನ್ನು ತಡೆಹಿಡಿಯುವಂತೆ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಗೆ ತಾವು ತಡೆ ನೀಡಬೇಕೆಂದು ಕೋರಿ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ಪರವಾಗಿ ಮುಖ್ಯ ಚುನಾವಣಾಧಿಕಾರಿಗಳಿಗೆ ನಿಯೋಗ ಮನವಿ ಸಲ್ಲಿಸಿತು.

ಮಹಾಂತೇಶ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (CITU) ಪರವಾಗಿ ಎನ್.ಪಿ. ಸ್ವಾಮಿ ಅಧ್ಯಕ್ಷರು ಕರ್ನಾಟಕ ಸ್ಟೇಟ್‌ಕನ್‌ಸ್ಟ್ರಕ್ಷನ್ ವರ್ಕರ್ಸ್ ಸೆಂಟ್ರಲ್‌ಯೂನಿಯನ್ (NCL) ಪರವಾಗಿ ಇದ್ದರು. ●

ಧಾಳಿಗಳನ್ನು ಹಿಮ್ಮೆಟ್ಟಿಸಲು ನಿರ್ಧಾರ..... ಪುಟ 5 ರಿಂದ

ನೌಕರರ ಹಕ್ಕು. ಅದನ್ನು ಚಲಾಯಿಸಬೇಕೇ ಹೊರತು ಬೇಡುವಂತದ್ದಲ್ಲ. ಬೇಡುವಂತದ್ದು ಜೀತಪದ್ಧತಿ. ಈ ರೀತಿ ಬೇಡುವುದಕ್ಕೆ ನೌಕರರಲ್ಲಿ ಆಕ್ರೋಶವಿದೆ. ಈ ಆಕ್ರೋಶಕ್ಕೆ ಈ ಹಿಂದೆ ಇದ್ದ ಕಾರ್ಮಿಕ ಸಂಘಟನೆಗಳು ಸಾರಿಗೆ ನಿಗಮಗಳ ಆಡಳಿತ ಮಂಡಳಿ ಜೊತೆ ಶಾಮೀಲಾಗಿ ಸಮಸ್ಯೆ ಹೆಚ್ಚಾಗಿದ್ದು ಕಾರಣ. ಸಾರಿಗೆ ನಿಗಮಗಳಲ್ಲಿ ಸಿಐಟಿಯು ಸಂಘಟನೆ ಕಟ್ಟಿದ ಮೇಲೆ ಸಂಘಟಿತ ಹೋರಾಟಗಳನ್ನು ನಡೆಸಲಾಗಿದೆ. ಈ ಹೋರಾಟಗಳು ನೌಕರರ ನಡುವೆ ಆಶಾಭಾವ ಮೂಡಿದೆ. ಈ ಆಶಾಭಾವ ಸಂಘಟನೆಯಾದರೆ ಮಾತ್ರ ನೌಕರರ ಸಮಸ್ಯೆಗಳು ಬಗೆಹರಿಯುತ್ತವೆ. ನೌಕರರ ಹೋರಾಟಗಳು ಸರ್ಕಾರದ ನೀತಿಗಳ ಮತ್ತು ಸ್ಥಳೀಯವಾಗಿ ನಡೆಯುವ ಶೋಷಣೆಗಳನ್ನು ಎದುರಿಸುವ ನಿಟ್ಟಿನಲ್ಲಿ ನಡೆಯಬೇಕು' ಎಂದು ಹೇಳಿದರು.

'ನಿಗಮಗಳಲ್ಲಿ ಹೊಸದಾಗಿ ಕೆಲಸಕ್ಕೆ ಸೇರುವವರನ್ನು ತರಬೇತಿ ಹೆಸರಿನಲ್ಲಿ ಶೋಷಣೆ ಮಾಡಲಾಗುತ್ತಿದೆ. ನೀಮ್ ನಿಯಮ, ಫಿಕ್ಸೆಡ್ ಟರ್ಮ್ ಎಂಪ್ಲಾಯ್‌ಮೆಂಟ್ ಕಾನೂನುಗಳನ್ನು ಜಾರಿಗೆ ತರುವ ಮೂಲಕ ನೌಕರರನ್ನು ಜೀತಪದ್ಧತಿಗೆ ತಳ್ಳಲಾಗುತ್ತಿದೆ. ಇವುಗಳನ್ನು ಬಲಿಷ್ಠ ಸಂಘಟನೆ ಮೂಲಕ ಹಿಮ್ಮೆಟ್ಟಿಸಬೇಕು' ಎಂದು ಹೇಳಿದರು.

ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಮಂಜುನಾಥ್ ಮಾತನಾಡಿ, 'ನಿಗಮದೊಳಗೆ ಕೈಗಾರಿಕಾ ಒಪ್ಪಂದ ಆಗಿಲ್ಲದಿರುವುದರಿಂದ ನೌಕರರಿಗೆ ವೇತನ ಕಡಿಮೆಯಾಗಿದೆ. 2008ರಿಂದ ಸಿಐಟಿಯು ಸಂಘಟನೆ ಕೆಲಸ ಮಾಡುತ್ತಿದೆ. ಅಂದಿನಿಂದ ನೌಕರರ ವೇತನ ಶೇ.8, ಶೇ.12 ಹೀಗೆ ಹೆಚ್ಚಳವಾಗುತ್ತಿದೆ. 2008ರಲ್ಲಿ ಆರ್.ಅಶೋಕ್ ಸಾರಿಗೆ ಸಚಿವರಾಗಿದ್ದ ವೇಳೆ ಷೇರು ಮಾರಾಟ ಯತ್ನ. 2009ರಲ್ಲಿ ಅಜೀಜ್ ಸೇಠ್ ಸಾರಿಗೆ ಸಚಿವರಾಗಿದ್ದಾಗಲೂ ಇಂತಹ ಒಂದು ಪ್ರಯತ್ನ ನಡೆದಿತ್ತು, ಆದರೆ ಇಂತಹ ಪ್ರಯತ್ನಗಳನ್ನು ಸಿಐಟಿಯು ಹಿಮ್ಮೆಟ್ಟಿಸಿದೆ. ಕಾರ್ಮಿಕ ಕಾನೂನಿನಂತೆ ದಿನಕ್ಕೆ 8ರಿಂದ 9 ಗಂಟೆ ಕೆಲಸ ಮಾಡಬೇಕು. ಈಗ 12 ಗಂಟೆ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ.. ಬಾರ್ ಡ್ಯೂಟಿ ಹೆಸರಿನಲ್ಲಿ 70ಕ್ಕೂ ಹೆಚ್ಚು ಗಂಟೆಗಳ ಕಾಲ ದುಡಿಸಿಕೊಳ್ಳಲಾಗುತ್ತಿದೆ. ಶೇ.95 ಭಾಗ ಬಾರ್ ರೂಟ್ ಹಾಕಲಾಗುತ್ತದೆ. ಎವಿ ರೂಟ್‌ಗಳನ್ನು ಕಡಿತ ಮಾಡಲಾಗುತ್ತಿದೆ. ಫಾರಂ 4 ಅನ್ನು ಮನಬಂದಂತೆ ಏಕಪಕ್ಷೀಯವಾಗಿ ಬದಲಿಸಲಾಗುತ್ತಿದೆ' ಎಂದು ದೂರಿದರು.

'ಸಾರಿಗೆ ನಿಗಮಗಳಲ್ಲಿ ಕೈಗಾರಿಕಾ ವಿವಾದ ಕಾಯ್ದೆಯಂತೆ ಒಪ್ಪಂದ ಆಗದಿರುವುದರಿಂದ ನಿಗಮದ 1.25 ಲಕ್ಷ ನೌಕರರು ಒಟ್ಟು 350 ಕೋಟಿ ರೂ.ಗಳ ನಷ್ಟ ಮಾಡಿಕೊಂಡಿದ್ದಾರೆ. ಡಿಪೋಗಳಲ್ಲಿ ನೌಕರರಿಗೆ ಸರಿಯಾದ ಸೌಲಭ್ಯಗಳಿಲ್ಲ. ನಾಲ್ಕು ವರ್ಷದಿಂದ ಸಮವಸ್ತ್ರವನ್ನು ಕೊಟ್ಟಿಲ್ಲ. ನೌಕರರ ಹಕ್ಕಾದ ರಜೆಯನ್ನು ಪಡೆಯಲು ರಜೆ ಚೀಟಿ ಜೊತೆ ಹಣವನ್ನು ನೀಡುವ ಪರಿಸ್ಥಿತಿ ಇದೆ. ಮುಂದಿನ ವರ್ಷ ನಿಗದ ಜೊತೆಗೆ ಒಪ್ಪಂದ ಇರುವುದರಿಂದ ಈಗಾಗಲೇ ಸಾರಿಗೆ ಸಚಿವರು ನಿಗಮಗಳು 650 ಕೋಟಿ ರೂ. ನಷ್ಟ ಎದುರಿಸುತ್ತಿವೆ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಆದರೆ ಎಂತಹ ಸಂದರ್ಭದಲ್ಲೂ ನಿಗಮದ ನೌಕರರ ಹಿತ ಕಾಯಲು ಸಂಘಟನೆ ಬದ್ಧವಾಗಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, 'ನೌಕರರಲ್ಲಿ ತೀವ್ರತರವಾದ ಅತೃಪ್ತಿ ಇದೆ. ಸಾರಿಗೆ ನೌಕರರು ನಿಗಮಗಳ ನರನಾಡಿಗಳು ಇದ್ದಂತೆ. ನೌಕರರಿಗೆ ಸಮಾನ ಸೌಲಭ್ಯಗಳು ಸಿಗಬೇಕಿದೆ. ಕಾನೂನಿನಲ್ಲಿ ದಿನಕ್ಕೆ 8 ಗಂಟೆ, ವಾರದಲ್ಲಿ 48 ಗಂಟೆ ಮಾತ್ರ ಕೆಲಸ ಮಾಡಬೇಕು ಎಂದು ಹೇಳಲಾಗಿದೆ. ಆದರೆ ಈ ಯಾವ ನಿಯಮಗಳೂ ಸಾರಿಗೆ ನಿಗಮಗಳಲ್ಲಿ ಪಾಲನೆ ಮಾಡಲಾಗುತ್ತಿಲ್ಲ. ಸಾಮಾನ್ಯ ಸೌಲಭ್ಯಗಳನ್ನು ಕೊಡದೆ ನೌಕರರನ್ನು ದುಡಿಸಿಕೊಳ್ಳಲಾಗುತ್ತಿದೆ. ಕಾರ್ಮಿಕ ಕಾನೂನುಗಳನ್ನು ಮನಬಂದಂತೆ ತಿದ್ದುಪಡಿ ಮಾಡುವ ಮೂಲಕ ಮತ್ತು ಭೂಸ್ವಾಧೀನ ಕಾಯಿದೆಗಳನ್ನು ತಿದ್ದುಪಡಿ ಮಾಡುವ ಮೂಲಕ ಭೂಮಿಯನ್ನು ಬಂಡವಾಳಗಾರರಿಗೆ ಯಾವ ನಿರ್ಬಂಧವೂ ಇಲ್ಲದಂತೆ ನೀಡಲಾಗುತ್ತಿದೆ. ಇಂತಹ ನೀತಿಗಳನ್ನು ಹೋರಾಟದ ಮೂಲಕ ಹಿಮ್ಮೆಟ್ಟಿಸಲು ಸಾಧ್ಯ' ಎಂದರು.

ಸಮಾವೇಶದಲ್ಲಿ ಹಾಸನ ಡಿಪೋ-2ರಲ್ಲಿ ಚಾಲಕರಾಗಿರುವ ಮಂಜಯ್ಯ, ರಾಮನಾಥಪುರ ಘಟಕದ ಚಾಲಕ ಮಂಜಣ್ಣ, ಅರಸೀಕೆರೆ ಡಿಪೋದ ರಮೇಶ್ ಮಾತನಾಡಿ ತಾವು ಡಿಪೋಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು.

ಪದಾಧಿಕಾರಿಗಳು ಆಯ್ಕೆ:

ಸಮಾವೇಶದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೌಕರರ ಸಂಘದ ಹಾಸನ ಜಿಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಮಿತಿಯ ಗೌರವಾಧ್ಯಕ್ಷರಾಗಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಧರ್ಮೇಶ್, ಅಧ್ಯಕ್ಷರಾಗಿ ಆರ್.ಡಿ.ವೀರಪ್ಪ, ಕಾರ್ಯದರ್ಶಿಯಾಗಿ ಕೆಂಪೇಗೌಡ, ಉಪಾಧ್ಯಕ್ಷರಾಗಿ ಮಂಜಣ್ಣ, ರಂಗಸ್ವಾಮಿ, ಜಂಟಿ ಕಾರ್ಯದರ್ಶಿಗಳಾಗಿ ಎಂ.ಎನ್.ಲೋಕೇಶ್, ಸಿ.ಎಸ್. ಮಧುಸೂದನ್, ಕೆರಗೋಡು ಲೋಕೇಶ್, ಹರೀಶ್‌ಕುಮಾರ್ ಆಯ್ಕೆಯಾಗಿದ್ದು, ಕೆಲವು ಸ್ಥಾನಗಳನ್ನು ಖಾಲಿ ಬಿಡಲಾಗಿದೆ. ●

ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಕುರಿತ ...... ಪುಟ 11 ರಿಂದ

ಏರ್ಪಡಿಸಬೇಕು.

18. ಶಿಕ್ಷಣ ಕ್ಷೇತ್ರದಲ್ಲಿ ವಿಕೇಂದ್ರೀಕೃತವಾದ ಮತ್ತು ಅಧಿಕಾರಶಾಹಿಯಿಂದ ಮುಕ್ತವಾದ ಆಡಳಿತ ಸಂರಚನೆಯನ್ನು ಅಳವಡಿಸಿಕೊಳ್ಳಬೇಕು.
19. ಎಲ್ಲ ವಿದ್ಯಾರ್ಥಿಗಳಿಗೂ ಸಹ ಆಧುನಿಕವಾದ ಶೈಕ್ಷಣಿಕ-ತಾಂತ್ರಿಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಉಚಿತವಾದ ಮತ್ತು ಮುಕ್ತವಾದ ಅವಕಾಶ ಇರಬೇಕು.
20. ಶಿಕ್ಷಕರಲ್ಲಿ ವೃತ್ತಿಪರತೆಯನ್ನು ಹೆಚ್ಚಿಸಲು ಸಾಧ್ಯವಾಗುವಂತೆ ಶಿಕ್ಷಕ ತರಬೇತಿಯನ್ನು ಪುನರ್ ರಚಿಸಬೇಕು.
21. ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಬಲಪಡಿಸುವಂತಹ ಕ್ರಮಗಳನ್ನು ಕೈಗೊಳ್ಳಬೇಕು.
22. ಉತ್ತಮ ಗುಣಮಟ್ಟದ ಪೌಷ್ಟಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟದ ನೀಡಬೇಕು. ಅಲ್ಲದೇ 12 ನೇ ತರಗತಿಯವರೆಗೆ ಎಲ್ಲ ವಿದ್ಯಾರ್ಥಿಗಳಿಗೆ ಬಿಸಿಯೂಟವನ್ನು ಒದಗಿಸಬೇಕು.
23. ವಿಶೇಷ ಸೌಲಭ್ಯಗಳು ಅಗತ್ಯವಾದ ಮಕ್ಕಳ ಬಗೆಗೆ ಅವಶ್ಯಕ ಕಾಳಜಿ ಮಾಡಬೇಕು.
24. ಅನಕ್ಷರತೆಯನ್ನು ನಿವಾರಿಸಲು ಸಾಮಾಜಿಕ ಆಂದೋಲನದ ಮಾದರಿಯ ಸಾಕ್ಷರತಾ ಆಂದೋಲನವನ್ನು ಮತ್ತೆ ಆರಂಭಿಸಬೇಕು.
25. ಸಮಗ್ರವಾದ ಮತ್ತು ಜೀವಮಾನದಾದ್ಯಂತದ ಮುಂದುವರಿಕೆ ಶಿಕ್ಷಣ ನೀತಿಯನ್ನು ರೂಪಿಸಬೇಕು.
26. ಶಿಕ್ಷಣ ನೀಡಿಕೆಯ ಪ್ರಕ್ರಿಯೆಯಲ್ಲಿ ಜನಸಮುದಾಯಗಳನ್ನು ಮತ್ತು ಸ್ಥಳೀಯ ಸರಕಾರಗಳನ್ನು ತೊಡಗಿಸಬೇಕು.
27. ನಮ್ಮ ಸಮಾಜದ ಎಲ್ಲ ಹಂತಗಳಲ್ಲೂ ಶೈಕ್ಷಣಿಕ ಕಾರ್ಯಕ್ರಮಗಳ ಜಾರಿಯನ್ನು ಸಮರ್ಥವಾಗಿ ಜನಸಮುದಾಯಗಳು ಸಾಮಾಜಿಕ ತಪಾಸಣೆಗೆ ಒಳಪಡಿಸಲು ಅಗತ್ಯವಾದ ವ್ಯವಸ್ಥೆಯನ್ನು ರೂಪಿಸಬೇಕು. ●

ಬಚ್ಚೇಗೌಡ ಸಾಹುಕಾರು, ಮಗನ ಬಳಿಯೇ ಮೊಯ್ಲಿ... ಪುಟ 16 ರಿಂದ

ಬಾಕಿ ಉಳಿಸಿಕೊಂಡಿಲ್ಲ. ಯಾವುದೇ ಪ್ರಕರಣವೂ ಇಲ್ಲ ಎಂದು ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ.

ಉಳಿದಂತೆ ಇದುವರೆಗೆ ಒಟ್ಟು 13 ಮಂದಿ ಅಭ್ಯರ್ಥಿಗಳು ಲೋಕಸಭೆ ಸ್ಪರ್ಧೆ ಬಯಸಿ ನಾಮಪತ್ರ ಸಲ್ಲಿಸಿದ್ದು, ಆಸ್ತಿ ವಿವರವನ್ನು ಘೋಷಿಸಿಕೊಂಡಿದ್ದಾರೆ.

2.84 ಕೋಟಿ ಒಡೆಯ ದ್ವಾರಕಾನಾಥ್

ಬಿಎಸ್ಪಿ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕಾನಾಥ್ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತನ್ನ ಬಳಿ 2.84 ಕೋಟಿ ರೂ. ಆಸ್ತಿ ಇದೆ ಎಂದು ಘೋಷಿಸಿಕೊಂಡಿದ್ದಾರೆ.

ದ್ವಾರಕಾನಾಥ್ ಕೈಯಲ್ಲಿ 1.50 ಲಕ್ಷ ರೂ. ನಗದು, ವಿವಿಧ ಬ್ಯಾಂಕ್ನ ಉಳಿತಾಯ ಖಾತೆಗಳಲ್ಲಿ 1.73 ಲಕ್ಷ ರೂ. ಹಾಗೂ ಪತ್ನಿ ಎಲ್.ಕಮಲ ಅವರ ಕೈಯಲ್ಲಿ 1.50 ಲಕ್ಷ ರೂ. ನಗದು ಮತ್ತು ಪ್ರತ್ಯೇಕ 2 ಬ್ಯಾಂಕ್ನ ಉಳಿತಾಯ ಖಾತೆಯಲ್ಲಿ 2.88 ಲಕ್ಷ ರೂ. ಇಟ್ಟುಕೊಂಡಿದ್ದಾರೆ. ದ್ವಾರಕಾನಾಥ್ ಅವರು 1 ಲಕ್ಷ ರೂ. ಮೌಲ್ಯದ ಕಾರು ಸೇರಿ ಒಟ್ಟು 4.23 ಲಕ್ಷ ರೂ. ಚರಾಸ್ತಿಯನ್ನು ಹೊಂದಿದ್ದರೆ, ಪತ್ನಿ ವಿವಿಧ ಚಿನ್ನಾಭರಣವೂ ಸೇರಿದಂತೆ ಒಟ್ಟು 26.49 ಲಕ್ಷ ರೂ. ಚರಾಸ್ತಿ ಹೊಂದಿದ್ದಾರೆ.

ದ್ವಾರಕಾನಾಥ್ ಅವರು ಯಾವುದೇ ಕೃಷಿ ಭೂಮಿ ಹೊಂದಿಲ್ಲ. ಬದಲಿಗೆ 80 ಲಕ್ಷ ಮೌಲ್ಯದ ಕೃಷಿಯೇತರ ಭೂಮಿ, 17 ಲಕ್ಷ ರೂ. ಮೌಲ್ಯದ ಮಾರಾಟ ಮಾಡಬಹುದಾದ ಜಮೀನು, 62 ಲಕ್ಷ ರೂ.ಮೌಲ್ಯದ ಪಿತ್ರಾರ್ಜಿತ ಭೂಮಿ, 63 ಸಾವಿರ ರೂ. ಮೌಲ್ಯದ ವಸತಿ ಕಟ್ಟಡದ ಮಾಲೀಕರಾಗಿದ್ದು, ಪತ್ನಿಯೂ ಕೂಡ 1 ಲಕ್ಷ ರೂ.ಮೌಲ್ಯದ ಕೃಷಿಯೇತರ ಭೂಮಿ, 80 ಲಕ್ಷ ರೂ.ಮೌಲ್ಯದ ಪಿತ್ರಾರ್ಜಿತವಾಗಿ ಬಂದ ಭೂಮಿ ಹಾಗೂ 55 ಲಕ್ಷ ರೂ. ಮೌಲ್ಯದ ಸ್ವಯಂ ಖರೀದಿ ಮಾಡಿದ ಜಮೀನು ಇವರ ಬಳಿ ಇದೆ. ಒಟ್ಟಾರೆ ದ್ವಾರಕಾನಾಥ್ ಅವರು 2.42 ಕೋಟಿ ರೂ. ಮೌಲ್ಯದ ಚರಾಸ್ತಿ ಹೊಂದಿದ್ದರೆ, ಪತ್ನಿ ಕಮಲಾ ಅವರು 1.35 ಕೋಟಿ ರೂ. ಮೌಲ್ಯದ ಚರಾಸ್ತಿಯ ಒಡೆತಿಯಾಗಿದ್ದಾರೆ.

ಕೃಪೆ: ವಿಜಯ ಕರ್ನಾಟಕ

ನ್ಯೂಜಿಲೆಂಡ್ ಮಸೀದಿ ಮೇಲೆ ಭಯೋತ್ಪಾದಕ ದಾಳಿ

ಅಮೆರಿಕಾದಲ್ಲಿ 2017 ರಲ್ಲಿ ಸುಮಾರು 7120 ಕ್ಕಿಂತ ಹೆಚ್ಚಿನ ದ್ವೇಷದ ದಾಳಿಗಳಲ್ಲಿ ಶೇ.18 ರಷ್ಟು ಧಾರ್ಮಿಕ ಸ್ವರೂಪದವು'ಗಳಾಗಿದ್ದು ಅವುಗಳಲ್ಲಿ ಹೆಚ್ಚಿನವು ಅಲ್ಲಿನ ಮುಸ್ಲಿಮರು, ಮತ್ತು ಅರಬ್ಬರ ಮೇಲೆ ನಡೆದಿರುವುದು ಕಂಡು ಬಂದಿದೆ. ಶೇಕಡಾ 27 ರಷ್ಟು ಮುಸ್ಲಿಮರು ಯುರೋಪಿನಲ್ಲಿ ಒಂದಲ್ಲ –ಮತ್ತೊಂದು ರೀತಿಯ ದಾಳಿಗೆ ಅಥವಾ ಅವಮಾನಕ್ಕೆ ತುತ್ತಾಗಿದ್ದಾರೆ. ಅವರಲ್ಲಿ ಶೇ.47 ರಷ್ಟು 6 ಬಾರಿಗಿಂತ ಹೆಚ್ಚು ಸಲ ಇಂತಹ ದಾಳಿಗೆ ಒಳಗಾಗಿದ್ದಾರೆ, ಶೇ.2ರಷ್ಟು ದೈಹಿಕ ದಾಳಿಗೆ ತುತ್ತಾಗಿದ್ದಾರೆ. ಇದರಲ್ಲಿ ಶೇ.31 ರಷ್ಟು ಬುರ್ಖಾಧಾರಿ ಮುಸ್ಲಿಂ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಅನುಚಿತ ವರ್ತನೆ ಎದುರಿಸಬೇಕಾಗಿ ಬಂದಿದೆ. ಜಗತ್ತಿನಾದ್ಯಂತ ಮುಸ್ಲಿಮರ ಮೇಲೆ ನಿರಂತರವಾಗಿ ನಡೆಯುತ್ತಿರುವ ದಾಳಿಗಳಿಂದಾಗಿ ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಅಭದ್ರತೆ ಹೆಚ್ಚಾಗಿದೆ. ಒಳ ಬರುವ ವಲಸೆಗೆ, ಅದರಲ್ಲೂ ತಮ್ಮ ದೇಶಗಳಲ್ಲಿನ ಯುವ ಜನರ ಜೀವನೋಪಾಯದ ಅವಕಾಶಗಳಿಗೆ ಕುತ್ತು ಬರುವ ಬಗ್ಗೆ ಭೀತಿ ಹೆಚ್ಚುತ್ತಿದೆ.



ನಾಗರಾಜ ನಂಜುಂಡಯ್ಯ

ಹೀಗಾಗಿ, ಒಂದು ಕಡೆ ನವ ಉದಾರವಾದದ ಬಲವರ್ಧನೆ ಮತ್ತೊಂದು ಕಡೆ, ಬಲಪಂಥೀಯತೆಯ ಉಗಮಗಳಿಗೂ, ಈ ಅಭದ್ರತೆಗೂ ನಿಕಟ ಸಂಬಂಧಿದೆ.

ಮಾರ್ಚ್ 15 ರಂದು ನ್ಯೂಜಿಲ್ಯಾಂಡ್ ನ ಕ್ರೈಸ್ಟ್ ಚರ್ಚ್ ನಲ್ಲಿರುವ ಮಸೀದಿ ಮೇಲೆ ಉಗ್ರಗಾಮಿಗಳು ನಡೆಸಿದ ಅಮಾನವೀಯ ದಾಳಿಯಲ್ಲಿ ಮಸೀದಿ ಒಳಗೆ 7 ಮಂದಿ ಭಾರತೀಯರು ಸೇರಿದಂತೆ ನಮಾಜಿನಲ್ಲಿ ತೊಡಗಿದ್ದ ಸುಮಾರು 50 ಮುಸ್ಲಿಮ್ ಆರಾಧಕರು, ಕೊಲ್ಲಲ್ಪಟ್ಟಿದ್ದಾರೆ ಎಂದು ವರದಿಯಾಗಿದೆ. ಇಡೀ ನ್ಯೂಜಿಲ್ಯಾಂಡ್ ದೇಶವೆ ಒಗ್ಗಟ್ಟಾಗಿ ಒಂದೇ ಧ್ವನಿಯಲ್ಲಿ ಈ ಉಗ್ರಗಾಮಿಗಳ ಕ್ರೂರ ದಾಳಿಯನ್ನು ಖಂಡಿಸಿರುವುದು ಭಾರತಕ್ಕೆ ಮಾದರಿಯಾಗಬೇಕಾಗಿದೆ.

ನ್ಯೂಜಿಲೆಂಡ್ ನ ಪ್ರಧಾನಿ ಜಕಿಂದಾ ಆರ್ಡರ್ನ್ ತಕ್ಷಣ ಪ್ರತಿಕ್ರಿಯಿಸಿ ಕಠಿಣವಾದ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆಯನ್ನು ನೀಡಿದ್ದಾರೆ. ಇದರ ಜೊತೆಗೆ ಒಂದು ಹೆಜ್ಜೆ ಮುಂದುವರಿದು, "ನಮ್ಮ ದೇಶವು ವೈವಿಧ್ಯತೆ, ಕರುಣೆ ಮತ್ತು ಸಹಾನುಭೂತಿ" ಯಿಂದ ಕೂಡಿರುವ ನಾಡೆಂದು, ಬಲಪಂಥೀಯ ರಾಜಕೀಯ ಉಗ್ರರು ಮುಸ್ಲಿಂ ಆರಾದಕರ ಮೇಲೆ ನಡೆಸಿದ ಕ್ರೂರ ದಾಳಿಗಳನ್ನು ಸೂಕ್ತ ರೀತಿಯಲ್ಲಿ ಎದುರಿಸಲು ಹೊಸ ನವೀಕೃತ ಯೋಜನೆಗಳನ್ನು ರೂಪಿಸುವ ಪ್ರಯತ್ನಗಳನ್ನು ಮಾಡಲಾಗುವುದು. ನಾವು "ಎಂದಿಗೂ ಇಂತಹ ದಾಳಿಗಳನ್ನು ಸಹಿಸುವುದಿಲ್ಲ" ಎಂದು ಅವರು ನೀಡಿರುವ ಕಠಿಣ ಎಚ್ಚರಿಕೆಯ ಪ್ರತಿಕ್ರಿಯೆಗೆ ಇಡೀ ಜಗತ್ತೇ ಪ್ರಶಂಸೆಯನ್ನು ವ್ಯಕ್ತಪಡಿಸಿದೆ.

ಈ ದಾಳಿಯ ವಿರುದ್ಧ ನ್ಯೂಜಿಲೆಂಡ್ ಸರ್ಕಾರ ನೀಡಿದ ತಕ್ಷಣದ ಪ್ರತಿಕ್ರಿಯೆ, ಇಡೀ ವಿಶ್ವವೇ ಇದನ್ನು ಖಂಡಿಸಿದ ಪರಿ ದಾಳಿಕೋರರಿಗೆ ಒಂದು ಕಡೆಯಾದರೆ; ಮತ್ತೊಂದು ಕಡೆ, ಭಾರತದ ಪ್ರಧಾನಿ ನರೇಂದ್ರ ಮೋದಿ ಆಡಳಿತವು ಅಷ್ಟೇ ತ್ವರಿತ ಗತಿಯಲ್ಲಿ ಪ್ರತಿಕ್ರಿಯೆ ನೀಡಿಲ್ಲ. ಕಾಟಾಚಾರದ ಒಂದು ಸಣ್ಣ ಧ್ವನಿಯ ಹೇಳಿಕೆ ನೀಡಿರುವುದನ್ನು ಹೊರತು ಪಡಿಸಿದರೆ, ಪುಲ್ವಾನ ದಾಳಿಯ ಸಂದರ್ಭದಲ್ಲಿ "ಎಲ್ಲಾ ಸ್ವರೂಪಗಳ ಭಯೋತ್ಪಾದನೆಯನ್ನು ಉಗ್ರವಾಗಿ ಜಗತ್ತೆ ಒಕ್ಕೊರಲಿನಿಂದ ಖಂಡಿಸಬೇಕು" ಎಂಬ ತನ್ನ ಕಠಿಣ ರೋಷದ ಮಾತಿಗೆ ವ್ಯತಿರಿಕ್ತವಾಗಿದೆ. ಇದಕ್ಕೆ ಕಾರಣಗಳನ್ನು ಹುಡುಕ ಬೇಕಾದ ಅಗತ್ಯವಿಲ್ಲವೆನಿಸುತ್ತದೆ. ನ್ಯೂಜಿಲೆಂಡ್ ನ ಕ್ರೈಸ್ಟಚರ್ಚ್ ನ ಮಸೀದಿಯ ದಾಳಿಯಲ್ಲಿ ಕೊಲ್ಲಲ್ಪಟ್ಟವರು ಮುಸ್ಲಿಂ ಆರಾಧಕರಾದ್ದರಿಂದ ಈ ರೀತಿಯಾಗಿ ನಡೆದುಕೊಂಡಿದೆ ಎಂಬ ಅಭಿಪ್ರಾಯ ಮೂಡಿದೆ. ಆದರೆ, ಪುಲ್ವಾನ ಉಗ್ರರ ದಾಳಿಯನ್ನು ಅಷ್ಟೇ ತ್ವರಿತ ಗತಿಯಲ್ಲಿ ತನ್ನ ಚುನಾವಣಾ ರಾಜಕೀಯಕ್ಕೆ ಬಳಸಿಕೊಂಡಿದ್ದು, ಹಾಗೆಯೇ ಕಾಶ್ಮೀರದ ವಿದ್ಯಾರ್ಥಿಗಳ ಮೇಲೆ ಹಿಂದುತ್ವದ ಉಗ್ರ ಸ್ವರೂಪಿ ಸಂಘಿಗಳು ನಡೆಸಿದ ಆಕ್ರಮಣ ಕೋರತನದ ಬಗ್ಗೆ ಪ್ರತಿಕ್ರಿಯಿಸಲು ನರೇಂದ್ರ ಮೋದಿ ಬಿಜೆಪಿ ಸರ್ಕಾರವು ಒಂದು ವಾರದಷ್ಟು ಸಮಯ ತೆಗೆದುಕೊಂಡಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆದರೆ ಇಂತಹ ಧೋರಣೆ ಭಾರತಕ್ಕೆ ವಿಶಿಷ್ಟವಾದದ್ದಲ್ಲ. ಜಗತ್ತಿನಾದ್ಯಂತ ಅನೇಕ ಬಲಪಂಥೀಯ ಸಕಾರಗಳು ಸೈದ್ಧಾಂತಿಕವಾಗಿ ಈ ಉಗ್ರ ಬಲಪಂಥೀಯ ಪ್ರತಿಗಾಮಿ ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿವೆ. ಆದರೆ, ನ್ಯೂಜಿಲೆಂಡ್ ಇದಕ್ಕೆ ವ್ಯತಿರಿಕ್ತವಾಗಿದೆ ಎಂದು ಗುರುತಿಸಬಹುದು. ಯುಎಸ್ ಮತ್ತು ಯುಕೆ ಯಲ್ಲಿನ ವಲಸೆಗಾರ–ವಿರೋಧಿ ವರ್ತನೆಗಳನ್ನು ಇಲ್ಲಿ ಉದಾಹರಣೆಗೆ ಗಮನಿಸಬಹುದು. ಇದು ಉಗ್ರ ಬಲಪಂಥೀಯ ರಾಜಕೀಯದ ಉಗಮ ಮತ್ತು ಬೆಳವಣಿಗೆಯ ಅಸ್ತ್ರವಾಗಿದೆ ಎಂಬುದನ್ನು ಗಮನಿಸ ಬೇಕಾಗುತ್ತದೆ.

ಜಗತ್–ವ್ಯಾಪಿ ಇಸ್ಲಾಂ–ಭೀತಿಯ ಭೂತ

ಬ್ರಿಟನ್ ನಲ್ಲಿನ ಕಳೆದ ಒಂದು ವರ್ಷದಲ್ಲಿ ಮುಸಿಮರ ಮೇಲೆ ದಾಳಿಗಳು ಶೇ.65 ರಷ್ಟು ಹೆಚ್ಚಿರುವುದನ್ನು ಅಂಕಿ ಅಂಶಗಳು ಸಾಬೀತು ಪಡಿಸುತ್ತವೆ. ಅಮೆರಿಕಾ ದಲ್ಲಿ 2017 ರಲ್ಲಿ ಸುಮಾರು 7120 ಕ್ಕಿಂತ ಹೆಚ್ಚಿನ ದ್ವೇಷದ ದಾಳಿಗಳಲ್ಲಿ ಶೇ.18 ರಷ್ಟು ಧಾರ್ಮಿಕ ಸ್ವರೂಪದವುಗಳಾಗಿದ್ದು ಅವುಗಳಲ್ಲಿ ಹೆಚ್ಚಿನವು ಅಲ್ಲಿನ ಮುಸ್ಲಿಮರು, ಮತ್ತು ಅರಬ್ಬರ ಮೇಲೆ ನಡೆದಿರುವುದು ಕಂಡು ಬಂದಿದೆ. ಕೆನಡಾದಲ್ಲಿಯು ಸಹಾ ಅಲ್ಲಿನ ಮುಸ್ಲಿಮರು, ಯಹೂದಿಗಳು ಮತ್ತು ಕರಿಯರ ವಿರುದ್ಧದ ದ್ವೇಷದ ಅಪರಾಧಗಳು ಕಳೆದ ಒಂದು ವರ್ಷದಲ್ಲಿ ಶೇ.47 ರಷ್ಟು ಹೆಚ್ಚಿರುವುದನ್ನು ಅಧಿಕೃತ ಅಂಕಿಅಂಶಗಳು ಹೊರ ಹಾಕಿವೆ.

2017 ರ ಯುರೋಪಿಯನ್ ಇಸ್ಲಾಮೊ ಫೋಬಿಯಾ (ಇಸ್ಲಾಂ–ಭೀತಿ) ವರದಿಯ ಪ್ರಕಾರ, 81 ಮಸೀದಿಗಳ ಮತ್ತು 908 ದಾಳಿಗಳು ಜರ್ಮನ್ ಮುಸ್ಲಿಂರ ಮೇಲೆ ದಾಳಿಗಳು ನಡೆದಿವೆ. ಯುರೊಪಿಯನ್ ಯೂನಿಯನ್ ನ ಮತ್ತೊಂದು ಸರ್ವೆಯ ಪ್ರಕಾರ, ಮುಸ್ಲಿಮರು ಕೆಲಸ ಮಾಡುವ ಸ್ಥಳಗಳಲ್ಲಿ ಮತ್ತು ಮುಸ್ಲಿಮರು ಹೇರಳವಾಗಿರುವ ಸಾರ್ವಜನಿಕ ಸ್ಥಳಗಳಲ್ಲಿ ದೈಹಿಕ ಹಲ್ಲೆಗಳು ಹೆಚ್ಚಾಗಿ ನಡೆದಿರುವುದು ಬೆಳಕಿಗೆ ಬಂದಿವೆ. ಶೇಕಡಾ 27 ರಷ್ಟು ಮುಸಿಮರು ಯುರೋಪಿನಲ್ಲಿ ಒಂದಲ್ಲ –ಮತ್ತೊಂದು ರೀತಿಯ ದಾಳಿಗೆ ಅಥವಾ ಅವಮಾನಕ್ಕೆ ತುತ್ತಾಗಿದ್ದಾರೆ. ಅವರಲ್ಲಿ ಶೇ.47 ರಷ್ಟು 6 ಬಾರಿಗಿಂತ ಹೆಚ್ಚು ಸಲ ಇಂತಹ ದಾಳಿಗೆ



ಒಳಗಾಗಿದ್ದಾರೆ, ಶೇ.2ರಷ್ಟು ದೈಹಿಕ ದಾಳಿಗೆ ತುತ್ತಾಗಿದ್ದಾರೆ. ಇದರಲ್ಲಿ ಶೇ.31 ರಷ್ಟು ಬುರ್ಖಾಧಾರಿ ಮುಸ್ಲಿಂ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಅನುಚಿತ ವರ್ತನೆ ಎದುರಿಸಬೇಕಾಗಿ ಬಂದಿದೆ. ಹೀಗೆ ಜಗತ್ತಿನಾದ್ಯಂತ ಮುಸ್ಲಿಮರ ಮೇಲೆ ನಿರಂತರವಾಗಿ ನಡೆಯುತ್ತಿರುವ ದಾಳಿಗಳಿಂದಾಗಿ ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಅಭದ್ರತೆ ಹೆಚ್ಚಾಗಿದೆ. ಒಳ ಬರುವ ವಲಸೆಗಾರರು, ಅದರಲ್ಲೂ ತಮ್ಮ ದೇಶಗಳಲ್ಲಿನ ಯುವ ಜನರ ಜೀವನೋಪಾಯದ ಅವಕಾಶಗಳಿಗೆ ಕುತ್ತು ಬರುವ ಬಗ್ಗೆ ಭೀತಿ ಹೆಚ್ಚುತ್ತಿದೆ.

ಹೀಗಾಗಿ, ಒಂದು ಕಡೆ ನವ ಉದಾರವಾದದ ಬಲವರ್ಧನೆ ಮತ್ತೊಂದು ಕಡೆ, ಬಲಪಂಥೀಯತೆಯ ಉಗಮಗಳಿಗೂ, ಈ ಅಭದ್ರತೆಗೂ ನಿಕಟ ಸಂಬಂಧಿದೆ. ನವ–ಉದಾರವಾದಿ ಆಳ್ವಿಕೆಯಲ್ಲಿ ಸಂಪತ್ತು ಒಂದು ಕಡೆ ಗರಿಷ್ಟ ಮಟ್ಟದಲ್ಲಿ ಸಾಂದ್ರಗೊಳ್ಳುತ್ತದೆ. ಅಸಮಾನ ಅಭಿವೃದ್ಧಿ ಮತ್ತು ಆರ್ಥಿಕ ಅಸಮಾನತೆಯು ವಿಪರೀತವಾಗಿ ಹೆಚ್ಚಾಗುತ್ತದೆ. ಇದು ವಿಶೇಷವಾಗಿ, ಪ್ರತ್ಯೇಕಿತ ಸಾಂಸ್ಕೃತಿಕ ರಾಷ್ಟ್ರೀಯತೆಯ ಸ್ವರೂಪಕ್ಕೆ ನಾಂದಿಯಾಗುತ್ತದೆ. ಇದು ಆಯಾ ದೇಶಗಳಲ್ಲಿನ ಅಲ್ಪಸಂಖ್ಯಾತರ ಮೇಲಿನ ದಾಳಿಗೆ ಇಂಬು ನೀಡುತ್ತದೆ. ರಾಷ್ಟ್ರೀಯ ಬೂರ್ಜ್ವಾಗಳಿಗೆ ಇದರ ಹೆಚ್ಚಿನ ಫಲ ಸಿಗುತ್ತದೆ. ಇಂತಹ ಆಡಳಿತದಲ್ಲಿ ಕಾರ್ಮಿಕರ ಮೇಲೆ ಹೆಚ್ಚು ಮಿತವ್ಯಯ ಮತ್ತು ಶಿಸ್ತು ಹೇರುವ ಮೂಲಕ ಅವರ ಸೌಲಭ್ಯ ಗಳ ಮೇಲೆ ಆಕ್ರಮಣ ಮಾಡಲಾಗುತ್ತದೆ. ಉದಾಹರಣೆಗೆ, ಹಂಗೇರಿಯಲ್ಲಿ ವಿಕ್ಟರ್ ಅರ್ಬನ್ ಅವರ ಆಳ್ವಿಕೆಯಲ್ಲಿ "ಅನುದಾರ ಪ್ರಜಾಪ್ರಭುತ್ವ" ನೀತಿಗಳಿಂದಾಗಿ ಹಕ್ಕು–ಆಧಾರಿತ ಸಾಮಾಜಿಕ ಕಲ್ಯಾಣ ಮತ್ತು ರಾಜಕೀಯ ಹಕ್ಕುಗಳ ಪರಿಕಲ್ಪನೆಯ ಮೇಲೆ ದಾಳಿ ಮಾಡಲಾಗುತ್ತಿದೆ. ಕಾರ್ಮಿಕರ ಕರ್ತವ್ಯದ ಮೇಲೆ ಒತ್ತು ಕೊಡುವ ಹಾಗೂ ಸಾಮಾಜಿಕ ಕಲ್ಯಾಣ ಬಯಸುವವರನ್ನು ಶಿಕ್ಷಿಸುವ ಆರ್ಥಿಕ ನೀತಿಗಳನ್ನು ತರಲಾಗುತ್ತಿದೆ. ಹಾಗೆಯೇ, ಪೋಲ್ಯಾಂಡ್ ನಲ್ಲಿಯು ಅಲ್ಲಿನ ಜಾರೊಸ್ಲಾ ಕಕ್ಜಿನಿಸ್ಕಿ ಆಡಳಿತವು ಬಲಪಂಥೀಯ ವಲಸೆಗಾರ–ವಿರೋಧಿ, ಜನಾಂಗೀಯ ಮತ್ತು ಅನ್ಯ ದ್ವೇಷದ ನೀತಿಗಳನ್ನು ಪ್ರೋತ್ಸಾಹಿಸಿದೆ. ವಲಸೆಗಾರ–ವಿರೋಧಿ ನೀತಿ ನಿರುದ್ಯೋಗಿ ಸುಶಿಕ್ಷಿತ ಯುವಕರ ಅತೃಪ್ತಿಯನ್ನು ಬಳಸಿಕೊಳ್ಳುವ ಉದ್ದೇಶ ಹೊಂದಿದೆ.

2017 ರ, ಯುರೋಪಿಯನ್ ಇಸ್ಲಾಮೋಫೋಬಿಯಾ ವರದಿಯ ಪ್ರಕಾರ, ಬಹುತೇಕ ಜನಾಂಗೀಯ ಅಲ್ಪಸಂಖ್ಯಾತ–ವಿರೋಧಿ ಅಪರಾಧಗಳನ್ನು ಬಿಳಿ ಯುವಕರೇ ಎಸಗುತ್ತಾರೆ.

ಅಲ್ಪಸಂಖ್ಯಾತರ ಅಭದ್ರತೆ ಪರಕೀಯ–ಭಾವವನ್ನು ಹೋಗಲಾಡಿಸಬೇಕು

ಈ ಮೇಲಿನ ನಿರೂಪಣೆ ಜಗತ್ತಿನಾದ್ಯಂತ ಅಲ್ಪಸಂಖ್ಯಾತರ ಬುಹು ಪ್ರಮುಖ ವಾಗಿ ಮುಸ್ಲಿಮ್ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಗಳ ದೃಷ್ಟಾಂತಗಳಷ್ಟೇ. ಭಾರತದಲ್ಲಿ ಸಹ ಪ್ರಸ್ತುತ ಬಿಜೆಪಿ ಆಡಳಿತದಲ್ಲಿ, ಇದೇ ರೀತಿಯಾಗಿ, ಮುಸ್ಲಿಮರನ್ನೇ ಗುರಿಯಾಗಿಸಿ ದಾಳಿಗಳನ್ನು ನಡೆಸಲಾಗುತ್ತಿದೆ. ಈ ಸರ್ಕಾರವು ನಿರ್ದಿಷ್ಟವಾಗಿ ಮುಸ್ಲಿಂ ವಿರೋಧಿಯಾದ, ತನ್ನ ರಾಜಕೀಯ ಗುರು ಆರ್.ಎಸ್.ಎಸ್.ನ ಕಾರ್ಯಸೂಚಿಯಾದ ಹಿಂದುತ್ವದ ರಾಷ್ಟ್ರೀಯತೆಯನ್ನು ದೇಶದ ಮೇಲೆ ಹೇರಿ, ಭಾರತದ ಬಹುತ್ವವನ್ನು ಸಾರುವ ಸಂವಿಧಾನದ ಅಡಿಪಾಯ ಗಳಾದ ಜಾತ್ಯಾತೀತ ಪ್ರಜಾಪ್ರಭುತ್ವ ಗಣತಂತ್ರ ಕ್ಕೆ ಧಕ್ಕೆ ತರುವಂತೆ ವರ್ತಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸಂಘ ಪರಿವಾರದ ಉಗ್ರ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಸರ್ಕಾರದ ನೀತಿಗಳಲ್ಲಿ ಅಭಿವ್ಯಕ್ತಿಗೊಳಿಸಲು ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಕೆಟ್ಟದಾದ ನಾಗರಿಕ ಮಸೂದೆಯನ್ನು ಜಾರಿಗೆ ತರಲು ಸೋತಿದೆ. ಬಲಪಂಥೀಯ ಚುನಾವಣಾ ಪ್ರಚಾರವು ದೇಶ ಭಕ್ತಿ ಎಂಬ ಹೆಸರಿನಲ್ಲಿ ಕೇಂದ್ರೀಕೃತ ಗೊಂಡಿದೆ.

2002 ರಲ್ಲಿ ಗುಜಾರತ್ ಮುಸ್ಲಿಮ್ ಹತ್ಯಾಕಾಂಡದ ಅಧ್ಯಕ್ಷತೆ ವಹಿಸಿದ್ದ ಇಂದಿನ ಪ್ರಧಾನಿ ಮೋದಿ ಇದಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ. ಅವರ ಆಡಳಿತದಲ್ಲಿ ಕೇಸರಿ ಭಯೋತ್ಪಾದನೆ ಪ್ರಕರಣಗಳ ಆರೋಪಿಗಳು ಈಗಾಗಲೇ ಖುಲಾಸೆಯಾಗುವಂತೆ ಮಾಡಲಾಗಿದೆ. ಭಾರತದಲ್ಲಿ ಇಸ್ಲಾಂ–ಭೀತಿಯ ಭೂತ ಹೊಸದಲ್ಲ. ಅದು ದೇಶ ವಿಭಜನೆಯ ಕಾಲದಿಂದಲೂ ಇದೆ. ಆದರೆ ಮೋದಿ ಸರಕಾರದ ಆಳ್ವಿಕೆಯಲ್ಲಿ ಹೆಚ್ಚಿನ ಭಾರತೀಯ ಮುಸ್ಲಿಮರ ದೈನಂದಿನ ಜೀವನದಲ್ಲಿ ಒಳಹೊಕ್ಕು ಅವರಲ್ಲಿ ಹಿಂದೆಂದೂ ಕಾಣದ ಪ್ರಮಾಣದ ಅಭದ್ರತೆ ಪರಕೀಯ–ಭಾವನೆ ಉಂಟು ಮಾಡಿದೆ. ಈ ನಿಟ್ಟಿನಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿ ಗಳು ಒಂದಾಗಿ ಈ ಅಲ್ಪಸಂಖ್ಯಾತ ಮುಸಿಮರು ಎದುರಿಸುತ್ತಿರುವ ಅಭದ್ರತೆ ಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಬೇಕಾಗಿದೆ. 2019 ರ ಮಹಾ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು, ಎಲ್ಲರೂ ಒಗ್ಗೂಡಿದರೆ ಮಾತ್ರವೇ ಭವಿಷ್ಯ ಭಾರತ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಸಾಧ್ಯವಾಗುತ್ತದೆ. ●



JANASHAKTHI KANNADA VARA PATRIKE APRIL 1-7, 2019 Price: Rs. 10/- Date of Publication: 29 MARCH 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಬಚ್ಚೇಗೌಡ ಸಾಹುಕಾರು, ಮಗನ ಬಳಿಯೇ ಮೊಯ್ಲಿ ಸಾಲಗಾರ !

ಮಗ, ಪತ್ನಿಯಿಂದ 1.75 ಕೋಟಿ. ಸಾಲ ಪಡೆದ ಮೊಯ್ಲಿ । ಬಚ್ಚೇಗೌಡಗಿಂತ ಅವರ ಪತ್ನಿಯೇ ಶ್ರೀಮಂತೆ !





ಸೋಮವಾರ ನಾಮಪತ್ರ ಸಲ್ಲಿಸುವ ಮೂಲಕ ರಣಕಣಕ್ಕೆ ಧುಮುಕಿರುವ ಮೈತ್ರಿ ಅಭ್ಯರ್ಥಿ ಎಂ.ವೀರಪ್ಪಮೊಯ್ಲಿ, ಬಿಜೆಪಿ ಅಭ್ಯರ್ಥಿ ಬಿ.ಎನ್.ಬಚ್ಚೇಗೌಡ ತಮ್ಮ ಆಸ್ತಿ ವಿವರ ಘೋಷಿಸಿಕೊಂಡಿದ್ದಾರೆ. ಮೊಯ್ಲಿ ಅವರಿಗಿಂತ ಹೆಚ್ಚಿನ ಆಸ್ತಿ ಹೊಂದಿರುವ ಬಚ್ಚೇಗೌಡ ಕೋಟ್ಯಧಿಪತಿಯಾಗಿದ್ದಾರೆ.

ಜತೆಗೆ, ಬಿಎಸ್ಪಿ ಪಕ್ಷ ಅಭ್ಯರ್ಥಿ ಡಾ.ಸಿ.ಎಸ್.ದ್ವಾರಕಾನಾಥ್ ಹಾಗೂ ಸಿಪಿಐಎಂ ಪಕ್ಷದ ಎಸ್.ವರಲಕ್ಷ್ಮೀ ಕೂಡ ನಾಮಪತ್ರ ಸಲ್ಲಿಕೆ ವೇಳೆ ಚುನಾವಣಾ ಆಯೋಗಕ್ಕೆ ತಮ್ಮ ಆಸ್ತಿ ವಿವರ ಸಲ್ಲಿಸಿದ್ದಾರೆ.

ಕ್ಷೇತ್ರದಲ್ಲಿ ಸತತ 2 ಬಾರಿ ಸಂಸದರಾಗಿ ಕೇಂದ್ರದಲ್ಲಿ ಪ್ರಭಾವಿ ಸಚಿವರಾಗಿ ನಾಲ್ಕೈದು ಇಲಾಖೆಗಳನ್ನು ನಿಭಾಯಿಸಿರುವ ವೀರಪ್ಪಮೊಯ್ಲಿ, ಕಳೆದ ನಾಲ್ಕೈದು ದಶಕಗಳಿಂದ ರಾಜಕಾರಣದಲ್ಲಿ ಇದ್ದಾರೆ. ಪ್ರಸ್ತುತ ಅವರ ಕೈಯಲ್ಲಿ 1,40,579 ರೂ.ನಗದು ಇದ್ದು, ಪತ್ನಿ ಬಳಿ 1,03,336 ರೂ. ಇದೆ. ಮೊಯ್ಲಿ ಅವರು 6 ವಿವಿಧ ಬ್ಯಾಂಕ್ಗಳ ಉಳಿತಾಯ ಖಾತೆಯಲ್ಲಿ 9,23,007 ರೂ. ಪ್ರತ್ಯೇಕ 2 ಬ್ಯಾಂಕ್ಗಳಲ್ಲಿ ಖಾಯಂ ಉಳಿತಾಯ 7.50 ಲಕ್ಷ ರೂ., ವಿಜಯಾಬ್ಯಾಂಕ್ನಲ್ಲಿ 41,000 ಷೇರು ಬಂಡವಾಳ, ಅವರ ಪತ್ನಿ ಐದು ಪ್ರತ್ಯೇಕ ಬ್ಯಾಂಕ್ಗಳ ಉಳಿತಾಯ ಖಾತೆಯಲ್ಲಿ 5,56,310 ರೂ. 3 ಪ್ರತ್ಯೇಕ ಬ್ಯಾಂಕ್ಗಳಲ್ಲಿ 29,32,591 ರೂ.ಖಾಯಂ ಉಳಿತಾಯವನ್ನು ಹೊಂದಿದ್ದಾರೆ. ಎಸ್ಡಿಸಿಸಿ ಬ್ಯಾಂಕ್ನಲ್ಲಿ 10,100 ರೂ. ಷೇರು ಹೂಡಿಕೆ ಮಾಡಿದ್ದಾರೆ.

1.75 ಕೋಟಿ. ಸಾಲಗಾರ ಮೊಯ್ಲಿ

ಮೊಯ್ಲಿ ಅವರು ಮಗ ಹರ್ಷ ಬಳಿ 1,23,66,157 ರೂ. ಹಾಗೂ ಪತ್ನಿ ಬಳಿ 52, 11,517 ರೂ. ಸಾಲ ಪಡೆದಿದ್ದಾರೆ. ಪತ್ನಿ ಕೂಡ ಮಗ ಹರ್ಷ ಬಳಿ 4,84,82, 776 ರೂ. ಸಾಲ ಮಾಡಿದ್ದಾರೆ. ಮೊಯ್ಲಿ 1,93, 718 ರೂ. ಮೌಲ್ಯದ ಒಂದು ಐಷಾರಾಮಿ ಕಾರು ಹೊಂದಿದ್ದರೆ, ಪತ್ನಿ 9,86,140 ರೂ. ಮೌಲ್ಯದ 2 ಐಶಾರಾಮಿ ಕಾರುಗಳ ಮಾಲೀಕರವಾಗಿದ್ದಾರೆ. ಮೊಯ್ಲಿ ಬಳಿ ಯಾವುದೇ ಚಿನ್ನಾಭರಣ ಇಲ್ಲ, ಆದರೆ ಅವರ ಪತ್ನಿ ಬಳಿ 14.33 ಲಕ್ಷ ರೂ. ಮೌಲ್ಯದ ವಿವಿಧ ಬಗೆಯ ಚಿನ್ನಾಭರಣಗಳಿವೆ.

ಇನ್ನು ಮೊಯ್ಲಿ ಬಳಿ ಯಾವುದೇ ಕೃಷಿ ಭೂಮಿ ಇಲ್ಲ. ಪತ್ನಿ ಹೆಸರಲ್ಲಿ 20.87 ಎಕರೆ ಕೃಷಿ ಜಮೀನು ಇದ್ದು, ಅದರ ಪ್ರಸ್ತುತ ಬೆಲೆ 4,66,30,000 ರೂ. ಎಂದು ಅಫಿಡವಿಟ್ನಲ್ಲಿ ಘೋಷಿಸಿಕೊಂಡಿದ್ದಾರೆ.

ಒಟ್ಟಾರೆ ಹಾಲಿ ಸಂಸದ ಮೊಯ್ಲಿ ಅವರ ಬಳಿ 4,90,558 ರೂ. ಮೌಲ್ಯದ ಸ್ಥಿರಾಸ್ತಿ ಮತ್ತು 2.27 ಕೋಟಿ ರೂ. ಚರಾಸ್ತಿ ಇದ್ದು, ಪತ್ನಿ ಬಳಿ 30.54 ಲಕ್ಷ ರೂ. ಸೇರಿ ಒಟ್ಟು 5.74 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಮತ್ತು 5.55 ಕೋಟಿ ರೂ. ಚರಾಸ್ತಿ ಇದೆ.

ಮೊಯ್ಲಿಗಿಂತ ಬಚ್ಚೇಗೌಡರು ಶ್ರೀಮಂತ

ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿರುವ ಬಿಜೆಪಿ ಅಭ್ಯರ್ಥಿ ಬಿ.ಎನ್.ಬಚ್ಚೇಗೌಡ ಅವರು ಅತಿ ಶ್ರೀಮಂತರಾಗಿದ್ದಾರೆ. ಬಚ್ಚೇಗೌಡರ ಬಳಿ 10 ಲಕ್ಷ ರೂ. ನಗದು, ವಿವಿಧ ಬ್ಯಾಂಕ್ಗಳ ಉಳಿತಾಯ ಖಾತೆಯಲ್ಲಿ 10.51 ಲಕ್ಷ ರೂ. ಹೊಂದಿದ್ದಾರೆ. ಅದೇ ರೀತಿ ಪತ್ನಿ ಉಮಾಗೌಡ ಕೈಯಲ್ಲಿ 5 ಲಕ್ಷ ನಗದು, 3 ಪ್ರತ್ಯೇಕ ಬ್ಯಾಂಕ್ ಉಳಿತಾಯ ಖಾತೆಗಳಲ್ಲಿ 10.49 ಲಕ್ಷ ರೂ. ಇದೆ. ಬಚ್ಚೇಗೌಡ ಬಳಿ 30 ಲಕ್ಷ ರೂ. ಮೌಲ್ಯದ 450 ಗ್ರಾಂ ಚಿನ್ನ, 3 ಕೆ.ಜಿ.ಬೆಳ್ಳಿ ಹೊಂದಿದ್ದು, ಪತ್ನಿ ಬಳಿ ಸುಮಾರು 90 ಲಕ್ಷ ರೂ. ಮೌಲ್ಯದ 950 ಗ್ರಾಂ ಚಿನ್ನ, 5 ಕೆ.ಜಿ.ಬೆಳ್ಳಿಹಾಗೂ ಡೈಮಂಡ್ ಆಭರಣಗಳನ್ನು ಹೊಂದಿದ್ದಾರೆ.

ಒಟ್ಟಾರೆ ಬಚ್ಚೇಗೌಡ ಅವರ ಒಟ್ಟು ಚರಾಸ್ತಿ 60.60 ಲಕ್ಷ ರೂ.ಗಳು ಇದ್ದು, ಪತ್ನಿ ಉಮಾಗೌಡ ಬಳಿ 7.74 ಕೋಟಿ ರೂ. ಚರಾಸ್ತಿಯನ್ನು ಹೊಂದುವ ಮೂಲಕ ಗಂಡನಿಗಿಂತ ಹೆಂಡತಿಯೇ ಶ್ರೀಮಂತರಾಗಿದ್ದಾರೆ. ಬಚ್ಚೇಗೌಡರ ಹೆಸರಿನಲ್ಲಿ ಸುಮಾರು 83 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ (ಕೃಷಿ, ಕೃಷಿಯೇತರ ಭೂಮಿ, ವಸತಿ ಸಮುಚ್ಚಯ, ಬಾಡಿಗೆ ಕಟ್ಟಡಗಳು ಇತರೆ) ಇದ್ದು, 24 ಕೋಟಿ ರೂ.ಮೌಲ್ಯದ ಸ್ಥಿರಾಸ್ತಿಯು ಪತ್ನಿ ಹೆಸರಲ್ಲಿ ಇದೆ. ಇನ್ನು ಮೊಯ್ಲಿ ಯಾವುದೇ ಸಾಲ

ಪುಟ 14 ಕ್ಕೆ

ಸಿಪಿಐಎಂ ಅಭ್ಯರ್ಥಿಗೆ ಹೋರಾಟವೇ ಆಸ್ತಿ!

ಇನ್ನು ಬಡವರು, ಅಸಂಘಟಿತ ಕಾರ್ಮಿಕರು, ನೌಕರರ ಪರವಾಗಿ ಹೋರಾಟಗಳನ್ನು ನಡೆಸಿಕೊಂಡು ಬಂದಿರುವ ಕ್ಷೇತ್ರದ ಸಿಪಿಐಎಂ ಅಭ್ಯರ್ಥಿ ಎಸ್. ವರಲಕ್ಷ್ಮೀ ಅವರಿಗೆ ಹೇಳಿಕೊಳ್ಳುವಂತಹ ಯಾವುದೇ ಆಸ್ತಿ–ಪಾಸ್ತಿ ಇಲ್ಲ. ಬದಲಿಗೆ ಅವರು ತಮ್ಮ ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ರಾಜ್ಯದಲ್ಲಿ ವಿವಿಧ ಹೋರಾಟಗಳ ಸಂದರ್ಭದಲ್ಲಿ ನಮ್ಮ ವಿರುದ್ಧ ವಿವಿಧ ಪೊಲೀಸ್ ಠಾಣೆಯಲ್ಲಿ 4 ಕ್ರಿಮಿನಲ್ ಪ್ರಕರಣ ಹಾಗೂ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದ ಪ್ರಕರಣಗಳು ಇರುವುದಾಗಿ ಘೋಷಿಸಿಕೊಂಡಿದ್ದಾರೆ.

ಇದರ ಜತೆಗೆ ಕೈಯಲ್ಲಿ 5 ಸಾವಿರ ರೂ. ನಗದು ಹಾಗೂ ಬ್ಯಾಂಕ್ ಖಾತೆಯಲ್ಲಿ ಉಳಿತಾಯ 5.10 ಲಕ್ಷ ರೂ. ಹಣ, 60 ಸಾವಿರ ರೂ. ಮೌಲ್ಯದ 21 ಗ್ರಾಂ ಚಿನ್ನಾಭರಣ ಸೇರಿ ಒಟ್ಟು 9.69 ಲಕ್ಷ ರೂ. ಚರಾಸ್ತಿಯನ್ನು ಹೊಂದಿದ್ದಾರೆ. ಕೃಷಿ, ಕೃಷಿಯೇತರ ಭೂಮಿ, ಕಟ್ಟಡ, ವಸತಿ ಸಮುಚ್ಚಯ ಸೇರಿದಂತೆ ಯಾವ ಸ್ಥಿರಾಸ್ತಿಯೂ ಇವರ ಬಳಿ ಇಲ್ಲ. ಸಾಲವೂ ಇಲ್ಲ ಎಂದು ಘೋಷಿಸಿಕೊಂಡಿದ್ದಾರೆ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸಿಪಿಎಂ ಅಭ್ಯರ್ಥಿ........ ಪುಟ 9 ರಿಂದ

ರೈತರ ಸಾವುಗಳನ್ನು ಸಂಭವಿಸಿದವು. ಮೋದಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಶೇ.46 ರೈತರ ಆತ್ಮಹತ್ಯೆಗಳು ಹೆಚ್ಚಾಗಿವೆ ಎಂದು ಮೋದಿ ಸರ್ಕಾರದ ವಿರುದ್ಧ ಗುಡುಗಿದರು.

ಹಿಂದೆ ಈ ಕ್ಷೇತ್ರದಿಂದ ವಿಧಾನಸಭೆಗೆ ಕೆಂಬಾವುಟದಿಂದ ಆಯ್ಕೆಯಾಗಿದ್ದ ಜಿ.ವಿ.ಶ್ರೀರಾಮರೆಡ್ಡಿ ಅವರು ನಡೆಸಿದ ಹೋರಾಟ ಹಾಗೂ ಯೋಜನೆಗಳು ಜನರ ಸಮಸ್ಯೆಗಳ ಪರಿಹರಿಸುವಲ್ಲಿ ಸಹಕಾರಿಯಾಗಿದ್ದವು. ಹಾಗಾಗಿ ಸದಾ ದುಡಿಯುವ ವರ್ಗದ ಜನತೆಯ ಪರವಾಗಿ ಹೋರಾಡುವ ಸಿಪಿಎಂ ಅಭ್ಯರ್ಥಿ ಎಸ್.ವರಲಕ್ಷ್ಮಿ ಅವರಿಗೆ ಮತ ನೀಡಬೇಕು ಎಂದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಸ್ವಾತಿ ಸುಂದರೇಶ್ ಮಾತನಾಡಿ, ಈ ಬಾರಿಯ ಚುನಾವಣೆ ಸ್ವಾತಂತ್ರ್ಯ ನಂತರದ ಮಹತ್ವದ ಚುನಾವಣೆಯಾಗಿದೆ. ಈ ದೇಶದಲ್ಲಿ ಸರ್ವಾಧಿಕಾರಿಯನ್ನು ಅಧಿಕಾರದಿಂದ ಕಿತ್ತೊಗೆಯಬೇಕಿದೆ. ನಮ್ಮ ದೇಶದ ಸಂವಿಧಾನ, ಪ್ರಜಾಪ್ರಭುತ್ವ, ಕಾರ್ಮಿಕ ಹಕ್ಕುಗಳನ್ನು ಉಳಿಸಿಕೊಳ್ಳಲು ಮೋದಿಯನ್ನು ಅಧಿಕಾರದಿಂದ ಕಿತ್ತೊಗೆಯಬೇಕಿದೆ ಎಂದು ಅವರು ಕರೆ ನೀಡಿದರು.

ಈ ದೇಶದಲ್ಲಿ ರೈತ, ಕಾರ್ಮಿಕ, ಮಹಿಳೆ, ದಲಿತ, ವಿದ್ಯಾರ್ಥಿ–ಯುವಜನರ ಪರವಾಗಿ ಹೋರಾಡುವವರನ್ನು ಸಂಸತ್ ಗೆ ಆಯ್ಕೆ ಮಾಡಿ ಕಳಿಸಬೇಕಿದೆ ಎಂದು ಹೇಳಿದರು.

ಅಭ್ಯರ್ಥಿ ವರಲಕ್ಷ್ಮಿ ಮಾತನಾಡಿ, ಚುನಾವಣೆಯಲ್ಲಿ ರೈತರ ಸಮಸ್ಯೆಗಳ, ಕಾರ್ಮಿಕರ ಸಮಸ್ಯೆಗಳು, ವಿದ್ಯಾರ್ಥಿ–ಯುವಜನರ ಸಮಸ್ಯೆಗಳ ಬಗ್ಗೆ ಚರ್ಚೆಯಾಗುತ್ತಿಲ್ಲ. ದೇಶದಲ್ಲಿ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ನಿರುದ್ಯೋಗ, ಹಸಿವು, ಬಡತನದ ಬಗ್ಗೆ ಚರ್ಚೆಯಾಗುತ್ತಿಲ್ಲ. ಬದಲಾಗಿ ಜಾತಿ, ಧರ್ಮ, ಹಣದ ಬಗ್ಗೆ ಚರ್ಚೆ ನಡೆಯುತ್ತಿದೆ. ಮಾನವೀಯತೆ ಎತ್ತಿಯುಡಿಯುವವರನ್ನು ಜನರು ಇಂದು ಆಯ್ಕೆ ಮಾಡಬೇಕಾದ ತುರ್ತು ಇದೆ ಎಂದರು.

ಈ ಭಾಗದ ರೈತರ ಪ್ರಮುಖ ಬೇಡಿಕೆಯಾದ ಶಾಶ್ವತ ನೀರಾವರಿಗಾಗಿ ಹಿಂದಿನಿಂದಲೂ ಹೋರಾಟ ನಡೆಸಿಕೊಂಡು ಬಂದಿದ್ದು ಸಿಪಿಎಂ ಮಾತ್ರ. ಸಿಪಿಎಂನ ಹೋರಾಟದ ಭಾಗವಾಗಿ ಉದ್ಯೋಗ ಖಾತ್ರಿ ಯೋಜನೆ ಜಾರಿಯಾಗಿದೆ. ಮುಂದೆಯೂ ಸಹ ಜನರ ಧ್ವನಿಯಾಗಿ ಸಿಪಿಎಂ ಕಲಸ ಮಾಡುತ್ತೆ. ಹೆಚ್ಚಿನ ಮಟ್ಟದ ಕೆಲಸ ಮಾಡಲು ಸಿಪಿಎಂ ಅಭ್ಯರ್ಥಿಯಾದ ನನ್ನನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಸಿಪಿಎಂ ಪಕ್ಷದ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಅವರು ಮಾತನಾಡಿ, ಕೇಂದ್ರ ಸರ್ಕಾರದ ಆಡಳಿತ ವೈಫಲ್ಯದ ಕುರಿತು ಮಾತನಾಡಿ, ಸಿಪಿಎಂ ಅಭ್ಯರ್ಥಿ ಎಸ್.ವರಲಕ್ಷ್ಮಿಗೆ ಮತ ನೀಡಿ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಿಪಿಎಂನ ರಾಜ್ಯ ಕಾರ್ಯದರ್ಶಿ ಯು.ಬಸವರಾಜ್, ಮುಖಂಡರಾದ ಮಾರುತಿ ಮಾನ್ಪಡೆ, ಕೆ.ಎನ್.ಉಮೇಶ್, ಗೀತಾ, ಚೆನ್ನರಾಪ್ಪ, ಮೀನಾಕ್ಷಿ ಸುಂದರಂ, ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿ ಬಿ.ಜಯರಾಮರೆಡ್ಡಿ, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಹೇಮಚಂದ್ರ ಸೇರಿದಂತೆ ಸಾವಿರಾರು ಕಾರ್ಯಕರ್ತರು ಉಪಸ್ಥಿತರಿದ್ದರು.





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**